ಸಂಪುಟ 15
ಸಂಚಿಕೆ 10

ಐಕ್ಯರಂಗ

14 ಮಾರ್ಚ್ 1993
ರೂ. 2.00

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಹೊಸ ಆರ್ಥಿಕ ನೀತಿಗಳ ಅಪಾಯದ ಒಳನೋಟ ನೀಡಿರುವ ಬಜೆಟ್

-ಜ್ಯೋತಿಬಸು

ಈಗ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು, ಅವು ಅಧಿಕಾರದಲ್ಲಿ ಇರಲಿ, ಇರದಿರಲಿ ಆರ್ಥಿಕ ಪ್ರಶ್ನೆಗಳತ್ತ ಗಮನ ಹರಿಸಲೇಬೇಕಾಗಿದೆ. ಏಕೆಂದರೆ 1993 ರ ಬಜೆಟ್ ಬಗ್ಗೆ ಸರಕಾರ ಬಹಳ ನಿರೀಕ್ಷೆಯಿಟ್ಟುಕೊಂಡಂತಿದೆ. ಆದರೆ ಬೇಗನೇ ಅದರಲ್ಲಿ ಕೆಲವರು ಈಗ ಕಾಯುತ್ತಿರುವ ಆಕರ್ಷಣೆ ಕಾಣೆಯಾಗಿ ಮುಂಬರುವ ದಿನಗಳಲ್ಲಿ ಸಾಮಾನ್ಯ ಜನರನ್ನು ತೀವ್ರವಾಗಿ ತಟ್ಟಲಾರಂಭಿಸುತ್ತದೆ ಎಂದು 'ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ, ಹಾಗೂ ಪಶ್ಚಿಮಬಂಗಾಳದ ಮುಖ್ಯಮಂತ್ರಿಗಳೂ ಆದ ಕಾಂ. ಜ್ಯೋತಿಬಸು ಹೇಳಿದ್ದಾರೆ.

ಇದು ಬಿ.ಜೆ.ಪಿ.ಗೂ ಅನ್ವಯಿಸುತ್ತದೆ. ಅದು ಕೂಡಾ ಇಂದಿನ ದಿನಗಳಲ್ಲಿ ಆರ್ಥಿಕ ಪ್ರಶ್ನೆಗಳ ಬಗ್ಗೆ ಮಾತನಾಡಲಾರಂಭಿಸಿದೆ. ಏಕೆಂದರೆ ಆರ್ಥಿಕ ಪ್ರಶ್ನೆಗಳು ಧಾರ್ಮಿಕ ಪ್ರಶ್ನೆಗಳಿಗಿಂತ ಎಷ್ಟೋ ಹೆಚ್ಚು ಪಾಲು ಮಹತ್ವದ ಹಾಗೂ ನಿರ್ಣಾಯಕವಾದ ಪ್ರಶ್ನೆಗಳು ಎಂದು ಜ್ಯೋತಿಬಸು ಹೇಳಿದ್ದಾರೆ.

ಸರಳ ಮಾತಿನಲ್ಲಿ ಹೇಳುವುದಾದರೆ, ಈ ಬಜೆಟ್ ರಾವ್ ಸರಕಾರದ ಆರ್ಥಿಕ ನೀತಿಗಳಲ್ಲಿರುವ ಅಪಾಯದ ಒಂದು ಒಳನೋಟ ನೀಡುತ್ತದೆ. ವಿಪರೀತ ವಾಣಿಜ್ಯ ಸಾಲಗಳು, ಅಭೂತಪೂರ್ವ ಕಸ್ಟಮ್ಸ್ ಸುಂಕ ರಿಯಾಯ್ತಿಗಳು, ರಾಷ್ಟ್ರೀಕೃತ ಬ್ಯಾಂಕುಗಳ ಒಡೆತನದ ಸ್ವರೂಪದಲ್ಲಿ ಬದಲಾವಣೆ, ಮಸುಕುಮಸುಕಾದ ಸಾಮಾಜಿಕ ಆದ್ಯತೆಗಳು, ಹಾಗೂ ಬಜೆಟ್ ಮೊದಲೇ ರೈಲು ದರ, ಸಾಗಾಣಿಕೆ, ಕಲ್ಲಿದ್ದಲು, ಸಕ್ಕರೆ ಬೆಲೆಗಳ ಏರಿಕೆ ಇವೆಲ್ಲಾ ಐ.ಎಂ.ಎಫ್.ಗೆ ಸಂಪೂರ್ಣ ಶರಣಾದುದನ್ನು ತೋರಿಸುತ್ತದೆ. ಇಷ್ಟೇ ಅಲ್ಲ, ಒಂದೊಮ್ಮೆ ಸಹಜವಾಗಿಯೋ ನೆಹರೂ ಸಮಾಜವಾದದ ಬಗ್ಗೆ ಎದೆತಟ್ಟಿಕೊಂಡು ಮಾತನಾಡುತ್ತಿದ್ದ ಕಾಂಗ್ರೆಸ್(ಐ) ಈಗ ಮಾರುಕಟ್ಟೆ ಶಕ್ತಿಗಳ ಎದುರು ಕಕ್ಕಾಬಿಕ್ಕಿಯಾಗಿ ಆ ಬಗ್ಗೆ ಯೋಚಿಸಲೂ ಅದಕ್ಕೆ ಸಮಯವಿಲ್ಲದಂತೆ ಕಾಣುತ್ತಿದೆ ಎಂದು ಜ್ಯೋತಿಬಸು ಹೀಯಾಳಿಸಿದ್ದಾರೆ.

ಇದುವರೆಗೂ ಈ ಸರಕಾರಕ್ಕೆ ನಿರುದ್ಯೋಗದಂತಹ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಯಾವುದೇ ಸ್ಪಷ್ಟ ದಿಕ್ಕು ತೋರಲು ಆಗಿಲ್ಲ ಎಂದೂ ಗಮನಿಸಬೇಕು. ನಿರುದ್ಯೋಗ ಸಮಸ್ಯೆಯಂತೂ ಸರಕಾರ ಪ್ರಸ್ತಾಪಿಸಿರುವ 'ಎಕ್ಸಿಟ್ ಪಾಲಿಸಿ' ಯಿಂದ ಇನ್ನಷ್ಟು ಹದಗೆಡುತ್ತದೆ ಎಂದು ಹೇಳಿದ ಜ್ಯೋತಿಬಸುರವರು ನರಸಿಂಹರಾವ್ ಸರಕಾರದ ಈ ಆತ್ಮಹತ್ಯೆಯುತ್ತ ಸಾಗಿರುವ ಆರ್ಥಿಕನೀತಿಗಳ ವಿರುದ್ಧ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಪ್ರಚಾರಾಂದೋಳನ ಈಗಾಗಲೇ ಆರಂಭವಾಗಿದೆ ಎಂದರು. ಈ ಆಂದೋಳನ ಯಾವುದೇ ರಾಜ್ಯಕ್ಕಷ್ಟೇ ಸೀಮಿತವಾಗಿರುವುದಿಲ್ಲ. ನಾವು ಕಾಂಗ್ರೆಸ್(ಐ)ನ ಆರ್ಥಿಕ ನೀತಿ, ಅದರೊಳಗೆ ಹುದುಗಿರುವ, ಹೊರಗೆ ಕಾಣಿಸುತ್ತಿರುವ ಅಪಾಯಗಳು, ಭಾರತದ ಕೈಗಾರಿಕೆ ದಿವಾಳಿಕೆ, ಸಾಲದಹೊರೆ ಹಾಗೂ ಕ್ರಮೇಣ ಸಾರ್ವಜನಿಕ ವಲಯವನ್ನು ದುರ್ಬಲಗೊಳಿಸುವ ಪ್ರವೃತ್ತಿ ಇವನ್ನೆಲ್ಲಾ ಕುರಿತಂತೆ ಒಂದು ದಸ್ತಾವೇಜು ತಯಾರಿಸುತ್ತಿದ್ದೇವೆ. ಕೇಂದ್ರ ಸರಕಾರದ ಈ ರೀತಿಯ ವರ್ತನೆ ಮುಂದುವರಿದರೆ ತಮಗೂ ಅಪಾಯ ಎಂಬ ಅರಿವು ಮೂಡಿರುವ ಬೇರೆ ರಾಜ್ಯ ಸರಕಾರಗಳನ್ನೂ ಈ ಹೋರಾಟದಲ್ಲಿ ಒಳಗೊಂಡು ಅದಕ್ಕೆ ವ್ಯಾಪಕ ಸ್ವರೂಪ ಕೊಡುವುದಾಗಿಯೂ ಜ್ಯೋತಿಬಸು ಹೇಳಿದ್ದಾರೆ.

ತ್ರಿಪುರಾದಲ್ಲಿ ಒಂದು ಬಹುಪಾಲು ಬಾಳಬಲ್ಲ ರಾಜಕೀಯ, ಆಡಳಿತ ಸುಧಾರಣೆಗಾಗಿ ಒತ್ತಡ ತರಲು ಮಾತ್ರವೇ ಎಡಪಕ್ಷಗಳು, ಜನತಾದಳ ಹಾಗೂ ಇತರ ಪ್ರಜಾಪ್ರಭುತ್ವ ಶಕ್ತಿಗಳು ರಾವ್ ಸರಕಾರದ ವಿರುದ್ಧ ಈ ಆಂದೋಳನ ಆರಂಭಿಸಿವೆ ಎಂಬುದು ತಪ್ಪು ಕಲ್ಪನೆ ; ಕಾಂಗ್ರೆಸ್ ತ್ರಿಪುರಾದಲ್ಲಿ ಜನರ ವಿಶ್ವಾಸ ಕಳಕೊಂಡಿದೆಯೆಂಬುದು, ಅಲ್ಲಿ ತಕ್ಷಣ ಸುಧಾರಣೆಗಳ ಅಗತ್ಯವಿದೆ ಎಂಬುದು ನಿಜ. ಆದರೆ ಎಡ-ಪ್ರಜಾಪ್ರಭುತ್ವ ಶಕ್ತಿಗಳು ಯಾವುದೇ ಕಾರಣಕ್ಕೆ ಆರ್ಥಿಕ ದಾರಿಯನ್ನು ಸರಿಪಡಿಸುವ ವಿಷಯದಲ್ಲಾಗಲೀ, ತ್ರಿಪುರಾದಲ್ಲಿನ ಸುಧಾರಣೆಗಳ ವಿಷಯದಲ್ಲಾಗಲೀ ಯಾವುದೇ ರಾಜಿಗೆ ಸಿದ್ಧವಿಲ್ಲ ಎಂದು ಜ್ಯೋತಿಬಸು ಒತ್ತಿ ಹೇಳಿದರು.

ನಾವು ಕಾಣುವಂತೆ ಕಾಂಗ್ರೆಸ್(ಐ) ಹಾಗೂ ಎಡ-ಜಾತ್ಯಾತೀತ ಶಕ್ತಿಗಳ ನಡುವೆ ಒಂದು ವಿಷಯದಲ್ಲಿ ಮಾತ್ರ ಸಮಾನ ಅಭಿಪ್ರಾಯವಿದೆ- ಅದೇಂದರೆ ಸದ್ಯದ ಕ್ಷುಬ್ಧ ವಾತಾವರಣದಲ್ಲಿ ಚುನಾವಣೆ ನಡೆಯಬಾರದು ಎಂದು. ಆದರೆ ಇದೊಂದೇ ಸಮಾನ ಅಭಿಪ್ರಾಯದ ಅಂಶ ಎಂಬುದನ್ನು, ಆರ್ಥಿಕ ದಾರಿಯನ್ನು ಸರಿಪಡಿಸುವುದು ದೇಶದ ಬಗ್ಗೆ ತಾನು ಹೊಂದಿರುವ ಜವಾಬ್ದಾರಿ ಎಂಬುದನ್ನು ಕಾಂಗ್ರೆಸ್ (ಐ) ಅರಿಯಬೇಕು ಎಂದ ಕಾಂ. ಜ್ಯೋತಿಬಸು ನಿಜವಾಗಿಯೂ ರಾವ್ ಸರಕಾರಕ್ಕೆ ಬಜೆಟ್ ಮೇಲೆ ನಮ್ಮ ಬೆಂಬಲ ಬೇಕಿದ್ದರೆ ಆರ್ಥಿಕ ನೀತಿಗಳನ್ನು ಸರಿಪಡಿಸಬೇಕು. ಏನೂ ಮಾಡಿದರೂ ನಾವು ಬೆಂಬಲನೀಡುತ್ತೇವೆ ಎಂಬ ಭಾವನೆ ಬೇಡ ಎಂದು ಎಚ್ಚರಿಸಿದರು.

"ಬಜೆಟ್ ಸೂಚನೆಗಳ ಹಿಂದಿರುವ ನೀತಿಗಳನ್ನು ವಿರೋಧಿಸಿ"

ಸಿಪಿಐ(ಎಂ) ರಾಜ್ಯ ಸಮಿತಿ ಕರೆ

ಡಾ.ಮನಮೋಹನ್‌ಸಿಂಗ್‌ರು ಫೆಬ್ರವರಿ 27ರಂದು ಲೋಕಸಭೆಯಲ್ಲಿ ಮಂಡಿಸಿದ ಬಜೆಟ್ ನಿಶ್ಚಿತವಾಗಿಯೂ ಐಎಂಎಫ್ ಹೇರಿದ್ದ ಕಠಿಣ ಶರತ್ತುಗಳಿಗನುಗುಣವಾಗಿದೆ. ಅದು ರೂ. 4000 ಕೋಟಿಯಷ್ಟು ಕಸ್ಟಮ್ಸ್ ಕರವನ್ನು ಕಡಿಮೆ ಮಾಡಿ ಜಗತ್ತಿನ ಬಹುರಾಷ್ಟ್ರೀಯ ಕಂಪೆನಿಗಳಿಗೆ ನಮ್ಮ ದೇಶದಲ್ಲಿ ಮುಕ್ತ ಮಾರುಕಟ್ಟೆಯನ್ನು ಒದಗಿಸಿದೆ. ಅದೇ ವೇಳೆ, ದೇಶೀಯ ಕೈಗಾರಿಕೆಗಳಿಗೆ ಅದರಲ್ಲೂ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ತೀವ್ರ ಆಘಾತವನ್ನುಂಟು ಮಾಡಿದೆ. ಹತ್ತಿ ಗಿರಣಿ, ಪೆಟ್ರೋಲಿಯಂ ಉತ್ಪನ್ನಗಳು ತಯಾರಿಸುವ ಕಂಪೆನಿಗಳಿಗೂ ತೀವ್ರ ಹಾನಿಕರವಾಗಿದೆ ಎಂದು ಸಿಪಿಐ(ಎಂ) ರಾಜ್ಯ ಸೆಕ್ರೆಟರಿಯೆಟ್ ಹೇಳಿದೆ.

ಡಾ.ಮನಮೋಹನ್‌ಸಿಂಗ್‌ರು ರೂ. 3000 ಕೋಟಿಯಷ್ಟು ಅಬ್ಕಾರಿ ತೆರಿಗೆಯಲ್ಲಿ ರಿಯಾಯಿತಿ ತೋರಿಸಿ ಪೂರೈಕೆಗೆ ವಸ್ತುಗಳ ಬೇಡಿಕೆ ಹೆಚ್ಚುವಂತೆ ಮಾಡಿರುವುದಾದರೂ ಈ ರಿಯಾಯಿತಿಗಳು ನಿಜವಾಗಿ ಈಪತ್ತಿನ ಉಕ್ಕು, ಕಲ್ಲಿದ್ದಲು, ವಿದ್ಯುಚ್ಛಕ್ತಿ ಇತ್ಯಾದಿಗಳ ಬೆಲೆಗಳು ಏರಿದ ಸಂದರ್ಭದಲ್ಲಿ ಮಾತ್ರವಲ್ಲ ಈಗಲೇ ಆದಾಯ ಕೊರತೆಯಿಂದ ನರಳುತ್ತಿರುವ ರಾಜ್ಯ ಸರಕಾರಗಳ ಆದಾಯವನ್ನು ಇನ್ನಷ್ಟು ಕಡಿಮೆ ಮಾಡಲಿಕ್ಕಿವೆ.

ಡಾ.ಮನಮೋಹನಸಿಂಗ್‌ರು ರಾಷ್ಟ್ರೀಯ ನವೀಕರಣ ನಿಧಿಯಲ್ಲಿ ಮೀಸಲಿಟ್ಟಿರುವುದು ದೇಶದಲ್ಲಿ ಈಗಾಗಲೇ ಅಧಿಕವಾಗಿರುವ ನಿರುದ್ಯೋಗದ ಸಮಸ್ಯೆ ಇನ್ನೂ ತೀವ್ರವಾಗಿ ಹೆಚ್ಚಾಗಲಿರುವ ಭವಿಷ್ಯದ ಸೂಚಕವಾಗಿದೆ. 1993-94 ನೇ ಇಸವಿಯಲ್ಲಿ ಕೇಂದ್ರ ನೌಕರರಿಗೆ ತುಟ್ಟಿಭತ್ಯೆ ಮತ್ತು ಬೋನಸ್‌ನಲ್ಲಿ ಬಾಬ್ತು ಬಜೆಟ್‌ನಲ್ಲಿ ಹಣ ಕಾಯ್ದಿರಿಸದಿರುವುದು ಮುಂದಿನ ದಿನಗಳಲ್ಲಿ ಕೂಲಿ ಸ್ಥಗಿತವಾಗುವ ಸೂಚಕವೂ ಆಗಬಹುದು ಎಂದು ರಾಜ್ಯ ಕಾರ್ಯದರ್ಶಿ ಮಂಡಲಿ ಎಚ್ಚರಿಸಿದೆ.

ರೂ. 7000 ಕೋಟಿಯಷ್ಟು ಆದಾಯವನ್ನು ಕಡಿಮೆ ಮಾಡಿ, ಐಎಂಎಫ್‌ನಿಂದ 9 ಶತಕೋಟಿ ಡಾಲರ್ ಸಾಲಕ್ಕೆ ದೇಶವನ್ನು ಗುರಿ ಮಾಡಿದ ಡಾ. ಮನಮೋಹನ್‌ಸಿಂಗ್ ಬಜೆಟ್ ಖಂಡಿತವಾಗಿಯೂ ನಮ್ಮ ದೇಶವನ್ನು ಸಾಲದ ಕೂಪಕ್ಕೆ ಇನ್ನೂ ಆಳವಾಗಿ ದೂಡುವುದರಲ್ಲಿ ಏನೂ ಸಂಶಯವಿಲ್ಲ.

ರೂಪಾಯಿಯಲ್ಲಿ ನೂರು ಶೇಕಡಾ ಇತರ ಕರೆನ್ಸಿಗಳಿಗೆ ವಿನಿಮಯ ಮಾಡಲಾಗುವುದು ಎಂಬ ಧೋರಣೆಯು ನಮ್ಮ ದೇಶದ ಕರೆನ್ಸಿಯು ತೀವ್ರ ಕುಸಿತಕ್ಕೆ(ರಫ್ತಾದಲ್ಲಾದಂತೆ) ಮಾಡಬಹುದು. ಪರಿಣಾಮವಾಗಿ ಎಷ್ಟು ರಫ್ತು ಮಾಡಿದರೂ ಸಾಕಷ್ಟು ವಿದೇಶೀ ವಿನಿಮಯ ಸಂಪಾದಿಸುವ ಸ್ಥಿತಿ ನಮ್ಮಲ್ಲಿ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗುವುದು. ಡಾ.ಮನಮೋಹನಸಿಂಗ್‌ರು ಹಲವು ಅಂಕಿ ಸಂಖ್ಯೆಗಳನ್ನು ಬಳಸಿದ ವಿಧಾನದಿಂದ ಈ ಬಜೆಟ್ ನಿಜವಾಗಿ ಆರ್ಥಿಕ ಸ್ಥಿತಿಯನ್ನು ದೇಶದ ಜನತೆಯಿಂದ ಮರೆಮಾಚುತ್ತಿದೆ. ಉದಾಹರಣೆಗೆ 32 ಕೋಟಿ ಯೋಜನಾ ವೆಚ್ಚವನ್ನು 1993-94ರಲ್ಲಿ ಹಿಂದಿನ ವರ್ಷಕ್ಕಿಂತ ಅಧಿಕವೆಂದು ಹೇಳಲಾಗಿದೆಯಾದರೂ, ಇದು ಒಂದು ತಂತ್ರ ಅಷ್ಟೇ. ಅವರು ಹಿಂದಿನ ವರ್ಷದ ಬಜೆಟ್ ಅಂದಾಜು(ಕಡಿಮೆ) ಮೊಬಲಗನ್ನು ಪರಿಗಣನೆಗೆ ತೆಗೆದುಕೊಂಡಿದ್ದಾರೆ. ಅವರು ಹಿಂದಿನ ವರ್ಷದ ನಿಜವಾದ ರಿಸಿಪ್ಟ್‌ನಲ್ಲಿ ಗಣನೆಗೆ ತೆಗೆದುಕೊಂಡರೆ ಅದು ಕೇವಲ 27 ಶೇ. ಮೊತ್ತವಾಗುವುದು. ರೂಪಾಯಿ ಅಪಮೌಲ್ಯವನ್ನು ಗಣನೆಗೆ ತೆಗೆದುಕೊಂಡರೆ ಶೇಕಡಾ ಇನ್ನೂ ಕಡಿಮೆಯಾಗುವುದು.

ಡಾ.ಮನಮೋಹನಸಿಂಗ್‌ರು ತಮ್ಮ ಹಿಂದಿನ ಬಜೆಟ್‌ಗಳ ಮೇಲೆ ಬಂದ ಟೀಕೆಯನ್ನು ಗಮನದಲ್ಲಿಟ್ಟು ಈ ಬಜೆಟ್‌ನಲ್ಲಿ ವಿದ್ಯಾಭ್ಯಾಸ, ಆರೋಗ್ಯ ಮತ್ತು ರೋಜ್‌ಗಾರ್ ಯೋಜನೆಗೆ ಸ್ವಲ್ಪ ಅಧಿಕ ಮೊಬಲಗನ್ನು ಮೀಸಲಿಟ್ಟಿದ್ದಾರೆ. ಆದರೆ ಜನರ ಅನುಭವವನ್ನು ಗಣನೆಗೆ ತೆಗೆದುಕೊಂಡರೆ ಈ ಬಾಬ್ತಿನ ಮೊಬಲಗುಗಳನ್ನು ಕಾಗದದ ಮೇಲೇ ಖರ್ಚಾಗದೆ ಉಳಿಯುವ ಸಂದರ್ಭವೇ ಹೆಚ್ಚು.

ಕೊನೆಯದಾಗಿ ಬಜೆಟ್ ಪೂರ್ವದಲ್ಲಿ ಕಲ್ಲಿದ್ದಲು, ಉಕ್ಕು ಗೋಧಿ, ಅಕ್ಕಿ ಸಕ್ಕರೆ, ಇತ್ಯಾದಿಗಳ ಬೆಲೆಯನ್ನು ಹೆಚ್ಚಿಸಿರುವುದನ್ನು ಪರಿಗಣನೆಗೆ ತೆಗೆದುಕೊಂಡರೆ, ರೈಲ್ವೇ ಬಜೆಟ್‌ನಲ್ಲಿ ಆಹಾರ ಧಾನ್ಯಗಳ ರವಾನೆಗೆ ಈ ತನಕ ಕೊಡಲಾದ ರಿಯಾಯಿತಿಗಳನ್ನು ಕೈ ಬಿಟ್ಟಿರುವುದನ್ನು ಪ್ರಯಾಣಿಕರ ಟಿಕೆಟ್ ದರಗಳನ್ನು ಶೇಕಡ 10ರಿಂದ 25ರವರೆಗೆ ಹೆಚ್ಚಿಸಿರುವುದನ್ನು ನೋಡಿದರೆ, ಸಾಮಾನ್ಯ ಜನತೆಗೆ ಯಾವ ರೀತಿಯಲ್ಲೂ ಈ ಬಜೆಟ್ ಪರಿಹಾರ ಕೊಡುತ್ತಿಲ್ಲ ಮಾತ್ರವಲ್ಲ, ಒಟ್ಟಿನಲ್ಲಿ ಬೆಲೆಯೇರಿಕೆ ಪ್ರವೃತ್ತಿಯನ್ನು ಯಾವ ರೀತಿಯಲ್ಲೂ ಕಡಿಮೆ ಮಾಡುವುದಿಲ್ಲ.

ಆದ್ದರಿಂದ ಈಬಜೆಟ್ ನಿಜವಾಗಿಯೂ ಬಹುರಾಷ್ಟ್ರೀಯ ಕಂಪೆನಿಗಳಿಗೆ, ಸ್ವಲ್ಪ ಗುತ್ತೇದಾರಿ ಬಂಡವಾಳಶಾಹಿಗಳಿಗೆ ಅನುಕೂಲವೇ ಹೊರತು ದೇಶದ ಅಭಿವೃದ್ಧಿಗೆ ದೇಶದ ಕೈಗಾರಿಕಾ ಬೆಳವಣಿಗೆಗೆ ಮತ್ತು ದೇಶದ ಸಾಮಾನ್ಯ ಬಡ ಜನತೆಗೆ ಏನೇನೂ ಅನುಕೂಲಕರವಾಗಿಲ್ಲ ಎಂದು ಕಾರ್ಯದರ್ಶಿ ಮಂಡಳಿ ಹೇಳಿದೆ.

ಆದ ಕಾರಣ, ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಈ ಬಜೆಟ್ ಸೂಚನೆಗಳನ್ನು ತೀವ್ರವಾಗಿ ವಿರೋಧಿಸುತ್ತದೆ ಮತ್ತು ಈ ಸೂಚನೆಗಳ ವಿರುದ್ಧ ಹಾಗೂ ಅವುಗಳ ಹಿಂದಿರುವ ಆರ್ಥಿಕ ತತ್ವವನ್ನು ವಿರೋಧಿಸಲು ಜನತೆ ಮುಂದಾಗಬೇಕೆಂದು ಕರೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಕರೆ ನೀಡಿದೆ.

ವಾರದ ನುಡಿ

ಈ ಬಜೆಟ್ ಧುಮುಕಿರುವುದು ಅಂಧಕಾರದೊಳಗಲ್ಲ, ನರಕದೊಳಗೇ. ಆರ್ಥಿಕ ರಂಗದಲ್ಲಿ ಏನು ಆಗಲಿದೆಯೋ ಅದು ಅಯೋಧ್ಯೆಯಲ್ಲಿ ನಡೆದುದಕ್ಕಿಂತಲೂ ಹೆಚ್ಚು ತೀವ್ರವಾಗಿರುತ್ತದೆ.

ಪ್ರೊ. ಪಿ.ಆರ್. ಬ್ರಹ್ಮಾನಂದ
ಆರ್ಥಿಕ ತಜ್ಞ



ವಿದೇಶೀ ಬಂಡವಾಳದ ಬಾಕು ತೂರಿಸಿ ದೇಶದ ಆರ್ಥಿಕ ಸಾಯುವಂತೆ ಮಾಡುತ್ತಾ ಹಣಕಾಸು ಮಂತ್ರಿಗಳು ಹೇಳುತ್ತಾರೆ- ವಿದೇಶಿ ಬಂಡವಾಳ ಒಳಹೊಕ್ಕರೆ ಎಲ್ಲವೂ ಸರಿಯಾಗುತ್ತದೆ!- 'ಸ್ಟೇಟ್ಸ್‌ಮನ್'ನಲ್ಲಿ ರಾಜೇಂದ್ರಪುರಿ ವ್ಯಂಗಚಿತ್ರ

ಇದು ನಿಮಗೆ ಗೊತ್ತೇ?



ಆರ್.ಎಸ್.ಎಸ್. ಬಗ್ಗೆ ಕೆಲವು ವಾಸ್ತವಾಂಶಗಳು

* ಆರ್.ಎಸ್.ಎಸ್. ಹುಟ್ಟಿದ್ದೇ ಕೋಮು ದ್ವೇಷದ ಹಿನ್ನೆಲೆಯಲ್ಲಿ

ಒಂದು ಕಡೆ ಬಂಗಾಳದ ಮುಸ್ಲಿಂ ಭೂಮಾಲೀಕರನ್ನು, ನವಾಬರುಗಳನ್ನು, ಇನ್ನೊಂದು ಕಡೆ ಹಿಂದೂ ಭೂಮಾಲೀಕರನ್ನು, ರಾಜರುಗಳನ್ನು ಬುಟ್ಟಿಗೆ ಹಾಕಿಕೊಂಡು ಬ್ರಿಟಿಷರು ಒಡೆದು ಆಳುವ ನೀತಿ ಯಿತಶ್ಚ ಗಳಿಸುತ್ತಿದ್ದಾಗ ಗಾಂಧೀಜಿ ಆರಂಭಿಸಿದ ಖಿಲಾಫತ್-ಅಸಹಕಾರ ಚಳುವಳಿ 1857ರ ಸ್ವಾತಂತ್ರ್ಯ ಯುದ್ಧದ ನಂತರ ಮೊದಲ ಬಾರಿ ಅಮೋಘ ಹಿಂದೂ-ಮುಸ್ಲಿಂ ಐಕ್ಯತೆ ಬೆಸೆದು ಬ್ರಿಟಿಷರನ್ನು ನಡುಗಿಸಿತು. ಈ ಆಂದೋಲನ ಎಷ್ಟು ವ್ಯಾಪಕಗೊಂಡಿತೆಂದರೆ ಬ್ರಿಟಿಷರಷ್ಟೇ ಅಲ್ಲ ರಾಷ್ಟ್ರೀಯ ಆಂದೋಲನದ ಬೂರ್ಜ್ವಾ ನಾಯಕತ್ವಕ್ಕೂ ದಿಗಿಲಾಯಿತು. ಅದರಿಂದಾಗಿ ಫೆಬ್ರುವರಿ 1922ರಲ್ಲಿ ಚೌರಿಚೌರಾದಲ್ಲಿ ಸಿಟ್ಟಿಗೆದ್ದ ಜನ ಪೋಲೀಸ್ ಠಾಣೆಯೊಂದನ್ನು ಸುಟ್ಟರೆಂಬ ನೆಪ ಹೂಡಿ ಅದನ್ನು ವಾಪಾಸು ತೆಗೆದುಕೊಳ್ಳಲಾಯಿತು. ಪರಿಣಾಮವೆಂದರೆ ರಾಷ್ಟ್ರೀಯ ಆಂದೋಲನದ ಉಬ್ಬರ ಮಾಯವಾಯಿತು. ಖಿಲಾಫತ್ ಆಂದೋಲನ ಚುರುಚೂರಾಯಿತು. ದೇಶದ ಎಲ್ಲೆಡೆ ಕೋಮು ದಂಗೆಗಳು ಭುಗಿಲೆದ್ದವು. ಬ್ರಿಟಿಷರಿಗೆ ಅವರು ಕಾದಿದ್ದ ಅವಕಾಶ ದೊರೆಯಿತು. ಹಿಂದೂ ಮಹಾಸಭಾ 'ಹಿಂದೂ' ಹಿತಾಸಕ್ತಿಗಳ ರಕ್ಷಣೆಯ ಆಂದೋಲನ ಆರಂಭಿಸಲು ನಿರ್ಧರಿಸಿದಾಗ ಮುಸ್ಲಿಂ ಲೀಗ್‌ಗೂ ಹೊಸ ಜನ್ಮ ದೊರತಂತಾಯಿತು.

ಈ ಹಿನ್ನೆಲೆಯಲ್ಲಿ, 1923ರಲ್ಲಿ ಅವರೇ 'ಹಿಂದೂ ರಕ್ಷಣೆ'ಯ ಹೆಸರಿನಲ್ಲಿ ನಾಗಪುರದಲ್ಲಿ ಸಂಘಟಿಸಿದ ಕೋಮು ದಂಗೆಗಳ ಹಿನ್ನೆಲೆಯಲ್ಲಿ ಮೊದಲಿಂದಲೂ ಗಾಂಧೀಜಿಯ ಆಂದೋಲನವನ್ನು ವಿರೋಧಿಸುತ್ತಿದ್ದ ಹೆಡ್ಗೆವಾರ್ ಮತ್ತು ಇತರ ಮರಾಠಾ ಬ್ರಾಹ್ಮಣರು ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು 1925ರ ವಿಜಯದಶಮಿಯ ದಿನದಂದು ಸ್ಥಾಪಿಸಿದರು. "ಅಸಹಕಾರ ಆಂದೋಲನ ಹುಟ್ಟಿಸಿದ ದುಷ್ಟ ಶಕ್ತಿಗಳು ಅಪಾಯಕಾರಿಯಾಗಿ ತಲೆ ಎತ್ತುತ್ತಿವೆ. ಅಸಹಕಾರದ ಹಾಲು ಕುಡಿದ ಮುಸ್ಲಿಂ ಸರ್ಪಗಳು ವಿಷ ಕಾರುತ್ತಿವೆ" ಎಂದು ಆರ್‌ಎಸ್‌ಎಸ್ ಸ್ಥಾಪನೆಯ ಸಂದರ್ಭವನ್ನು ಆರ್‌ಎಸ್‌ಎಸ್ ಇತಿಹಾಸ ಬರೆದ ಸಿ.ಪಿ. ಭಿಷಿಕರ್ ಹೇಳಿದ್ದಾರೆ.

ಸೆಪ್ಟೆಂಬರ್ 1927ರಲ್ಲಿ ನಾಗಪುರದಲ್ಲಿ ಮತ್ತೆ ದಂಗೆ ಸೃಷ್ಟಿಸಿ ಮೊದಲ 'ವಿಜಯ' ಗಳಿಸುವ ಮೊದಲು ಆರ್‌ಎಸ್‌ಎಸ್ ತನ್ನ 20 ಕಾರ್ಯಕರ್ತರಿಗೆ ಏಪ್ರಿಲ್ 15ರವರೆಗೆ ಲಾಠಿ, ಕತ್ತಿ, ಖಡ್ಗ ಚಲಾಯಿಸುವ ತರಬೇತಿ ನೀಡಿತು! ಕೋಮು ದ್ವೇಷ ಸೃಷ್ಟಿಸಿ, ಹರಡಿಸುವ ತರಬೇತಿಯ ಪರಂಪರೆ ಆಗಲೇ ಆರಂಭವಾಯಿತು.

* 'ಎರಡು ರಾಷ್ಟ್ರ ಸಿದ್ಧಾಂತ'ವನ್ನು ಮೊದಲು ಪ್ರತಿಪಾದಿಸಿದವರು

ಭಾರತದ ಭೌಗೋಳಿಕ ಗಡಿಗಳ ಒಳಗೆ ಬಾಳುತ್ತಿರುವವರೆಲ್ಲಾ ಭಾರತೀಯರು ಎಂಬ ವಿಚಾರವನ್ನು ವಿರೋಧಿಸಿ ಹಿಂದೂಗಳು ಮಾತ್ರ ಇಲ್ಲಿಯವರು, ಆದ್ದರಿಂದ ಹಿಂದೂವಾದ ಮಾತ್ರವೇ ರಾಷ್ಟ್ರವಾದ ಎಂದು ಆರ್‌ಎಸ್‌ಎಸ್ ಪ್ರತಿಪಾದಿಸಿತು. ಹಿಂದೂಗಳ 'ಹಿತಾಸಕ್ತಿ'ಗಳನ್ನು ಪ್ರತಿಪಾದಿಸುತ್ತೇನೆ ಎನ್ನುತ್ತಿದ್ದ ಹಿಂದೂ ಮಹಾಸಭಾ ಕೂಡಾ ಒಪ್ಪಿರದಿದ್ದ ವಿಚಾರ ಇದು. ಹೀಗೆ ಇತರರೆಲ್ಲಾ ಬ್ರಿಟಿಷರ ವಿರುದ್ಧ ಎಲ್ಲಾ ಭಾರತೀಯರ ಹಿತಾಸಕ್ತಿಗಳೂ ಒಂದೇ, ಧರ್ಮದ ಆಧಾರದಲ್ಲಿ ಇದರಲ್ಲಿ ಒಡಕಿಗೆ ಅವಕಾಶ ಇಲ್ಲ ಎಂದರೆ ಆರ್‌ಎಸ್‌ಎಸ್ ಧರ್ಮದ ಆಧಾರದ ಮೇಲೆ ಎರಡು ಕೋಮುಗಳ ಹಿತಾಸಕ್ತಿಗಳಲ್ಲಿ ಭಿನ್ನತೆಯಿದೆ ಎಂದು ಪ್ರತಿಪಾದಿಸಿತು. ಈ "ಎರಡು ರಾಷ್ಟ್ರ"ಗಳ ಸಿದ್ಧಾಂತವೇ ಮುಂದೆ ಮುಸ್ಲಿಂ ಲೀಗ್‌ನ ಮೂಲಭೂತ ಆಧಾರವಾಗಿ ಭಾರತದ ವಿಭಜನೆಗೆ ದಾರಿ ಮಾಡಿಕೊಟ್ಟಿತು.

* 'ದೇಶಪ್ರೇಮಿ' ಆರ್‌ಎಸ್‌ಎಸ್‌ಗೆ ಬ್ರಿಟಿಷರನ್ನು ವಿರೋಧಿಸುವುದು 'ಪ್ರತಿಗಾಮಿತನ'ವಾಗಿ ಕಂಡಿತ್ತು!

ಹೀಗೆಂದರೆ ನಿಮಗೆ ವಿಚಿತ್ರವೆನಿಸುತ್ತದೆಯೇ? ಆರ್‌ಎಸ್‌ಎಸ್‌ನ "ರಾಷ್ಟ್ರಪ್ರೇಮ"ದ ಆಧಾರವನ್ನು ಅರ್ಥಮಾಡಿಕೊಂಡವರಿಗೆ ಇದು ವಿಚಿತ್ರವೆನಿಸಬೇಕಾಗಿಲ್ಲ. ಆರ್‌ಎಸ್‌ಎಸ್‌ನ ಸಿದ್ಧಾಂತಿ, ಗುರು ಗೋಲ್ವಾಲ್ಕರ್ ತಮ್ಮ 'ಬಂಚ್ ಆಫ್ ಥಾಟ್ಸ್'(ವಿಚಾರಗುಚ್ಛ)ದಲ್ಲಿ ನಮ್ಮ ರಾಷ್ಟ್ರೀಯತೆಯ ಕಲ್ಪನೆ ಭೌಗೋಳಿಕ ಗಡಿಗಳನ್ನು ಆಧರಿಸಿರುವುದರಿಂದ, ಈ ಗಡಿಗಳೊಳಗೆ ವಾಸಿಸುವವರೆಲ್ಲಾ ಒಂದು ಸಮಾನ ಅಪಾಯ. ಅಂದರೆ ಬ್ರಿಟಿಷ್ ಪ್ರಾಬಲ್ಯದ ಸಮಾನ ಅಪಾಯವನ್ನು ಎದುರಿಸುತ್ತಿದ್ದಾರೆ ಎಂಬ ವಿಚಾರ ಬೆಳೆದು ಬಂದಿದೆ, ಇದರಿಂದಾಗಿ 'ನಿಜವಾದ ಹಿಂದೂ ರಾಷ್ಟ್ರವಾದ'ದಿಂದ ಯಾರು ಸ್ಫೂರ್ತಿ ಪಡೆಯುತ್ತಿಲ್ಲ ಎಂದು ಗೋಗರೆದಿದ್ದರು. ಇಷ್ಟೇ ಅಲ್ಲ ಈ 'ಹಿಂದೂ ರಾಷ್ಟ್ರವಾದ'ವನ್ನು ಕಡೆಗಣಿಸಿದ ಈ "ತಪ್ಪು ವಿಚಾರ"ಗಳಿಂದಾಗಿ ರಾಷ್ಟ್ರೀಯ ಆಂದೋಲನ ಬ್ರಿಟಿಷ್-ವಿರೋಧಿ ಚಳುವಳಿಗಳಾಗಿ ಮಾರ್ಪಟ್ಟವು ಎಂದು ಖೇದ ವ್ಯಕ್ತಪಡಿಸಿದ್ದಾರೆ. ಈಗ 'ದೇಶ ಪ್ರೇಮ'ದ ಗುತ್ತಿಗೆ ಕೇವಲ ತನ್ನದೇ ಎನ್ನುವ ಸಂಘಟನೆಯ 'ಮಾನ್ಯ ಗುರು'ಗಳು! ಈ 'ಪ್ರತಿಗಾಮಿ' ನಿಲುವು ಇಡೀ ರಾಷ್ಟ್ರೀಯ ಆಂದೋಲನದ ಇತಿಹಾಸದ ಮೇಲೆ, ಅದರ ಮುಖಂಡರು ಹಾಗೂ ಅವರಲ್ಲಿ ಭಾಗವಹಿಸಿದ ಜನಸಮೂಹಗಳ ಮೇಲೆ ಭಯಾನಕ ಪ್ರಭಾವ ಬೀರಿತು ಎಂದೂ ಖೇದ ಪಡಿಸಿದ್ದಾರೆ ಈ ಗುರು! ಹೀಗೆ ವಸಾಹತುಶಾಹಿ ವಿರೋಧಿ ಮನೋಭಾವನೆ ಒಂದು ಭಯಾನಕ ಪ್ರತಿಗಾಮಿ ನಿಲುವು ಎನ್ನುವ ಈ ಮಹಾಶಯರನ್ನು ಬ್ರಿಟಿಷ್ ಆಳರಸರು ತಮ್ಮ ಮಿತ್ರರು ಎಂದು ಭಾವಿಸಿದ್ದರೆ ಅದರಲ್ಲಿ ಆಶ್ಚರ್ಯವೇನು? ವಸಾಹತುಶಾಹಿ-ವಿರೋಧಿ ಮನೋಭಾವನೆಯ 'ಪ್ರತಿಗಾಮಿತನ'ದಿಂದ ಹಿಂದೂಗಳನ್ನು 'ಉಳಿಸಲು' ಮುಸ್ಲಿಮರೇ ಈ 'ರಾಷ್ಟ್ರ'ದ ಶತ್ರುಗಳು ಎಂದು ಘೋಷಿಸಿ ಕೋಮು ದಂಗೆಗಳನ್ನು ಸೃಷ್ಟಿಸುತ್ತಾ ಬಂದಿದ್ದರೆ ಅದರಲ್ಲಿ ಆಶ್ಚರ್ಯವೇನು? ಇದರಿಂದಾಗಿಯೇ ಹಿಂದೂ ಪುನರುತ್ಥಾನವಾದದಲ್ಲಿ ನಂಬಿಕೆಯಿದ್ದ ಕಾಂಗ್ರೆಸ್ಸಿಗರೂ ಕೂಡಾ ಆರ್‌ಎಸ್‌ಎಸ್‌ನ್ನು ಸ್ವಾತಂತ್ರ್ಯ ಆಂದೋಲನದ ಸಮಯದಲ್ಲಿ ವಿರೋದಿಸಬೇಕಾಗಿ ಬಂದಿತ್ತು. ಮುಸ್ಲಿಂ ಲೀಗ್ ಮಾತ್ರವಲ್ಲ ಆರ್‌ಎಸ್‌ಎಸ್‌ನಲ್ಲೂ ಕೂಡಾ ಕಾಂಗ್ರೆಸ್ಸಿಗರು ಸದಸ್ಯರಾಗಿರಬಾರದು ಎಂಬ ನಿರ್ಣಯವನ್ನು ಕಾಂಗ್ರೆಸ್ ಕೈಗೊಳ್ಳಬೇಕಾಗಿ ಬಂದದ್ದು ಬ್ರಿಟಿಷ್ ವಸಾಹತುಶಾಹಿಗಳ ವಿರುದ್ಧ ಹೋರಾಟದಲ್ಲಿ ಆರ್‌ಎಸ್‌ಎಸ್ ತನ್ನ ವಿಕೃತ ವಿಚಾರಗಳಿಂದಾಗಿ ಜನಗಳ ಐಕ್ಯತೆಯನ್ನು ಮುರಿದು ಬ್ರಿಟಿಷರಿಗೆ ನೆರವಾಗುತ್ತಿದುದು ಸ್ಪಷ್ಟವಾಗಿ ಅನುಭವಕ್ಕೆ ಬಂದುದರಿಂದಲೇ.

* "ಬ್ರಿಟಿಷರು ನಿಜವಾಗಿ ಭಾರತ ಬಿಟ್ಟು ಹೋಗುತ್ತಾರೆ ಎಂದು ನಿಜವಾಗಿಯೂ ನೀವು ನಂಬಿದ್ದೀರಾ?" - ಹೀಗೆಂದು 1947ರ ಆಗಸ್ಟ್ ಎರಡನೇ ವಾರದಲ್ಲೂ ಹೊಟ್ಟೆ ತುಂಬ ನಕ್ಕವರು ಯಾರು ಗೊತ್ತೇ?

ಹೌದು. ಮೇಲಿನ ವೆಲ್ಲವನನ್ನೂ ಓದಿದ ಮೇಲೆ ನೀವು ಸರಿಯಾಗಿ ಊಹಿಸಿರಬೇಕು - ಸಾಕ್ಷಾತ್ ಗುರು ಗೋಲ್ವಾಲ್ಕರ್! ಸ್ವಾತಂತ್ರ್ಯದ ಕೆಲವೇ ದಿನಗಳ ಮೊದಲು ಪಂಜಾಬ್ ಪಗ್ವಾರಾ ಎಂಬಲ್ಲಿ ಆರ್‌ಎಸ್‌ಎಸ್‌ನ ಒಂದು ತರಬೇತಿ ಶಿಬಿರ ನಡೆದಿತ್ತು. ಆರ್‌ಎಸ್‌ಎಸ್‌ನ ಪರಿಣಿತ ದೇಸ್ರಾಜ್ ಗೋಯಲ್ ಈ ಶಿಬಿರದ ಪ್ರತ್ಯಕ್ಷದರ್ಶಿ. ಈ ತರಬೇತಿ ಶಿಬಿರದಲ್ಲಿ ಆರ್‌ಎಸ್‌ಎಸ್ ಗುರುವರ್ಯರಿಗೆ ಒಂದು ಪ್ರಶ್ನೆ ಕೇಳಲಾಯಿತಂತೆ- "ಈಗ ಬ್ರಿಟಿಷರು ಭಾರತ ಬಿಟ್ಟು ಹೋಗಲಿದ್ದಾರೆ. ಮುಂದೆ ಆರ್‌ಎಸ್‌ಎಸ್‌ನ ಪಾತ್ರವೇನು?" ಇದಕ್ಕೆ ಉತ್ತರವಾಗಿಯೇ 'ಗುರುವರ್ಯ'ರು ಮೇಲೆ ಹೇಳಿದಂತೆ ಹೊಟ್ಟೆ ತುಂಬಾ ನಕ್ಕರಂತೆ. ಮುಂದುವರಿದು ಅವರು ಬ್ರಿಟಿಷರು ಹೋದರೆ ಅಧಿಕಾರ ಸೂತ್ರ ಹಿಡಿಯುವವರು ನಿಷ್ಪ್ರಯೋಜಕರು, ಒಂದು ತಿಂಗಳೂ ಸರಕಾರನಡೆಸಲು ಅವರಿಗಾಗುವುದಿಲ್ಲ, ಮತ್ತೆ ಬ್ರಿಟಿಷರನ್ನು ಅವರೇ ಆಹ್ವಾನಿಸುತ್ತಾರೆ. ಆದ್ದರಿಂದ ಆರ್‌ಎಸ್‌ಎಸ್‌ನ ಪಾತ್ರ ಮೊದಲಿನಂತೆಯೇ ಇರುತ್ತದೆ ಎಂದರಂತೆ! ಎಂತಹ ಋಷಿ ಸದೃಶ ವಿಚಾರಗಳು ಅಲ್ಲವೇ!

ಬ್ರಿಟಿಷರನ್ನು ಕಿತ್ತೆಸೆದರೆ ಭಾರತದಲ್ಲಿ ಮತ್ತೆ ಮುಸ್ಲಿಂ ಆಳ್ವಿಕೆ ಬರುತ್ತದೆ ಎಂಬ ಕುರುಡು ಕೋಮುವಾದೀ ದೃಷ್ಟಿಕೋಣ ಹೊಂದಿದ್ದವವರು ಇನ್ನೇನು ತಾನೇ ಹೇಳಬಲ್ಲರು? ಇದರಿಂದಾಗಿಯೇ 1942ರ ವೇಳೆಗೂ ಬ್ರಿಟಿಶ್ ಗೂಢಚಾರ ವರದಿಗಳು ಆರ್‌ಎಸ್‌ಎಸ್‌ನೊಡನೆ ಬ್ರಿಟಿಷ್ ಸರಕಾರ ಯಾವುದೇ ಕಾರಣಕ್ಕೆ ನೇರ ತಿಕ್ಕಾಟಕ್ಕೆ ಇಳಿಯದಿದ್ದರೆ ಅವರಿಂದ ಬ್ರಿಟಿಷ್ ರಾಜ್ಯಭಾರಕ್ಕೆ ಏನೂ ಅಪಾಯವಿಲ್ಲ ಎಂದಿದ್ದವು. ಬ್ರಿಟಿಷ್ ರಾಜಕೀಯ ಗೂಢಚಾರ ವಿಭಾಗದ ಅದಿಕಾರಿ ದೆವರಿಟ್ಸ್ 1942ರಲ್ಲಿ ಸರಕಾರಕ್ಕೆ ಸಲ್ಲಿಸಿದ ವರದಿಯ ಮುಖ್ಯ ಅಂಶವಿದು.

* "ರಾಷ್ಟ್ರಪ್ರೇಮ"ದ ಢೋಂಗಿತನದ ಹಿಂದೆ ದೇಶದ್ರೋಹಿಗಳಿಗೆ ನೆರವಾದರು.

1946ರಲ್ಲಿ ಮುಸ್ಲಿಂ ಲೀಗ್ "ಎರಡು ರಾಷ್ಟ್ರ"ದ ಸಿದ್ಧಾಂತದ ಮೇಲೆ "ನೇರ ಕಾರ್ಯಾಚರಣೆ"ಗೆ ಇಳಿದಾಗ [ಬಿಜೆಪಿ ಆರಂಭಿಸಬೇಕೆಂದಿರುವ "ನೇರ ಕಾರ್ಯಾಚರಣೆ" ನೆನಪಾಗುತ್ತದೆಯೇ?] ಆರ್‌ಎಸ್‌ಎಸ್ ಕೂಡಾ ಧುಮುಕಿತು - ದೇಶದ ಐಕ್ಯತೆ ರಕ್ಷಣೆಗಲ್ಲ; ಪರಿಸ್ಥಿತಿಯ ಲಾಭ ಪಡೆದು ವಿವಿಧ ಕಡೆ ಗಲಭೆ ಸಂಘಟಿಸಲು. ಒಂದೆಡೆ ಗುರು ಗೋಲ್ವಾಲ್ಕರ್ ಮಾತನಾಡುತ್ತಾ 'ಹಿಂದೂ-ಮುಸ್ಲಿಂ ಐಕ್ಯತೆಯಿಲ್ಲದೆ ಸ್ವರಾಜ್ಯ ಬೇಡ', ಎನ್ನುತ್ತಾ ಸಮಾಜಕ್ಕೆ ದ್ರೋಹ ಬಗೆಯುತ್ತಿದ್ದಾರೆ, ನಮ್ಮ 'ಮಹಾನ್ ಪ್ರಾಚೀನ ಜನಾಂಗ'ದ ಸತ್ವವನ್ನೇ ನಾಶಮಾಡುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟಿರು!

ಆರ್‌ಎಸ್‌ಎಸ್‌ನ 'ರಾಷ್ಟ್ರಪ್ರೇಮ'ದ ಇನ್ನೊಂದ ರೂಪವನ್ನು ನಾವಿಂದು ನೆನಪಿಸಿಕೊಳ್ಳಬೇಕು. ಡಿಸೆಂಬರ್ 6ರ ಘಟನೆ ನಾಚಿಕೆಗೇಡಿನ ಸಂಗತಿ ಎಂದು ದೇಶಪ್ರೇಮಿಗಳು ಹೇಳುವುದನ್ನು ಖಂಡಿಸುತ್ತಾ ಹಿಂದೂ ಕೋಮುವಾದಿಗಳು ಆಗಸ್ಟ್ 15, 1947ರ ದೇಶ ವಿಭಜನೆಯೂ ಅಷ್ಟೇ ನಾಚಿಕೆಗೇಡಿನ ಸಂಗತಿಯಲ್ಲವೇ ಎಂದು ಪ್ರತಿವಾದ ಹೂಡುವುದನ್ನು ಕೇಳಿರಬಹುದು. ಆದರೆ ಅವರು 1947ರ ಘಟನೆಗಳನ್ನು 'ನಾಚಿಕೆಗೇಡಿ' ಎನ್ನುವುದು ದೇಶ ಧರ್ಮದ ಆಧಾರದ ಮೇಲೆ ವಿಭಜನೆಗೊಂಡಿತು ಎಂಬುದಕ್ಕಲ್ಲ ಪಾಕಿಸ್ತಾನದಂತೆ ಭಾರತ ಅವರ 'ಹಿಂದೂ ರಾಷ್ಟ್ರ'ದ ಪರಿಕಲ್ಪನೆಯ ಆಧಾರದ ಮೇಲೆ ರಚನೆಗೊಳ್ಳಲಿಲ್ಲವಲ್ಲಾ ಎಂದು. ಇದು ಮುಸ್ಲಿಮರ ಕೈಯಲ್ಲಿ ಹಿಂದೂಗಳ ಸೋಲು ಎಂದೇ ಆಗ ಆರ್‌ಎಸ್‌ಎಸ್ ಚಿತ್ರಿಸಿತ್ತು. ಬ್ರಿಟಿಷರ ಛತ್ರಛಾಯೆಯಲ್ಲಿ 'ಸುಖ'ವಾಗಿದ್ದ ಕೆಲವು ಹಿಂದೂ ರಾಜರುಗಳು ಸ್ವತಂತ್ರ ಭಾರತವನ್ನು ಸೇರಲು ಹಿಂಜರಿಯುತ್ತಿದ್ದಾಗ ಅವರು ಪ್ರತ್ಯೇಕಗೊಳ್ಳುವ ಪ್ರಯತ್ನ ನಡೆಸುವಲ್ಲಿ ಆರ್‌ಎಸ್‌ಎಸ್ ನೆರವಾಯಿತು ಎಂಬುದೂ ಈಗ ಬಹಳ ಮಂದಿಗೆ ತಿಳಿದಿರಲಿಕ್ಕಿಲ್ಲ. ಇದಕ್ಕೆ ಪ್ರತಿಯಾಗಿ ಆ ರಾಜರುಗಳು ಆರ್‌ಎಸ್‌ಎಸ್‌ಗೆ ಉದಾರ ನೆರವೂ ನೀಡಿದರು. ಇಂತಹ ರಾಜರುಗಳಲ್ಲಿ ಮುಖ್ಯವಾದವರೆಂದರೆ ಜೈಸಲ್ಮೇರ್, ಜೋಧ್‌ಪುರ, ಆಳ್ವಾರ್, ಭರತ್‌ಪುರ ಮತ್ತು ಬರೋಡಾ.

ಕಾಶ್ಮೀರದ ವಿಷಯ ಕೆಲವರಿಗಾದರೂ ತಿಳಿದಿದೆ. ಅಲ್ಲಿಯ ಡೋಗ್ರಾ ಮಹಾರಾಜ ಭಾರತದೊಡನೆ ಸೇರುವುದನ್ನು ವಿರೋಧಿಸಿದಾಗ ಆತನ ಬೆಂಬಲಕ್ಕೆ ನಿಂತದ್ದು ಆರ್‌ಎಸ್‌ಎಸ್! ಶೇಕ್ ಅಬ್ದುಲ್ಲಾರ ನೇತೃತ್ವದ ಆಂದೋಲನದಿಂದಾಗಿ ಕಾಶ್ಮೀರ ಭಾರತದೊಡನೆ ವಿಲೀನಗೊಂಡ ನಂತರ ಆರ್‌ಎಸ್‌ಎಸ್‌ನ ಈ ನಿಲುವು ಮುಂದುರಿಯಿತು. ಪಾಕಿಸ್ತಾನದಿಂದ ಬಂದ ದಂಗೆಕೋರರನ್ನು ಹಿಮ್ಮೆಟ್ಟಿಸಲು ಕಾಶ್ಮೀರಿಗಳು ರಚಿಸಿದ್ದ 'ರಾಷ್ಟ್ರೀಯ ಪಡೆ'ಗಳಿಗೆ ಭಾರತ ಸರಕಾರ ಒದಗಿಸುತ್ತಿದ್ದ ಶಸ್ತ್ರಾಸ್ತ್ರಗಳನ್ನು ಆರ್‌ಎಸ್‌ಎಸ್ ಕಾರ್ಯಕರ್ತರು ಕಿತ್ತುಕೊಂಡು ದೇಶದ ಶತ್ರುಗಳಿಗೆ ನೆರವಾಗುತ್ತಿದ್ದಾರೆ ಎಂದು ಕಾಶ್ಮೀರದ ಆಗಿನ ಗೃಹಮಂತ್ರಿ ಭಕ್ಷಿ ಗುಲಾಂ ಮೊಹಮ್ಮದ್ ಮತ್ತೆ-ಮತ್ತೆ ಕೇಂದ್ರ ಸರಕಾರಕ್ಕೆ ದೂರು ಸಲ್ಲಿಸಿದ ದಾಖಲೆಗಳಿವೆ. 'ರಾಷ್ಟ್ರಪ್ರೇಮ'ದ ಹೆಸರಲ್ಲಿ ಆ ಸಂಘಟನೆ ನಡೆಸಿರುವ ದೇಶದ್ರೋಹದ ಇಂತಹ ಕೆಲಸಗಳು ಹಲವಾರು.

* ಆರ್‌ಎಸ್‌ಎಸ್ ತಾನೊಂದು 'ಸಾಂಸ್ಕೃತಿಕ ಸಂಘಟನೆ' ಎಂದೇಕೆ ಹೇಳಿಕೊಳ್ಳುತ್ತದೆ? ಅದು ನಿಜವಾಗಿಯೂ ಕಾಂಗ್ರೆಸ್ ವಿರೋಧಿಯೇ?

ಏಕೆಂದರೆ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಕೆಲವು ಹೊಣೆಗಾರಿಕೆಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಕೆಲವು ಮೂಲಭೂತ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಆರ್‌ಎಸ್‌ಎಸ್ ಅವಕ್ಕೆ ಸಿದ್ಧವಿಲ್ಲ. ಆದ್ದರಿಂದಲೇ ಅದು ಬೇರೆ ರಾಜಕೀಯ ಸಂಘಟನೆಗಳನ್ನು ರಚಿಸಿ ತನ್ನ ಕಪಿಮುಷ್ಟಿಯಲ್ಲಿರುವಂತೆ ನೋಡಿಕೊಳ್ಳುತ್ತದೆ. ಹಿಂದಿನ ಜನಸಂಘ, ಈಗಿನ ಬಿಜೆಪಿ ಇಂತಹ ಸಂಘಟನೆಗಳು.

ಬೇರೆ ರಾಜಕೀಯ ಪಕ್ಷಗಳು ತಮ್ಮ ರಾಜಕೀಯ ಧ್ಯೇಯಗಳ ಈಡೇರಿಕೆಗೆ ವಿವಿಧ ಜನವಿಭಾಗಗಳ ಸಾಮೂಹಿಕ ಸಂಘಟನೆಗಳನ್ನು ರಚಿಸಿ ಮಾರ್ಗದರ್ಶನ ನೀಡಿದರೆ ಹಿಂದಿನ ಜನಸಂಘ, ಈಗಿನ ಬಿಜೆಪಿ ತದ್ವಿರುದ್ಧ. ಅದು ಇತರ ಜನಸಂಘಟನೆಗಳಿಗೆ ಮಾರ್ಗದರ್ಶನ ನೀಡುವ ಸಂಸ್ಥೆಯಲ್ಲ, 'ಸಾಂಸ್ಕೃತಿಕ' ಎಂದು ಹೇಳಿಕೊಳ್ಳುವ ಆರ್‌ಎಸ್‌ಎಸ್‌ನ ಮಾರ್ಗದರ್ಶನವನ್ನೂ ಶಿರಸಾವಹಿಸಿ ಪಡೆಯುವ ಸಂಸ್ಥೆ. ಆರ್‌ಎಸ್‌ಎಸ್‌ನ ಈ ನಿಲುವಿನಿಂದಾಗಿಯೇ ಕೇಂದ್ರದಲ್ಲಿ ಕಾಂಗ್ರೆಯೇತರ ಸರಕಾರದ ಮೊದಲ ಪ್ರಯೋಗ ಸೋತದ್ದು. ಜನಸಂಘ 1977ರಲ್ಲಿ ಜನತಾಪಕ್ಷದೊಡನೆ ವಿಲೀನಗೊಂಡಿತು. ಆದರೆ ಹಾಗೆ ವಿಲೀನಗೊಂಡ ಪಕ್ಷದ ಸದಸ್ಯರು ತಮ್ಮ ಹೊಸ ರಾಜಕೀಯ ಪಕ್ಷದ ಶಿಸ್ತಿಗೆ ಒಳಪಡಬಾರದು, ಅವರು ಆರ್‌ಎಸ್‌ಎಸ್‌ನ ಶಿಸ್ತಿಗಷ್ಟೇ ಒಳಪಡಬೇಕು ಎಂದು ಹಠ ಹಿಡಿದು [illegible] ಕಾಂಗ್ರೆಸ್(ಐ)ಯನ್ನು ಅಧಿಕಾರದಿಂದ ಕೆಳಗಿಳಿಸಿದ ಜನತಾ ಪಕ್ಷದಲ್ಲಿ ಮೊದಲ ಒಡಕುಂಟಾಗಿ ಕಾಂಗ್ರೆಸ್(ಐ)ಗೆ ನೆರವಾಯಿತು. ಏಕೆಂದರೆ ಜನತಾ ಪಕ್ಷದ ಬಹುಪಾಲು ಸದಸ್ಯರು ಈ ಪ್ರಜಾಪ್ರಭುತ ವಿರೋಧಿ ನಿಲುವನ್ನು ಒಪ್ಪಲು ಸಿದ್ಧರಾಗಲಿಲ್ಲ. ಹೀಗೆ ಬಿಜೆಪಿ ಕೂಡಾ ಹುಟ್ಟಿದ್ದೇ ಪ್ರಜಾಪ್ರಭುತ್ವ-ವಿರೋಧಿ ನೆಲೆಯಲ್ಲಿ.

ಆರ್‌ಎಸ್‌ಎಸ್‌ನ ಕಾಂಗ್ರೆಸ್-ವಿರೋಧ ಕೂಡಾ ಕೇವಲ ಢೋಂಗಿತನ ಎಂಬುದಕ್ಕೆ ಇನ್ನೊಂದು ಉದಾಹರಣೆ. 1977ರಲ್ಲಿ ಕೇಂದ್ರದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರಕಾರ ಅಧಿಕಾರಕ್ಕೆ ಬಂದಾಗ ನಡೆದ ಬೃಹತ್ ಸಭೆಯಲ್ಲಿ ಪಾಲ್ಗೊಂಡ ಆರ್‌ಎಸ್‌ಎಸ್ ಮುಖಂಡ ಬಾಳಾ ಸಾಹೇಬ್ ದೇವರಸ್ ಪ್ರಜಾಪ್ರಭುತ್ವದ ಮರುಸ್ಥಾಪನೆಯ ಹೋರಾಟದಲ್ಲಿ ಆರ್‌ಎಸ್‌ಎಸ್ ಜೆಪಿಯವರೊಡನೆ ಹೆಗಲಿಗೆ ಹೆಗಲು ಕೊಟ್ಟು ನಿಂತಿತು ಎಂದು ಹೇಳಿಕೊಂಡರು. ಆದರೆ ನಿಜಸಂಗತಿಯೇನು? ತುರ್ತು ಪರಿಸ್ಥಿತಿ ಹೇರಿದ ಎರಡೇ ತಿಂಗಳಲ್ಲಿ ಇದೇ ದೇವರಸ್ ಆಗಿನ ಪ್ರಧಾನಿ ಇಂದಿರಾಗಾಂಧಿಗೆ ಜೈಲಿನಿಂದ ಪತ್ರ ಬರೆದು ಆಕೆಯ ಕುಪ್ರಸಿದ್ಧ 'ಹದಿನಾಲ್ಕು ಅಂಶದ ಕಾರ್ಯಕ್ರಮ'ವನ್ನು ಹಾಡಿಹೊಗಳಿದ್ದರು! ಇನ್ನು ಎರಡು ತಿಂಗಳ ನಂತರ ಇನ್ನೊಂದು ಪತ್ರ ಬರೆದು ಆರ್‌ಎಸ್‌ಎಸ್‌ನ್ನು ಅನಗತ್ಯವಾಗಿಯೇ ಗುಜರಾತ್, ಬಿಹಾರದ ಆಂದೋಲನದೊಡನೆ ಬಿಜೆಪಿಯವರ ಹೆಸರಿನೊಡನೆ ಸೇರಿಸಲಾಗಿದೆ ಎಂದರು. ಆರ್‌ಎಸ್‌ಎಸ್ ಮೇಲಿನ ನಿರ್ಬಂಧ ತೆಗೆಯಿರಿ, ನಾವು ನಿಮ್ಮ ಕಾರ್ಯಕ್ರಮದಲ್ಲಿ ಸಹಕರಿಸುತ್ತೇವೆ ಎಂದಿದ್ದರು! ಇದು ಅದರ ಕಾಂಗ್ರೆಸ್ ವಿರೋಧದ ಮಾದರಿ!

* 'ಸಾಂಸ್ಕೃತಿಕ ಪುನರುಜ್ಜೀವನ' ತರುವವರೋ ಅಥವಾ ಒಗ್ಗಟ್ಟು ಮುರಿವವರೋ?

ಇದಕ್ಕೂ ಗಾಂಧೀಜಿಯ ಕೊಲೆಯ ಹಿನ್ನೆಲೆಯಲ್ಲಿ ಆರ್‌ಎಸ್‌ಎಸ್ ಮೇಲೆ ನಿಷೇಧವಿದ್ದಾಗಲೂ ಆಗಿನ ಆರ್‌ಎಸ್‌ಎಸ್ ಮುಖಂಡ ಆಗಿನ ಪ್ರಧಾನಮಂತ್ರಿಗಳಿಗೆ ಒಂದು ಪತ್ರ ಬರೆದಿದ್ದರು - ಗಾಂಧೀಜಿ ಬಗ್ಗೆ ತಮ್ಮ ಶ್ರದ್ಧಾಂಜಲಿ ಅರ್ಪಿಸಲಿಕ್ಕಲ್ಲ. ಎಲ್ಲೆಡೆ ಯುವಜನ ಸಮಾಜವಾದದತ್ತ, ಕಮ್ಯುನಿಸಂನತ್ತ ಆಕರ್ಷಿತರಾಗುತ್ತಿದ್ದಾರೆ. ಭಾರತದಲ್ಲೂ ಈ 'ಅಪಾಯವಿದೆ'. ನೆಹರೂ ಈ 'ಅಪಾಯ'ವನ್ನು ಮನಗಂಡು ಆರ್‌ಎಸ್‌ಎಸ್ ಮೇಲಿನ ನಿಷೇಧ ತೆಗೆದರೆ 'ಸಾಂಸ್ಕೃತಿಕ ರಂಗ'ದಲ್ಲಿ ಕಮ್ಯುನಿಸ್ಟ್ ಪೀಡೆಯನ್ನು ಎದುರಿಸಲು ಕಾಂಗ್ರೆಸ್ ಸರಕಾರಕ್ಕೆ ನೆರವಾಗಲು ಸಿದ್ಧ ಎಂಬುದು ಆ ಪತ್ರದ ಸಾರಾಂಶ. ನೆಹರೂಗಿಂತ ಆಗಿನ ಗೃಹಮಂತ್ರಿ ತಮಗೆ ಸಮೀಪವೆಂದುಕೊಂಡು ಗೊಲ್ವಾಲ್ಕರ್ ಪಟೇಲ್‌ರಿಗೆ ಸ್ವಲ್ಪ ಖಾರವಾಗಿ ಬರೆದಿದ್ದರಂತೆ - ಯುವಜನ ವಿದೇಶೀ ವಿಚಾರಗಳಿಗೆ ಮಾರು ಹೋಗುತ್ತಿದ್ದಾರೆ ಎಂಬುದು ಅಪಾಯ ನಮಗಿಂತ ಜಾಸ್ತಿ ನಿಮಗೇ ಗೊತ್ತಾಗಬೇಕಿತ್ತು, ಆದರೂ ತಡೆದುಕೊಳ್ಳಲಾರದೆ ಪತ್ರ ಬರೆಯುತ್ತಿದ್ದೇನೆ ಎಂದು.

ಕಮ್ಯುನಿಸ್ಟ್-ವಿರೋಧ ಆರ್‌ಎಸ್‌ಎಸ್‌ನ ಪ್ರಮುಖ ಸ್ವರೂಪಗಳಲ್ಲೊಂದು. ಏಕೆ ಎಂಬುದೂ ಸ್ಪಷ್ಟ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ದುಡಿಯುವ ಜನಗಳನ್ನು ಸಂಘಟಿಸಿ ಶೋಷಣೆಯ ವಿರುದ್ಧ ಜಾತಿ-ಧರ್ಮಗಳನ್ನು ಮೀರಿದ ಒಗ್ಗಟ್ಟು ಬೆಸೆಯುವಲ್ಲಿ ಕಮ್ಯುನಿಸ್ಟರು ವಹಿಸಿದ ಪಾತ್ರ ಕಂಡು ಬ್ರಿಟಿಷ್ ವಸಾಹತುಶಾಹಿಗಳು, ದೇಶೀ ಶೋಷಕರಂತೆ ಆರ್‌ಎಸ್‌ಎಸ್ ವಾಲಾಗಳೂ ಭಯಗ್ರಸ್ತರಾಗಿದ್ದರೆ ಆಶ್ಚರ್ಯವೇನು? ಆರ್‌ಎಸ್‌ಎಸ್‌ನ ಈ ಸ್ವರೂಪವನ್ನು ಕುಪ್ರಸಿದ್ಧ ಸಿಐಎ ಏಜೆಂಟ್ ಜೆ. ಎ.ಕರನ್ ಕೂಡಾ ತಮ್ಮದೊಂದು ಅಧ್ಯಯನದಲ್ಲಿ ಗಮನಿಸಿದ್ದರು.

ಸ್ವತಂತ್ರ ಭಾರತದಲ್ಲಿ ಆರ್‌ಎಸ್‌ಎಸ್‌ನ ಪಾತ್ರವನ್ನು ಅರ್ಥ ಮಾಡಿಕೊಳ್ಳುವುವರಲ್ಲಿ ಇದು ಪ್ರಮುಖ ಅಂಶ. ದುಡಿಯುವ ಜನಗಳ ಒಗ್ಗಟ್ಟನ್ನು ಮುರಿದು ಶೋಷಕ ವರ್ಗಗಳಿಗೆ 'ಸಾಂಸ್ಕೃತಿಕ ನೆರವು' ನೀಡುವುದು, ಇದರಲ್ಲಿ ಅಗತ್ಯವಿದ್ದರೆ ನೇರವಾಗಿ ತಾನೇ ರಾಜಕೀಯ ಅಧಿಕಾರ ಕಸಿದುಕೊಳ್ಳುವುದು! ಡಿಸೆಂಬರ್ 6ರ ಘಟನೆಯ ಹಿನ್ನೆಲೆ-ಮುನ್ನೆಲೆ ನೋಡಿದ ಮೇಲೆ ಇದು ಬಹಳ ಜನರ ಅರಿವಿಗೆ ಬರುತ್ತಿದೆ.

['ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯಲ್ಲಿ ಪ್ರಕಟವಾದ ರಾಜೇಂದ್ರ ಶರ್ಮಾರವರ ಲೇಖನದ ಆಧಾರದ ಮೇಲೆ ಈ ಸಂಗತಿಗಳನ್ನು ಕಲೆಹಾಕಲಾಗಿದೆ.]

ಅಯೋಧ್ಯಾ ಕಾಂಡ



'ಸಂಘ ಪರಿವಾರ'ದ ಡಿಸೆಂಬರ್ 6ರ ಹಾಗೂ ನಂತರದ ಹೀನ ಕೃತ್ಯಗಳ ನಿಜ ಸ್ವರೂಪವನ್ನು ಬಯಲಿಗೆ ಳೆಯುತ್ತಾ ಸಿಪಿಐ(ಎಂ) ಈ 'ಪರಿವಾರ'ದ ಸ್ಥಾಪಕ 'ಗುರು' ಗೋಲ್ವಾಲ್ಕರ್‌ರವರ ವಿಚಾರಗಳ ಫ್ಯಾಸಿಸ್ಟ್ ಸ್ವರೂಪವನ್ನು ಬಯಲಿಗೆಳೆದದ್ದು ಈ 'ಪರಿವಾರ'ದವರಿಗೆ ಆ ಪರಿವಾರದ ಹಿತ್ತೈಷಿಗಳಿಗೆ, ಬಾಲಬಡುಕ ಪತ್ರಕರ್ತರಿಗೆ ಭಾರೀ ಕಸಿವಿಸಿಯುಂಟು ಮಾಡಿದೆ. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಸೀತಾರಾಂ ಯೆಚೂರಿರವರ "ಖೋಟಾ ಹಿಂದೂವಾದದ ಫ್ಯಾಸಿಸ್ಟ್ ಮುಖ" ಲೇಖನವನ್ನು ಫೆಬ್ರವರಿ 1, 1993ರಂದು 'ನವಭಾರತ ಟೈಮ್ಸ್'(ಹಿಂದಿ ದೈನಿಕ) ಪ್ರಕಟಿಸಿತು. ಆದರೆ ಅದರ ಜೊತೆಗೇ ಒಂದು ಸಂಪಾದಕರ ಟಿಪ್ಪಣಿಯಿತ್ತು - "ಗೋಲ್ವಾಲ್ಕರ್‌ರವರೇ 'ನಾವು ಅಥವಾ ನಮ್ಮ ರಾಷ್ಟ್ರೀಯತ್ವದ ನಿರ್ವಚನೆ' ಎಂಬ ಪುಸ್ತಕವನ್ನು ನಂತರ ತನ್ನದಲ್ಲ ಎಂದಿದ್ದರು. ಆರ್‌ಎಸ್‌ಎಸ್ ಈ ಪುಸ್ತಕವನ್ನು ಹಿಂತೆಗೆದುಕೊಂಡಿತ್ತು" ಸೀತಾರಾಂ ಯೆಚೂರಿಯವರು ಈ ಟಿಪ್ಪಣಿಗೆ ಬಲವಾದ ಪ್ರತಿಭಟನೆ ವ್ಯಕ್ತಪಡಿಸಿ ಒಂದು ಪತ್ರ ಬರೆದರು. ಯೆಚೂರಿಯವರ ಲೇಖನದೊಡನೆ ಟಿಪ್ಪಣಿ ಬರೆದು ತನ್ನ 'ನಿಷ್ಪಕ್ಷಪಾತ'ಕ್ಕೆ ತಾನೇ ಮೆಚ್ಚಿಕೊಂಡಿದ್ದ ಸಂಪಾದಕನಿಗೆ ಯೆಚೂರಿಯವರ ಪತ್ರವನ್ನು ಪ್ರಕಟಿಸಿ ಅದನ್ನು ಮತ್ತೊಮ್ಮೆ ಪ್ರದರ್ಶಿಸುವ ಧೈರ್ಯ ಬರಲೇ ಇಲ್ಲ. ಏಕೆ? ಯೆಚೂರಿಯವರ ಪ್ರತಿಭಟನಾ ಪತ್ರವನ್ನು ಆತ ಪ್ರಕಟಿಸಲಿಲ್ಲ.

ತಮ್ಮ ನಿಜ ಸ್ವರೂಪ ಬಯಲಾದಾಗ ಉಂಟಾದ ಕಸಿವಿಸಿಯನ್ನು ಮುಚ್ಚಿಕೊಳ್ಳಲು 'ಸಂಘಪರಿವಾರ' ಸೃಷ್ಟಿಸಿದ ಈ ಹೊಸ ಸುಳ್ಳನ್ನು ಕೂಡಾ ಯೆಚೂರಿಯವರ ಪತ್ರ ಬಯಲಿಗೆಳೆದಿರುವುದರಿಂದ ಅದನ್ನು ಪ್ರಕಟಿಸುವ ಧೈರ್ಯ ಕಾವಿ ಪತ್ರಕರ್ತರಿಗೆ ಬರಲಿಲ್ಲ. ನಮ್ಮ ಓದುಗರಿಗಾಗಿ ಇಲ್ಲಿದೆ ಆ ಪತ್ರ.

ಕಾವಿ ಪತ್ರಿಕಾರಂಗದ ಇನ್ನೊಂದು ಮೋಸ

'ನವಭಾರತ ಟೈಮ್ಸ್' ಸಂಪಾದಕ ಯೆಚೂರಿಯವರ ಪತ್ರವನ್ನೇಕೆ ಪ್ರಕಟಿಸಲಿಲ್ಲ?

ಮಾನ್ಯ ಸಂಪಾದಕರೇ


ನನ್ನ ಲೇಖನದ ಜತೆಗಿರುವ ನಿಮ್ಮ ಸಂಪಾದಕೀಯ ಟಿಪ್ಪಣಿಯಿಂದಾಗಿ ನಾನು ಈ ಪತ್ರ ಬರೆಯಬೇಕಾಗಿ ಬಂದಿದೆ.

ಮೊದಲನೆಯದಾಗಿ, "ಆರ್‌ಎಸ್‌ಎಸ್ ಮೂಲ"ಗಳನ್ನು ಆಧರಿಸಿ ನೀವು ಬರೆದ "ಗೋಲ್ವಾಲ್ಕರ್ ನಂತರ 'ನಾವು ಅಥವಾ ನಮ್ಮ ರಾಷ್ಟ್ರೀಯತ್ವದ ನಿರ್ವಚನೆ' ಎಂಬ ಪುಸ್ತಕಕ್ಕೂ ತಮಗೂ ಸಂಬಂಧ ಇಲ್ಲ ಎಂದಿದ್ದರು" ಎಂಬ ಸಂಪಾದಕೀಯ ಟಿಪ್ಪಣಿ ನಿಮ್ಮ ಮುಗ್ಧತೆಯ ಪುರಾವೆಯಾಗಬಹುದು. ಆದರೆ ಇದುವರೆಗೆ ತಿಳಿದಿರುವ ಯಾವ ಸತ್ಯಾಂಶದಿಂದಲೂ ಇದು ಸಿದ್ಧವಾಗುವುದಿಲ್ಲ. ಹೌದು. ಒಂದು ಮಾತಂತೂ ನಿಜ. ಡಿಸೆಂಬರ್ 6ರ ಅಯೋಧ್ಯಾ ಘಟನೆಗಳ ನಂತರ ಆ ಪುಸ್ತಕದಲ್ಲಿ ಪ್ರತಿಪಾದಿಸಿದ ಕೆಲವು ಸಿದ್ಧಾಂತಗಳು ಆರ್‌ಎಸ್‌ಎಸ್‌ಗೆ ಮುಜುಗರ ಉಂಟು ಮಾಡುತ್ತಿದೆ. ಕೆಲವು ಆರ್‌ಎಸ್‌ಎಸ್ ಮಂದಿ ತಮಗೂ ಈ ಸಿದ್ಧಾಂತಗಳಿಗೂ ಸಂಬಂಧವಿಲ್ಲ ಎಂದು ಈ ಮುಜುಗರದಿಂದ ಜಾರಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆದರೆ ಸತ್ಯ ಸಂಗತಿ ಏನೆಂದರೆ ಆರ್‌ಎಸ್‌ಎಸ್ ಆಗಲೀ, ಅದರ ಯಾವುದೇ ಅಧಿಕೃತ ವಕ್ತಾರರಾಗಲೀ ಇದುವರೆಗೂ ಗೋಲ್ವಾಲ್ಕರ್‌ರವರ ಈ ಪುಸ್ತಕವನ್ನು, ಅದರಲ್ಲಿರುವ ಸಿದ್ಧಾಂತಗಳನ್ನು ನಿರಾಕರಿಸುವ ಧೈರ್ಯ ತೋರಿಲ್ಲ. ಇನ್ನು ಈ 'ಆರ್‌ಎಸ್‌ಎಸ್ ಮೂಲ'ಗಳ ಸಾಚಾತನದ ಬಗ್ಗೆ ಹೇಳಬೇಕಾದರೆ ಇತ್ತೀಚೆಗೆ ಇಂತಹುದೇ ಒಂದು "ಮೂಲ" ಈ ಪುಸ್ತಕವನ್ನು 1942ರ ನಂತರ ಎಂದೂ ಮತ್ತೆ ಮುದ್ರಿಸಲಿಲ್ಲ ಎಂದು ಖಡಾಖಂಡಿತವಾಗಿ ಹೇಳಿತು. ಆದರೆ ನನ್ನ ಬಳಿ 1947ರ ಆವೃತ್ತಿಯ ಒಂದು ಪ್ರತಿಯಿದೆ. ನಿಮಗೆ ಬೇಕಿದ್ದರೆ ಪುರಾವೆಯಾಗಿ ನಾನು ಅದರ ಒಂದು ಫೋಟೋಸ್ಟಾಟ್ ಪ್ರತಿ ಒದಗಿಸಲು ಸಿದ್ಧ. ಇದರಿಂದ ತಿಳಿಯುವ ಸಂಗತಿಯಿಷ್ಟೇ - ಇಂತಹ ಜನಗಳ ಹೇಳಿಕೆಯನ್ನಷ್ಟೇ ಆಧರಿಸಿ ಗೋಲ್ವಾಲ್ಕರ್ ಈ ಪುಸ್ತಕವನ್ನು ಹಿಂತೆಗೆದುಕೊಂಡಿದ್ದರು ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಗೋಲ್ವಾಲ್ಕರ್ ಅವರು ದೀರ್ಘ ಸಕ್ರಿಯ ಜೀವನ ನಡೆಸಿದ್ದಾರೆ. ಸಂಪುಟಗಟ್ಟಲೆ ಬರೆದಿದ್ದಾರೆ. ಆದರೆ ಎಲ್ಲಿಯೂ 1939ರ ಈ ಪುಸ್ತಕವನ್ನು ಹಿಂತೆಗೆದುಕೊಂಡಿದ್ದರು ಎಂದಿದ್ದರು ಎಂದು ಸೂಚಿಸುವ ಒಂದೇ ಒಂದು ವಾಕ್ಯವನ್ನು ಎಲ್ಲೂ ಕಂಡು ಹಿಡಿಯಲಾಗಿಲ್ಲ.


ಇನ್ನೂ ಹಾಸ್ಯಾಸ್ಪದ ಸಂಗತಿಯೆಂದರೆ ಗೋಲ್ವಾಲ್ಕರ್‌ರವರೇ ಸ್ವತಃ "ಇದು ತನ್ನದೇ ಪುಸ್ತಕ ಎಂದು ಸ್ವೀಕರಿಸಲು ನಿರಾಕರಿಸಿದರು" ಎಂಬ ನಿಮ್ಮ ತರ್ಕ. ನಮ್ಮ ಬಳಿಯಿರುವ ಆವೃತ್ತಿಯಲ್ಲಿ ಗೋಲ್ವಾಲ್ಕರ್ ಯಾವುದೇ ಸಂಶಯಕ್ಕೆ ಆಸ್ಪದವನ್ನೇ ಕೊಡದೇ ಇದು ತನ್ನದೇ ಕೃತಿಯೆಂದು ವರ್ಣಿಸಿದ್ದಾರೆ. ಸ್ವತಃ ಬರೆದು, ಒಂದಲ್ಲ ಹಲವು ಬಾರಿ ಪ್ರಕಟಿಸಿದ ಒಂದು ಕೃತಿ ತನ್ನದಲ್ಲ ಎಂದು ಯಾರಾದರೂ ಹೇಗೆ ಹೇಳಲು ಸಾಧ್ಯ? ಗೋಲ್ವಾಲ್ಕರ್ ಸ್ವತಃ ಎಲ್ಲೂ ಈ ಪುಸ್ತಕವನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಹೇಳಿರದಿರುವಾಗ ಬೇರೆ ಯಾರಾದರೂ ಅದನ್ನು ಹೇಳಿಕೊಳ್ಳಲು ಹೇಗೆ ಸಾಧ್ಯ? ನಿಜ, ಮುಗ್ಧರಾಗಿ ಇಂತಹುದನ್ನೇನಾದರೂ ನಂಬಲು ನಿಮಗೆ ಪೂರ್ಣ ಸ್ವಾತಂತ್ರ್ಯವಿದೆ. ಹಾಗಿದ್ದರೆ ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಎಲ್ಲಾ ಲೇಖನಗಳ ವಾಸ್ತವಾಂಶಗಳನ್ನು ಪರಿಶೀಲಿಸಿ ಪ್ರತಿಯೊಂದಕ್ಕೂ ಹೀಗೆ ಸಂಪಾದಕೀಯ ಟಿಪ್ಪಣಿ ಸೇರಿಸಲು ನೀವು ಸಿದ್ಧರಿರುವಿರಾ? ಅಥವಾ ನಿಮ್ಮ ಈ ಅನಗತ್ಯ ಆತುರ ಖೋಟಾ ಹಿಂದೂವಾದಿಗಳನ್ನು ವಿರೋಧಿಸುವ ದನಿಗಳಿಗಾಗಿ ಮಾತ್ರ ಮೀಸಲೇನು?

ನಿಮ್ಮವ

ಸೀತಾರಾಂ ಯೆಚೂರಿ



ಗೋಲ್ವಾಲ್ಕರ್‌ರವರ "ನಾವು ಅಥವಾ ನಮ್ಮ ರಾಷ್ಟ್ರೀಯತ್ವದ ನಿರ್ವಚನೆ" ಎಂಬ ಕೃತಿಯ 1939ರ ಹಾಗೂ 1947ರ ಆವೃತ್ತಿಗಳ ಮುಖಪುಟ. 1939ರಲ್ಲಿ ಮೊದಲು ಪ್ರಕಟಗೊಂಡ ಈ ಕೃತಿಯನ್ನು ಗೋಲ್ವಾಲ್ಕರ್ ಬರೆದಿಲ್ಲ, 1942 ರ ನಂತರ ಇದನ್ನು ಮತ್ತೆ ಮುದ್ರಿಸಲೇ ಇಲ್ಲ ಎಂದು ಆರ್.ಎಸ್.ಎಸ್.ನವರು ಈಗ ಹೇಳುತ್ತಿರುವುದು ಸುಳ್ಳು ಎಂದು ಸಾರುವ ಚಿತ್ರಗಳಿವು.



ಕಾಶ್ಮೀರದಲ್ಲಿ ದೇವಸ್ಥಾನ ಧ್ವಂಸಮಾಡಿದವರು ಇವರು!

"ಕಾಶ್ಮೀರದಲ್ಲಿ ದೇವಸ್ಥಾನಗಳನ್ನು ಅಪವಿತ್ರಗೊಳಿಸಲಾಯಿತು. ನಾಶಮಾಡಲಾಯಿತು. ಒಟ್ಟು 900 ದೇವಸ್ಥಾನಗಳನ್ನು ಬಂಗಾರ,ಬೆಳ್ಳಿಯ ದೈವಮೂರ್ತಿಗಳನ್ನು ಮಲದಿಂದ ಸುತ್ತಿ ಮರದ ದಿಮ್ಮಿಯಂತೆ ರಸ್ತೆಯ ಮೇಲೆ ಉರುಳಿಸಲಾಯಿತು."- ಹೀಗೆಂದವರು ಯಾರು? ಅಡ್ವಾಣಿಯವರೇ ? ಅಲ್ಲ ಭಜರಂಗದಳದ ಮುಖಂಡರೇ ? ಅಲ್ಲ. ಇದು ಮಧ್ಯಕಾಲದ ಒಂದು ಸಾಹಿತ್ಯ ಕೃತಿಯಲ್ಲಿ ಬರುವ ಉಲ್ಲೇಖ. ಹಾಗಿದ್ದರೆ ಅಡ್ವಾಣಿ, ಸಿಂಘಾಲ್, ಕಟಿಯಾರ್‌ಗಳ, ಸಾಧ್ವಿ-ಸನ್ಯಾಸಿಯರ ಸಾಧು-ಮಹಂತರ ಭಾಷಣಗಳಲ್ಲಿ ಇದನ್ನು ಎಂದೂ ಕೇಳಿಲ್ಲವಲ್ಲ ಎಂದು ನಿಮಗೆ ಆಶ್ಚರ್ಯವಾಗುತ್ತದೆಯೋ?

ಇದು ಕಾಶ್ಮೀರದಲ್ಲಿ ಅರಸನಾಗಿದ್ದ ಹರ್ಷನ ಆಳ್ವಿಕೆಯಲ್ಲಿ ನಡೆದ ಘಟನೆ. ಪ್ರಖ್ಯಾತ ಸಂಸ್ಕೃತ ಕವಿ ಕಲ್ಹಣ ಪಂಡಿತನ "ರಾಜತರಂಗಿಣಿ"ಯಲ್ಲಿ ದಾಖಲಾಗಿರುವ ಸಂಗತಿಗಳಿವು. ಹರ್ಷನ ಆಜ್ಞೆಯ ಮೇರೆಗೆ ವಿಶೇಷವಾಗಿ ಈ ಕೆಲಸಕ್ಕೆಂದೇ ನೇಮಿಸಿದ 'ದೇವಳೋಪತನ ನಾಯಕ' (ದೇವಸ್ಥಾನಗಳ ಧ್ವಂಸದ ಸಚಿವ) ಈ ಧ್ವಂಸಕಾರ್ಯ ನಡೆಸಿದ ಎಂದು ಈ ಕೃತಿ ಹೇಳುತ್ತದೆ.

ಈಗ ತಿಳಿಯಿತೇ? ಬಿ.ಜೆ.ಪಿ.'ಪರಿವಾರ'ದ ಭಾಷಣಗಳಲ್ಲೆಲ್ಲಾ ಇದರ ಪ್ರಸ್ತಾಪವಿರುವುದಿಲ್ಲ ಏಕೆ ಎಂದು ? ತನ್ನ ಸಿದ್ಧಾಂತಕ್ಕೆ ಪ್ರತಿಕೂಲವಾದದ್ದು ನಡೆದೇ ಇಲ್ಲ ಎಂದು ನಂಬುವುದು, ನಂಬಿಸುವುದು ಈ 'ಪರಿವಾರ' ಬದುಕುಳಿಯಬೇಕಾದರೆ ಅತೀ ಅಗತ್ಯ.

ಅದಿರಲಿ. ಕಾಶ್ಮೀರದಲ್ಲಿ ಆಧುನಿಕ ಕಾಲದಲ್ಲಿ ದೇವಸ್ಥಾನಗಳ ನಾಶವಾಗುತ್ತಲೇ ಇದೆ ಎನ್ನುವ 'ಪರಿವಾರ'ದ ಸುಳ್ಳುಗಳಿಗೆ ಅತ್ಯಂತ "ಉಗ್ರಪ್ರತಿಕ್ರಿಯೆ" ಬಂದಿರುವುದು ಕಾಶ್ಮೀರದ ಉಗ್ರಗಾಮಿಗಳಿಂದಲೂ ಅಲ್ಲ, ಅನವಶ್ಯಕವಾಗಿ ತಮ್ಮ ಜಾತ್ಯತೀತ ಸ್ವರೂಪಕ್ಕೆ ಮಸಿ ಬಳಿಯುತ್ತಿದ್ದಾರೆ ಎಂದು ಸಹಜವಾಗಿಯೇ ಕುಪಿತಗೊಳ್ಳಬೇಕಾದ ಕಾಶ್ಮೀರದ ಜನತೆಯಿಂದಲೂ ಅಲ್ಲ, ಒಬ್ಬ ಕಾಶ್ಮೀರಿಯೇತರ ಆಡಳಿತಗಾರನಿಂದ ಎನ್ನುತ್ತಾರೆ 'ಫ್ರಂಟ್‌ಲೈನ್' ಪತ್ರಿಕೆಯ ವಿಶೇಷ ಕಾಶ್ಮೀರ ವರದಿಗಾರ (ಮಾರ್ಚ್ 12,1993).

ಈ ಆಡಳಿತಗಾರ ಪ್ರಶ್ನಿಸುತ್ತಾನೆ "ಕಾಶ್ಮೀರದಲ್ಲಿ ದೇವಸ್ಥಾನಗಳನ್ನು ಸುಟ್ಟರು ಎಂದೇ ಇಟ್ಟುಕೊಳ್ಳೋಣ- ಅದರಿಂದೇನು ? ಎಲ್ಲ ಸಾರ್ವಜನಿಕರ ಕಣ್ಣೆದುರಿಗೆ ಒಂದು ಮಸೀದಿಯನ್ನು ಧ್ವಂಸಮಾಡಿ ಬಿ.ಜೆ.ಪಿ. ಏನನ್ನು ನಿರೀಕ್ಷಿಸುತ್ತದೆ ?"

ಸಂಘ 'ಪರಿವಾರ'ದ ಪ್ರಕಾರ ಹಲವಾರು ದೇವಸ್ಥಾನಗಳು 'ನಾಶ'ವಾದ ಅನಂತ್‌ನಾಗ್ ಜಿಲ್ಲೆಯಲ್ಲಿ 'ಗಡಿ ಭದ್ರತಾ ಪಡೆ' (ಬಿ.ಎಸ್.ಎಫ್) ಕಾರ್ಯಾಚರಣೆಯ ಉಸ್ತುವಾರಿ ನಡೆಸುತ್ತಿರುವ ಆ ಪಡೆಯ ಒಬ್ಬ ಅಧಿಕಾರಿ ಹೇಳುತ್ತಾರೆ "ಕಾಶ್ಮೀರದ ಜನತೆ ಬಯಸಿದ್ದರೆ ತಮ್ಮ ಕಣ್ಣಿಗೆ ಬೀಳುವ ಪ್ರತಿಯೊಂದು ದೇವಸ್ಥಾನವನ್ನು ನಾಶಮಾಡಬಹುದಿತ್ತು. ಏಕೆಂದರೆ 99 ಶೇ. ದೇವಸ್ಥಾನಗಳಿಗೆ ಭದ್ರತಾ ಪಡೆಗಳ ಕಾವಲು ಇಲ್ಲ. ಇವುಗಳಲ್ಲಿ ಬಹುಪಾಲು ಕಣಿವೆಯ ದೂರದ ಜಾಗಗಳಲ್ಲಿ ಸಾರ್ವಜನಿಕ ಕಣ್ಣಿಗೆ ಬೀಳದ ರೀತಿಯಲ್ಲಿ ಇರುವ ದೇವಸ್ಥಾನಗಳು."

ನಿಜ ಕಾಶ್ಮೀರದ ಜನ ಸಾಮಾನ್ಯರಿಗೆ ಸಿಟ್ಟು ಬಂದಿಲ್ಲ. ಬೇಸರವಾಗಿದೆ. ಸುಮಾರು 40 ವರ್ಷಗಳ ಹಿಂದೆ ಜಾತ್ಯಾತೀತ ಭಾರತದೊಂದಿಗೆ ಸೇರಿಕೊಳ್ಳಲು ನಿರ್ಧರಿಸಿದ ದಿನಗಳಿಂದಲೂ ಈ ಬಿ.ಜೆ.ಪಿ.ಯ, ಅದರ 'ಪೂರ್ವಿಕರ' ದ್ವೇಷಪೂರ್ಣ, ದೇಶ- ವಿರೋಧಿ ಸ್ವಭಾವವನ್ನು ಅವರು ಕಣ್ಣಾರೆ ಕಂಡವರು.

"ಎಡಪಂಥೀಯರಲ್ಲಿ ಮಾತ್ರವೇ ಕೋಮು ಸವಾಲನ್ನು ಎದುರಿಸುವ ಸೈದ್ಧಾಂತಿಕ ತಳಹದಿಯಿದೆ"

ಕಲ್ಕತ್ತಾ ಫೆ. 18 : ಎಡಪಂಥೀಯರು ಮಾತ್ರ ಕೋಮು ಸವಾಲನ್ನು ಪರಿಣಾಮಕಾರಿಯಾಗಿ ಎದುರಿಸಬಲ್ಲರು ಎಂದು ಇಸ್ಲಾಮಿ ಅಧ್ಯಯನ ಸಂಸ್ಥೆಯ ನಿರ್ದೇಶಕ ಹಾಗೂ 'ಕೋಮು ಸೌಹಾರ್ದ ಸಮಿತಿ'ಯ ಅಧ್ಯಕ್ಷ ಅಸ್ಗರ್ ಅಲೀ ಇಂಜಿನಿಯರ್ ಅಭಿಪ್ರಾಯಪಡುತ್ತಾರೆ. ಅವರಿಗೆ ಕಲ್ಕತ್ತಾ ವಿಶ್ವವಿದ್ಯಾಲಯ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿದ ಸಿಪಿಐ(ಎಂ)ನ ಬಂಗಾಳೀ ದೈನಿಕ 'ಗಣಶಕ್ತಿ'ಯೊಡನೆ ಸಂದರ್ಶನದಲ್ಲಿ ಉತ್ತರಿಸುತ್ತಾ ಎಡಪಂಥೀಯರು ಮಾತ್ರ ಈ ಸವಾಲನ್ನು ಎದುರಿಸಲು ಸಾಧ್ಯ, ಏಕೆಂದರೆ ಎಡಪಂಥೀಯರಿಗೆ ಮಾತ್ರವೇ ಕೋಮುವಾದೀ ಶಕ್ತಿಗಳ ವಿರುದ್ಧ ಹೋರಾಡಲು ಅಗತ್ಯವಾದ ಸೈದ್ಧಾಂತಿಕ ತಳಹದಿಯಿರುವುದು ಎಂದು ಇಂಜಿನಿಯರ್ ಹೇಳಿದ್ದಾರೆ. ಕಾಂಗ್ರೆಸ್(ಐ) ಕೇವಲ ಮಾತಿನಲ್ಲಷ್ಟೇ ಜಾತ್ಯಾತೀತ, ಏಕೆಂದರೆ ಅದೀಗ ತನ್ನ ಸೈದ್ಧಾಂತಿಕ ನೆಲೆಗಳನ್ನು ಕಳಕೊಂಡಿದೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್(ಐ) ಒಳಗೆ ಈಗ ಜಾತ್ಯಾತೀತತೆಗೆ ದೆಂಬಲವಾಗಿ ದನಿಯೆಬ್ಬಿಸುತ್ತಿರುವವರು ತಮ್ಮದೇ ರಾಜಕೀಯ ಲಾಭಕ್ಕಾಗಿ ಮಾತ್ರ ಮಾಡುತ್ತಿದ್ದಾರೆ ಎಂದು ಭಾವಿಸುವ ಇಂಜಿನಿಯರ್ ಉಳಿದ ಬಿಜೆಪಿ-ವಿರೋಧಿ ಪಕ್ಷಗಳಲ್ಲಿ ಈ ಪ್ರಶ್ನೆಯ ಬಗ್ಗೆ ಅಷ್ಟೊಂದು ಪ್ರಾಮಾಣಿಕತೆ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮುಸ್ಲಿಂ ದಾಳಿಕೋರರು ಈ ದೇಶಕ್ಕೆ ಕೋಮುವಾದವನ್ನು ತಂದರು ಎಂಬ ಅಭಿಪ್ರಾಯವನ್ನು ಇಂಜಿನಿಯರ್ ದೃಢವಾಗಿ ಖಂಡಿಸಿದರು. ನಿಜವಾಗಿ ಮಧ್ಯ ಯುಗದಲ್ಲಿ ಕೋಮುವಾದವೆಂದರೇನೆಂಬುದೇ ತಿಳಿದಿರಲಿಲ್ಲ. ಆಧುನಿಕ ಯುಗದಲ್ಲೂ ಧಾರ್ಮಿಕ ಭಿನ್ನಾಭಿಪ್ರಾಯಗಳಿಂದಾಗಿ ಎಂದೂ ಕೋಮು ಗಲಭೆಗಳು ನಡೆದಿಲ್ಲ ಎಂದು ಅವರು ಹೇಳುತ್ತಾರೆ.

ಆಧುನಿಕ ಪ್ರವೃತ್ತಿ

ಇದನ್ನು ವಿವರಿಸುತ್ತಾ ಅವರು ಒಂದು ಧರ್ಮ ಶ್ರೇಷ್ಠ ಎಂಬ ಕಾರಣದ ಮೇಲೆ ಎಂದೂ ಘರ್ಷಣೆ ನಡೆದಿಲ್ಲ ಎಂದು ಅವರು ಹೇಳಿದ್ದಾರೆ. ಊಳಿಗಮಾನ್ಯ ಆರ್ಥಿಕದಲ್ಲಿ ಸ್ಪರ್ಧೆಯೆಂಬುದಿರಲಿಲ್ಲವಾದ್ದರಿಂದ ಊಳಿಗಮಾನ್ಯ ರಾಜಕೀಯದಲ್ಲೂ ಅದು ಇರಲಿಲ್ಲ. ಊಳಿಗಮಾನ್ಯ ಪ್ರಭುಗಳು ಎಲ್ಲಾ ಜನವಿಭಾಗಗಳ ವಿಧೇಯತೆ ಪಡೆಯಬೇಕಾಗಿತ್ತು. ಉದಾಹರಣೆಗೆ, ಔರಂಗಜೇಬನ ಸೇನೆಯಲ್ಲಿ ಹಿಂದೂಗಳು ಅಪರೂಪವೇನಲ್ಲ. ಶಿವಾಜಿಯ ಸೇನೆಯಲ್ಲೂ ಬಹಳ ಮುಸ್ಲಿಂ ಸಿಪಾಯಿಗಳಿದ್ದರು. ಆದ್ದರಿಂದ ಕೋಮುಗಳ ನಡುವಿನ ಘರ್ಷಣೆಗಳ ಬದಲು ಒಂದು ಕೋಮಿನ ಒಳಗೇ ಘರ್ಷಣೆಗಳು ನಡೆಯುತ್ತಿದ್ದವು. ಆದ್ದರಿಂದ ಶಿವಾಜಿಯನ್ನು 'ಹಿಂದೂ ಪುನರುಜ್ಜೀವನದ ನಾಯಕ' ಎನ್ನುವುದಾಗಲೀ ಔರಂಗಜೇಬನನ್ನು 'ದಮನಕಾರೀ ಮುಸ್ಲಿಂ' ಎನ್ನುವುದಾಗಲೀ ಅತ್ಯಂತ ಅಚಾರಿತ್ರಿಕ ಎನ್ನುತ್ತಾರೆ ಅಸ್ಗರ್ ಆಲಿ ಇಂಜಿನಿಯರ್.

ಸ್ಪರ್ಧಾ ಮನೋಭಾವ ಮೊದಲು ಎದ್ದು ಬಂದದ್ದು ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ. ಈ ಅವಧಿಯಲ್ಲಿ ಪ್ರಜಾಸತ್ತಾತ್ಮಕ ನೀತಿ-ನಿಯಮಾವಳಿಗಳು ಆರಂಭವಾದಾಗ ಒಂದು ನಿರ್ದಿಷ್ಟ ಕೋಮನ್ನು ಓಲೈಸುವ ಪ್ರವೃತ್ತಿ, ಚುನಾವಣಾ ರಾಜಕೀಯ ಆರಂಭವಾಯಿತು. ಹೀಗೆ ಕೋಮುವಾದ ಒಂದು ಆಧುನಿಕ ವಿದ್ಯಮಾನ ಎನ್ನುತ್ತಾರೆ ಅವರು.

ಜಾತ್ಯಾತೀತ ವಿಚಾರದ ಬಗ್ಗೆ ಹೊಸ ಚರ್ಚೆ ಅನಗತ್ಯ

ಜಾತ್ಯಾತೀತತೆ ತತ್ವದ ಬಗ್ಗೆ ಈಗಿರುವ ವಿಚಾರವನ್ನು ಬದಲಿಸುವ ಅಗತ್ಯವೇನೂ ಇಲ್ಲ ಎಂದರು ಇಂಜಿನಿಯರ್ ಭಾವಿಸುತ್ತಾರೆ. ಈ ಬಗ್ಗೆ ಬಿಜೆಪಿ ಆರಂಭಿಸಿರುವ ಚರ್ಚೆ ಯಾವುದೇ ಸತ್ವವಿಲ್ಲದ್ದು, ದುರುದ್ದೇಶಪೂರ್ಣವಾದದ್ದು ಎನ್ನುತ್ತಾ ಅವರು ಸರಕಾರ ಎಲ್ಲಾ ಧರ್ಮಗಳಿಂದ ಸಮಾನ ದೂರದಲ್ಲಿರಬೇಕು, ಎಲ್ಲಕ್ಕೂ ಸಮಾನ ಗೌರವ ನೀಡಬೇಕು ಎಂದು ಒತ್ತಿ ಹೇಳಿದರು.

ಇಸ್ಲಾಮ್ ಸೇರಿದಂತೆ ಎಲ್ಲಾ ಧರ್ಮಗಳು ಭಾರತೀಯ ನಾಗರಿಕತೆಗೆ ಕಾಣಿಕೆ ನೀಡಿವೆ ಎಂದು ಇಂಜಿನಿಯರ್ ಅವರು ಸ್ಪಷ್ಟಪಡಿಸುತ್ತಾರೆ. ಹಿಂದೂ ಧರ್ಮ ಜಾತಿ- ಪದ್ಧತಿಯಿಂದ ತೊಳಲಾಡುತ್ತಿದ್ದಾಗ ಇಸ್ಲಾಮ್ ಸಮಾನತೆಯ ಪರಿಕಲ್ಪನೆಯನ್ನು ತಂದಿತು. ಅಷ್ಟೇ ಅಲ್ಲ, ಇಸ್ಲಾಮಿ ಸಂಸ್ಕೃತಿ ಭಾರತೀಯ ಸಂಗೀತ, ಚಿತ್ರಕಲೆ, ಶಿಲ್ಪ ಕಲೆ, ವಾಸ್ತು ಶಿಲ್ಪಕ್ಕೆ ಗಮನಾರ್ಹ ಕಾಣಿಕೆ ನೀಡಿದೆ.

ಈ ಬಾರಿಯದ್ದು ಅಭೂತಪೂರ್ವ ಹಿಂಸಾಚಾರ

ಈಗ ಕೋಮು ಗಲಭೆಗಳು ನಡೆಯುತ್ತಿರುವ ವಿಧಾನ ಬಹಳ ಆತಂಕಕಾರಿ ಎಂದ ಇಂಜಿನಿಯರ್ ಅವರು ಭಾಗಲ್ಪುರ್, ಮೀರಠ್, ಅಲೀಗಢ, ಮುಂಬೈ, ಅಥವಾ ಸೂರತ್‌ಗಳಲ್ಲಿ ನಡೆದದ್ದು, ಇತ್ತೀಚಿನ ಗಲಭೆಗಳಲ್ಲಿ ನಡೆದದ್ದು ಪೋಲೀಸರಿಂದ ಸಾಮೂಹಿಕ ಕೊಲೆ, ರಕ್ಷಣೆಗಾಗಿ ಓಡುತ್ತಿದ್ದವರ ಮೇಲೆ ಗೋಲೀಬಾರು ಮಾಡಲಾಯಿತು ಎನ್ನುತ್ತಾರೆ. ಶಿವಸೈನಿಕರು ಮನೆಗಳಿಗೆ ದೆಂಕಿ ಇಟ್ಟರು. ಹಲ್ಲೆಕೋರರು ಆಸ್ಪತ್ರೆಗಳ ಶಸ್ತ್ರ ಚಿಕಿತ್ಸಾ ಕೊಠಡಿಗಳಿಗೂ ನುಗ್ಗಿ ರೋಗಿಗಳನ್ನು ಕೊಂದರು. ಗರ್ಭಿಣಿ ಮಹಿಳೆಯರನ್ನೂ ಅವರು ಬಿಡಲಿಲ್ಲ. ಹಿಂಸಾಚಾರದ ದೃಷ್ಟಿಯಿಂದ ನೋಡಿದರೆ, ಇತ್ತೀಚಿನ ಕೋಮು ಗಲಭೆಗಳಿಗೆ ಸರಿಸಾಟಿಯಿಲ್ಲವೇ ಇಲ್ಲ ಎಂದಿದ್ದಾರೆ ಅವರು.

ಆದರೂ ದೇಶದ ಭವಿಷ್ಯದ ಬಗ್ಗೆ ಈ ಪ್ರಸಿದ್ಧ ಸಮಾಜ ಸುಧಾರಕರರಲ್ಲಿ ನಿರಾಸೆಯ ಭಾವನೆಯೇನೂ ಇಲ್ಲ. ಈಗಿನ ಅವ್ಯವಸ್ಥೆ ಬಹಳ ದಿನ ಉಳಿಯುವುದಿಲ್ಲ ಎಂಬ ದೃಢ ನಂಬಿಕೆ ಅವರದ್ದು. ತಮ್ಮ ಸ್ವಂತದ ಉಳಿವಿಗಾದರೂ ಜನ ಮಾನವೀಯತೆಯ ಮೊರೆ ಹೋಗಬೇಕಾಗುತ್ತದೆ ಎಂಬುದು ಅವರಿಗೆ ಖಾತ್ರಿಯಿದೆ. ಈಗಿನ ಅತ್ಯಂತ ತುರ್ತು ಕೆಲಸವೆಂದರೆ ಜಾತ್ಯಾತೀತ ಶಕ್ತಿಗಳು ದ್ವಿಗುಣ ಉತ್ಸಾಹದಿಂದ ಕೋಮುವಾದೀ ಸವಾಲನ್ನು ಎದುರಿಸುವುದು ಎಂದು ಅಸ್ಗರ್ ಅಲಿ ಇಂಜಿನಿಯರ್ ಒತ್ತಿ ಹೇಳುತ್ತಾರೆ.

ಮುಸುಕಿನಲ್ಲಿ ಅಡಗಿದೆ ಮಾಯೆ ಬಿಟ್ಟೆನೆಂದರೂ ಬೆಂಬತ್ತಿತ್ತು ಮಾಯೆ

ಕೇಂದ್ರ ಬಜೆಟ್ ಬಗ್ಗೆ ಒಂದು ವಿಶ್ಲೇಷಣೆ

- ಜಿ.ಎನ್. ನಾಗರಾಜ್

ಬಜೆಟ್, ಬಜೆಟ್, - ಬಜೆಟ್ ಎಂದರೇನೆಂದು ಗೊತ್ತಿರುವವರೆಲ್ಲರೂ ಫೆಬ್ರವರಿ ಬಂದರೆಸಾಕು ಟಿವಿ, ಕಣ್ಣು ಬಜೆಟ್‌ನ ಕಡೆಗೆ, ಇನ್ನು ಹಲವರಿಗೆ ಬಜೆಟ್ ಎಂದರೇನೆಂದು ಸುತಾರಾಂ ತಿಳಿಯದಿದ್ದರೂ ಅದರ ಅನುಭವವಂತೂ ಆಗಿಯೇ ಬಿಡುತ್ತದೆ. ತಮಗೆ ಬಡಿದಿರುವ ಭಯಂಕರ ರೋಗದ ಹೆಸರೇನು ಎಂಬುದು ಗೊತ್ತಿಲ್ಲದಿದ್ದರೂ ಅದರ ನೋವನ್ನು, ಸಂಕಟವನ್ನು ಅನುಭವಿಸಲೇಬೇಕಾಗುವಂತೆ ಈ ಬಜೆಟ್‌ನ ಸಂಕಟವನ್ನು ಅನುಭವಿಸಬೇಕಾಗುತ್ತದೆ.

ಬಜೆಟ್‌ಗಳು ಹಲವು ರೀತಿಯವಿವೆ. ಬೆಂಗಳೂರಿನ ವಿಧಾನಸೌಧದಲ್ಲಿ ಒಂದು ಬಜೆಟ್ ಬರುತ್ತದೆ. ದೆಹಲಿಯಲ್ಲಿಂದ ಎರಡು ಬಜೆಟ್ - ಒಂದು ರೈಲ್ವೇ ಬಜೆಟ್, ಮತ್ತೊಂದು ಬರೀ ಬಜೆಟ್. ಈ ಬಜೆಟ್‌ಗಳಲ್ಲಿ ಹಲವರು ತುದಿಗಾಲ ಮೇಲೆ ನಿಂತು ಉಸಿರು ಬಿಗಿಹಿಡಿದು ಕಾಯುವಂತೆ ಮಾಡುವುದು ಈ ಬರೀ ಬಜೆಟ್‌ಗಾಗಿಯೇ. ಇದು ಕೇಂದ್ರ ಸರಕಾರದ ಹಣಕಾಸು ಮಂತ್ರಿಗಳು ಮಂಡಿಸುವ ಇಡೀ ದೇಶದ ಹಣಕಾಸಿನ ವ್ಯವಹಾರಗಳಿಗೆ ಸಂಬಂಧಿಸಿದ ಕೇಂದ್ರ ಬಜೆಟ್. ಈ ಬಾರಿ ಅದನ್ನು ಡಾ. ಮನಮೋಹನ್‌ಸಿಂಗ್ ಎಂಬ ಹಣಕಾಸಿನ ಸಚಿವರು ನರಸಿಂಹರಾವ್‌ರ ಸರಕಾರದ ಪರವಾಗಿ ಫೆ. 27ರಂದು ಲೋಕಸಭೆಯಲ್ಲಿ ಮಂಡಿಸಿದರು. ಇದು ಅವರು ಮಂಡಿಸುತ್ತಿರುವ ಮೂರನೆಯ ಬಜೆಟ್. ಬಜೆಟ್ ಬಂದ ಕೂಡಲೇ ಎಲ್ಲ ಬಾರಿಯಂತೆ ಈ ಬಾರಿಯೂ ಭಾರಿ ಚರ್ಚೆ. ಟಿವಿಯಲ್ಲಿ ಪೇಪರುಗಳಲ್ಲಿ ದೊಡ್ಡ ದೊಡ್ಡ ತಜ್ಞರುಗಳು ಜನಸಾಮಾನ್ಯರಿಗೆ ಏನೂ ತಿಳಿಯದ ಭಾರೀ ಭಾರೀ ಪದಗಳನ್ನುಪಯೋಗಿಸಿ ಬಜೆಟ್‌ನ್ನು ಖಂಡಿಸುವ, ಅನುಮೋದಿಸುವ ಹೇಳಿಕೆಗಳು ಇತ್ಯಾದಿ. ಅದನ್ನು ಟಿವಿಗಳಲ್ಲಿ ನೋಡಿದವರು ಪೇಪರ್ ಓದುವವರ ನಡುವೆ ಮನೆಗಳಲ್ಲಿ, ಕಛೇರಿಗಳಲ್ಲಿ, ಹೋಟೆಲುಗಳಲ್ಲಿ, ಬಸ್‌ಗಳಲ್ಲಿ, ಬೀಡಿ ಸಿಗರೇಟ್ ಅಂಗಡಿಯ ಮುಂದೆ ಚರ್ಚೆ, ಕ್ಷೌರದ ಅಂಗಡಿಗಳಲ್ಲಿಯೂ ಚರ್ಚೆ. ಈ ಚರ್ಚೆಗಳು ಭಾರಿ ಸ್ವಾರಸ್ಯಕರವಾಗಿ ನಡೆದು ಕೊನೆಗೂ ವರ್ಷದ ಬಜೆಟ್ ಒಳ್ಳೆಯದೇ ಕೆಟ್ಟದ್ದೇ ಅನುಕೂಲವೇ ಅಲ್ಲವೇ ಎಂಬ ತೀರ್ಮಾನಕ್ಕೆ ಬಂದು ಬಿಡುತ್ತಾರೆ. ಇಷ್ಟೊಂದು ಗದ್ದಲ ಗೌಜು, ನಗರ ಪಟ್ಟಣಗಳಲ್ಲಿ ನಡೆದಿದ್ದರೂ ಅಲ್ಲಿ ಹಾಗೂ ಸಹಸ್ರಾರು ಹಳ್ಳಿಗಳಲ್ಲಿ ಇದು ತಮಗೇನೂ ಸಂಬಂಧವಿಲ್ಲವೆಂಬಂತೆ ಇದು ಎಂತಹುದೋ ಒಂದು ಕಲಿತವರಿಗೆ ಮಾತ್ರ ಮೀಸಲಾದ ಚೇಷ್ಟೆಯೆಂಬಂತೆ ಮೂಗೆತ್ತಿನಂತೆ ತಮ್ಮ ಕೆಲಸ ಸಾಗಿಸುತ್ತಿರುತ್ತಾರೆ ಕೋಟಿಗಟ್ಟಲೆ ಬಡಜನರು.

"ಒಳ್ಳೆ ಬಜೆಟ್ ಅಲ್ಲಾ ಸಾರ್"

ಈ ಬಜೆಟ್‌ಗಳಲ್ಲಿ ಹಲವಾರು ಕಡೆ ಕೇಳಿ ಬಂದ ಮಾತು : "ಈ ಸರ್ತಿ ಬಜೆಟ್ ಒಳ್ಳೆ ಬಜೆಟ್", "ಏನ್ಸಾರ್, ಈ ಬಾರಿ ಸರಕಾರ್‌ದೋರು ಏನೂ ಟ್ಯಾಕ್ಸ್ ಹಾಕಿಲ್ವಲ್ಲ ಸಾರ್, ಬಹಳ ಟ್ಯಾಕ್ಸ್ ಕಡಿಮೆ ಮಾಡ್ಬಿಟ್ಟಿದ್ದಾರಂತಲ್ಲ ಸಾರ್, ಕಲರ್ ಟಿವಿ ಬೆಲೆ, ಕಾರ್ ಬೆಲೆ, ಫ್ರಿಜ್ ಬೆಲೆ ಎಲ್ಲಾ ಕಡಿಮೆಯಂತಲ್ಲ, ಒಳ್ಳೆ ಬಜೆಟ್ ಅಲ್ವಾ ಸಾರ್!!"

ಇದು ಒಳ್ಳೆ ಬಜೆಟ್ಟೇ? ಯಾರಿಗೆ ಒಳ್ಳೆ ಬಜೆಟ್? ಪತ್ರಿಕೆಗಳಂತೂ ಈ ಬಜೆಟ್‌ನ ಮೇಲೆ ಹೊಗಳಿಕೆಯ ಸುರಿಮಳೆಯನ್ನೇ ಕರೆದಿವೆ.

"ಬಹಳ ಧೈರ್ಯದ, ಬುದ್ಧಿವಂತಿಕೆಯ ಬಜೆಟ್, ಇಡೀ ದೇಶಕ್ಕೆ ಸಂತಸವನ್ನು ಉಣಿಸುವ ಬಜೆಟ್" - "ಹಿಂದೂ" ಪತ್ರಿಕೆ.

ಪವಾಡ ಸದೃಶ ಬಜೆಟ್ - ಕನ್ನಡ ಪ್ರಭ. ಟೀಕಾಕಾರರ ಬಾಯಿ ಮುಚ್ಚಿಸುವ, ಧಾರಾಳ ರಿಯಾಯ್ತಿ - ವಿನಾಯ್ತಿಯ ಬಜೆಟ್ - ಸಂಯುಕ್ತ ಕರ್ನಾಟಕ.

ಹೀಗೆಲ್ಲಾ ಹಾಡಿ ಹೊಗಳಿ ಅಟ್ಟಕ್ಕೇರಿಸಿದ ಈ ಬಜೆಟ್‌ನ ಒಳಗುಟ್ಟೇನು?

4522 ಕೋಟಿ ರೂಗಳಷ್ಟು ತೆರಿಗೆಯನ್ನು ಕಡಿತ ಮಾಡಿದ, ಹಿಂದಿನ ಹತ್ತು ವರ್ಷಗಳಲ್ಲಿ ಅತೀ ಕಡಿಮೆ ಕೊರತೆ ತೋರಿಸಿದ ಬಜೆಟ್ ಒಳ್ಳೆ ಬಜೆಟ್ ಅಲ್ಲವೇ? ಯೋಜನೆಗೆ ನೀಡುವ ಅಭಿವೃದ್ಧಿಗೆ ನೀಡುವ ಹಣ, ಆರೋಗ್ಯಕ್ಕೆ ಕೃಷಿಗೆ ನೀಡುವ ಹಣದಲ್ಲಿ ಖೋತಾ ಮಾಡುತ್ತೀರಿ ಎಂದು ಯಾವಾಗಲೂ ದೂಷಿಸುತ್ತಿದ್ದವರಿಗೆ ಉತ್ತರವಾಗಿ ನೂರಕ್ಕೆ ಮೂವತ್ತಾರರಷ್ಟು ಯೋಜನಾ ವೆಚ್ಚವನ್ನು ಏರಿಸಿ, ಕೃಷಿಗೆ ಆರೋಗ್ಯಕ್ಕೆ ಶಿಕ್ಷಣಕ್ಕೆ ಬಹಳ ಹಣ ನೀಡಿರುವ ಈ ಬಜೆಟ್ ಒಳ್ಳೆ ಬಜೆಟ್ಟಲ್ಲವೇ? ಇದು ಟಿವಿ ತಜ್ಞರು ತಮ್ಮ ತಮ್ಮೊಳಗೆ ಮಾಡಿಕೊಂಡು ನಮ್ಮ ಮುಂದೆ ಎಸೆದ ಮಾತುಗಳು, ಮನಮೋಹನಸಿಂಗ್‌ರವರು ಬಜೆಟ್ ಬಗ್ಗೆ ನಮ್ಮ ಮುಂದೆ ಮಾಡಿದ ಬಣ್ಣನೆಗಳು.

"ಹಾಗಾದ್ರೆ ಇದು ಇದು ಒಳ್ಳೆ ಬಜೆಟ್ಟೆ"?

ಇದು, ಮಾತು ಬರದ ಹಲವು ಮಂದಿ, ಮಾತನಾಡಲಾಗದ ಕೋಟಿಗಟ್ಟಲೆ ಜನ, ಮಾತನಾಡಿದರೂ ಯಾರೂ ಕಿವಿಗೊಡದ ಬಡ ಜನ ತಮ್ಮನ್ನೇ ಕೇಳಿಕೊಳ್ಳುತ್ತಿರುವ ಪ್ರಶ್ನೆ. ಅಂಗಡಿಗೆ ಹೋದರೆ ಅಕ್ಕಿ ಬೆಲೆ, ಸಕ್ಕರೆ ಬೆಲೆ ಇತ್ಯಾದಿ ಆಹಾರದ ಬೆಲೆಗಳು ಏರಿವೆ, ಸಿಮೆಂಟ್, ಉಕ್ಕು ಕಬ್ಬಿಣ, ಕಲ್ಲಿದ್ದಲು ಇತ್ಯಾದಿಗಳ ಬೆಲೆ ಏರಿವೆ, ಇತ್ತೀಚೆಗೆ ಬಸ್ ಟಿಕೆಟ್, ರೈಲ್ವೇ ಟಿಕೆಟ್ ದರ ಏರಿದೆ. ಇವೆಲ್ಲಾ ಏನು? ಇನ್ನೂ ನೆನಪಿಸಿಕೊಂಡರೆ ಪೆಟ್ರೋಲ್, ಡೀಸೆಲ್ ಬೆಲೆ ಏರಿತು. ರಸಗೊಬ್ಬರದ ಬೆಲೆಗಳು ಊಹೆಗೂ ಸಿಗದಷ್ಟು ಏರಿದುವು, ಇವೆಲ್ಲಾ ಏನು ಬಜೆಟ್ ಅಲ್ಲವೇ? ಇದನ್ನು ಬಜೆಟ್ ಬರುವ ಮೊದಲಿನಿಂದಲೂ ಅನುಭವಿಸುತ್ತಿದ್ದೆವಲ್ಲ?

ಕಲರ್ ಟಿವಿ, ಫ್ರಿಜ್ ಕೊಳ್ಳಲು ಹಣ ಇರುವವರಿಗೆ ಕಾರು, ಟ್ರಾಕ್ಟರ್ ಬೇಕಾದ ಲಕ್ಷಾಧೀಶರಿಗೆ ಒಳ್ಳೆ ಬಜೆಟ್ ಒಳ್ಳೆ ಬಜೆಟ್ ಇರಬಹುದು ನಮಗೆ ಒಳ್ಳೆ ಬಜೆಟ್ಟಾ ಇದು? ಇದು ಅವರ ಮೂಕ ಪ್ರಶ್ನೆ.

ಒಂದು ಲೆಕ್ಕಾಚಾರದಂತೆ ಕೇವಲ ಬಜೆಟ್ ಹಿಂದಿನ 8-9 ತಿಂಗಳಲ್ಲಿ ಕೇಂದ್ರ ಸರಕಾರ 11,800 ಕೋಟಿ ರೂ. ಜನಸಾಮಾನ್ಯರಿಂದ ಕಿತ್ತುಕೊಂಡಿದೆ. ಕೇವಲ ರಸಗೊಬ್ಬರದ ಬೆಲೆ ಏರಿಸಿದ್ದರಿಂದಲೇ 4000ಕೋಟಿಗಿಂತ ಹೆಚ್ಚು ಇತ್ತೀಚಿನ ರೈಲ್ವೇ ಬಜೆ

ನೇರ ತೆರಿಗೆ ಕಡಿತ - ಬಂಡವಾಳಶಾಹಿಗಳಿಗೆ ಐನೂರು ಕೋಟಿ ರೂ ದಾನ

- 5 ವರ್ಷಗಳ ಕಾಲ ಹೊಸ ವಿದ್ಯುತ್ ಕ್ಷೇತ್ರದ ಬಂಡವಾಳ ಹೂಡಿಕೆಗೆ ತೆರಿಗೆ ರಜಾ.
- ಈಗ ರಫ್ತಿಗೆ ಮೀಸಲಾದ ಮುಕ್ತ ಬಂದರು ಪ್ರದೇಶಗಳಲ್ಲಿ ಮಾತ್ರ ಇರುವ 5 ವರ್ಷದ ತೆರಿಗೆ ರಜಾವನ್ನು ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್, ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ಗಳಿಗೆ ಅನ್ವಯ.
- ಈಶಾನ್ಯ ಭಾರತದ ರಾಜ್ಯಗಳು, ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶ ಮುಂತಾದ ಕೈಗಾರಿಕಾ ಹಿಂದುಳಿದ ರಾಜ್ಯಗಳಲ್ಲಿ ಸ್ಥಾಪಿಸುವ ಕೈಗಾರಿಕೆಗಳಿಗೆ 5 ವರ್ಷದ ತೆರಿಗೆ ರಜಾ.
- ಶೇರು ಮುಂತಾದವುಗಳಲ್ಲಿ ಹಣ ಹೂಡುವ ವಿದೇಶೀ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ.
- 'ಉಡುಗೊರೆ ತೆರಿಗೆ' ಮತ್ತು 'ಐಶ್ವರ್ಯ ತೆರಿಗೆ'ಗಳಲ್ಲಿ ಕೆಲವು ರಿಯಾಯಿತಿಗಳು.
- ಸಾಫ್ಟ್‌ವೇರ್ ರಫ್ತಿಗೆ ಇನ್ನೊಂದು ವರ್ಷ ಪೂರ್ಣ ತೆರಿಗೆ ವಿನಾಯಿತಿ.

ನಮ್ಮ ಬದುಕನ್ನು ಜೂಜಾಟಗಾರರ ಕೈಗಿಟ್ಟ ಬಜೆಟ್ ನೀತಿ

ಜಿ.ಎಸ್.ಮಣಿ

ವಿದೇಶೀ ವ್ಯಾಪಾರ ಹೇಗೆ ನಡೆಯುತ್ತದೆ?

ಅಮೇರಿಕಾದಿಂದ ನಾವು ಏನನ್ನಾದರೂ ಕೊಳ್ಳುವುದಾದರೆ ಅವರಿಗೆ ಅವರ ಹಣವಾದ ಡಾಲರುಗಳನ್ನು ನೀಡಿ ಕೊಳ್ಳಬೇಕು. ಹಾಗೆ ಭಾರತದಿಂದ ಅಮೇರಿಕಾದವರು ಕೊಳ್ಳುವುದಾದರೆ ಅವರು ರೂಪಾಯಿಗಳನ್ನು ನೀಡಿ ಕೊಳ್ಳಬೇಕು. ನಾವು ಅಮೇರಿಕಾದವರಿಗೆ ಮಾರಿದಾಗ ಬರುವ ಡಾಲರುಗಳಿಂದ ಅಲ್ಲಿಯ ಸರಕುಗಳನ್ನು ಕೊಳ್ಳಬಹುದು. ಹಾಗೆಯೇ ಅವರು ನಮಗೆ ಸರಕುಗಳನ್ನು ಮಾರಿದಾಗ ಬರುವ ರೂಪಾಯಿಗಳನ್ನೇ ನಮ್ಮಿಂದ ಸರಕುಗಳನ್ನು ಕೊಳ್ಳಲು ಬಳಸುತ್ತಾರೆ.

ಅಂದರೆ ವ್ಯಾಪಾರ ವಿನಿಮಯದ ಮೇಲೆ ಹಣಕಾಸಿನ ವಿನಿಮಯವೂ ಇರುತ್ತದೆ. ಆದರೆ ನಿಜವಾದ ಪರಿಸ್ಥಿತಿ ಇಷ್ಟು ಸರಳವಾಗಿಲ್ಲ. ಎರಡನೇ ಮಹಾಯುದ್ಧದ ನಂತರದಲ್ಲಿ ಅಮೇರಿಕಾ ಜಾಗತಿಕ ವ್ಯಾಪಾರದಲ್ಲಿ ಮೊದಲ ಸ್ಥಾನಕ್ಕೇರಿತು. ಈಗ ಜಾಗತಿಕ ವ್ಯಾಪಾರಗಳಲ್ಲಿ ಅಮೇರಿಕಾದ ಹಣವಾದ ಡಾಲರ್ ಬಹುಮುಖ್ಯ ವಿನಿಮಯ ಹಣವಾಗಿದೆ. ಆದ್ದರಿಂದಲೇ ಡಾಲರ್ ಇರುವಾತ ಜಗತ್ತಿನ ಎಲ್ಲಾ ದೇಶಗಳೊಂದಿಗೆ ವ್ಯಾಪಾರ ಮಾಡಬಲ್ಲವನಾಗುತ್ತಾನೆ. ಅಮೇರಿಕನ್ನರು ಯಾವಾಗಲೂ ಡಾಲರ್‌ನ ಬೆಲೆಯನ್ನು ಮೇಲೆ ಏರಿಸಲು ಪ್ರಯತ್ನಿಸುತ್ತಾರೆ.

ಭಾರತ ತನ್ನ ಜಾಗತಿಕ ವ್ಯಾಪಾರಗಳಿಗೆ ಬಹಳವಾಗಿ ಡಾಲರುಗಳನ್ನೇ ಬಳಸಿಕೊಳ್ಳುತ್ತದೆ. ಭಾರತ ಅಮೇರಿಕಕ್ಕೆ ಮಾಡುವ ರಫ್ತಿನಿಂದ ಈ ಡಾಲರುಗಳು ಬರುತ್ತವೆ. ಅಮೇರಿಕಾದಲ್ಲಿ ದುಡಿಯುತ್ತಿರುವ ಭಾರತೀಯರು ಕಳುಹಿಸುವುದರಿಂದಲೂ ಡಾಲರ್ ಬರುತ್ತದೆ.

ಡಾಲರ್‌ಗೆ ಭಾರತದ ರೂಪಾಯಿಗಳ ಎರಡು ಬೆಲೆ ಇರುತ್ತದೆ. ಒಂದು ಕಾಳಸಂತೆಯ ಬೆಲೆ. ಈ ಬೆಲೆಯ ಪ್ರಕಾರ ಈಗ ಒಂದು ಡಾಲರ್‌ನ ಬೆಲೆ 32 ರೂಪಾಯಿಗಳು. ಕಾಳಸಂತೆಯಲ್ಲದೆ ಭಾರತ ಸರಕಾರ ನಿರ್ಧರಿಸುವ ಬೆಲೆಯೊಂದಿತ್ತು. ಅದರ ಪ್ರಕಾರ ಒಂದು ಡಾಲರಿನ ಬೆಲೆ 26 ರೂಪಾಯಿಗಳು.

ಈಗ ಬಂದಿರುವ ಏಕೀಕೃತ ವಿನಿಮಯ ಪದ್ಧತಿ ಎಂದರೇನು?

ನಾವು ಪೆಟ್ರೋಲಿಯಂ, ಅಡಿಗೆ ಎಣ್ಣೆ, ರಸಗೊಬ್ಬರ ಇತ್ಯಾದಿಗಳನ್ನು ಆಮದು ಮಾಡಿಕೊಳ್ಳುತ್ತೇವೆ. ಇವುಗಳಿಗೆ ಡಾಲರ್ ಬೇಕು. ಇಲ್ಲಿಯವರೆಗೆ ಈ ಡಾಲರನ್ನು ಒಂದಕ್ಕೆ 26ರೂಪಾಯಿಗಳಂತೆ ಪಡೆಯುತ್ತಿದ್ದೆವು. ಆದರೆ ಈಗ ಸರಕಾರ ಒಂದೇ ರೀತಿಯ ವಿನಿಮಯ ಪದ್ಧತಿ ತಂದಿರುವುದರಿಂದ ಸರಕಾರ ಡಾಲರಿಗೆ ಯಾವುದೇ ಬೆಲೆ ನಿರ್ಧರಿಸಲಾರದು. ಆದ್ದರಿಂದ ಡಾಲರಿನ ಬೆಲೆ ಮೇಲೆ ಹೇಳಿದ ಕಾಳಸಂತೆಯ ಬೆಲೆ ಅಂದರೆ 32 ರೂಪಾಯಿಗಳು. ಮಾರುಕಟ್ಟೆಯ ಮೇಲೆ ಅವಲಂಬಿಸುವ ಈ ವಿನಿಮಯ ಪದ್ಧತಿಯಿಂದಾಗಿ ನಾವು ನಮ್ಮ ಎಲ್ಲ ಆಮದುಗಳಿಗೆ [illegible] 32 ರೂಪಾಯಿ ದರದಲ್ಲಿ ಕೊಂಡುಕೊಳ್ಳಬೇಕು. [illegible] ಒಂದೆ 26 ರೂಪಾಯಿಗಳಿಗೆ ದೊರೆಯುತ್ತಿದ್ದ ಸರಕು ಈಗ 32 ರೂಪಾಯಿಗಳನ್ನು ತೆತ್ತರೆ ಮಾತ್ರ ದೊರೆಯುತ್ತದೆ.

ಅಂದರೆ ಡಾಲರಿನ ಬೆಲೆ ಆರು ರೂಪಾಯಿಗಳಷ್ಟು ಏರಿತು ಅಥವಾ ರೂಪಾಯಿಯ ಬೆಲೆ ಅಷ್ಟು ಕುಸಿಯಿತು ಎನ್ನುತ್ತೀರಿ ಅಲ್ಲವೇ? ಹೌದು. ಅದು ಹಾಗೆ ಆಗಿರುವುದು. ಆದರೆ ಅಷ್ಟೇ ಅಲ್ಲ, ಇದಕ್ಕೆ ಇನ್ನೂ ಹೆಚ್ಚಿನ ಅರ್ಥಗಳಿರುತ್ತವೆ.

ಭಾರತ ಸರಕಾರ ಡಾಲರಿನ ಬೆಲೆ ನಿರ್ಧರಿಸುವ ಸಾಮರ್ಥ್ಯ ಕಳೆದುಕೊಂಡಾಗ ಡಾಲರಿನ ರೂಪಾಯಿ ಬೆಲೆ ಮಾರುಕಟ್ಟೆಯ ಮೇಲೆ ನಿರ್ಧರಿತವಾಗುತ್ತವೆ. ಡಾಲರಿನ ಬೆಲೆ ನಿರ್ಧರಿಸುವ ಅಂಶಗಳು ಕೆಳಗಿನಂತಿವೆ.

1. ಕಾಳಸಂತೆಯಲ್ಲಿ ಡಾಲರಿನ ಬೆಲೆ ಎಷ್ಟು ಎಂಬುದು.
2. ಮಾರುಕಟ್ಟೆಯಲ್ಲಿ ಡಾಲರಿನ ಲಭ್ಯತೆಯ ಮೇಲೆ ಯಾರಾದರೂ ಡಾಲರಿನ ಅಭಾವವನ್ನು ಕೃತ್ರಿಮವಾಗಿ ಸೃಷ್ಟಿಸಬಹುದು. ಸಟ್ಟಾ ವ್ಯಾಪಾರಿಗಳು ಅಥವಾ ಜೂಜುಕೋರರು ಒಮ್ಮೆಲೆ ಡಾಲರುಗಳನ್ನು ಕೊಂಡು ಡಾಲರಿನ ಬೆಲೆಯನ್ನು ಹೆಚ್ಚಿಸಬಹುದು.
3. ನಮ್ಮ ಆಮದು, ರಫ್ತಿನ ಮೇಲೆ. ನಮ್ಮ ರಫ್ತು ಹೆಚ್ಚಾಗಿದ್ದರೆ ಹೆಚ್ಚು ಡಾಲರುಗಳು ನಮ್ಮ ಕೈಯಲ್ಲಿದ್ದ ಇವನ್ನು ಆಮದಿಗೆ ಬಳಸಿಕೊಳ್ಳಬಹುದು. ಆಮದು ಹೆಚ್ಚಾದರೆ ಡಾಲರಿನ ಅಭಾವವುಂಟಾಗಿ ಅದರ ಬೆಲೆ ಏರುತ್ತದೆ.
4. ಸರಕಾರದ ಬಳಿ ವಿದೇಶೀ ವಿನಿಮಯ ನಿಧಿ ಎಷ್ಟಿದೆ ಎಂಬುದರ ಮೇಲೂ ಡಾಲರಿನ ಬೆಲೆ ನಿರ್ಧರಿತವಾಗುತ್ತದೆ. ಬಹುತೇಕ ಈ ನಿಧಿ ನಮ್ಮ ಆಮದು, ರಫ್ತಿನ ಮೇಲೆ ಅವಲಂಬಿಸಿರುತ್ತದೆ.

ಮೇಲಿನವುಗಳನ್ನು ನೋಡಿದಾಗ ನಮ್ಮ ದೇಶದ ಆಮದು ಮತ್ತು ರಫ್ತು ಪ್ರಮಾಣಗಳ ಮೇಲೆ ಡಾಲರ್‌ನ ಬೆಲೆ ನಿರ್ಧರಿತವಾಗುತ್ತದೆ ಎಂಬುದು ಮನವರಿಕೆಯಾಗುತ್ತದೆ.

ಕೆಳಗಿನವುಗಳನ್ನು ನೋಡಿದರೆ ನಮ್ಮ ಆಮದು ರಫ್ತಿಗಿಂತ ಹೆಚ್ಚಾಗುತ್ತದೆ ಎಂಬುದು ಸ್ಪಷ್ಟ.

1. ಸರಕಾರ ಇತ್ತೀಚೆಗೆ ಆಮದನ್ನು ಉದಾರೀಕರಿಸಿದೆ. ಟಿವಿ, ವಿಸಿಆರ್, ರೇಡಿಯೋ ಇತ್ಯಾದಿ 35 ಸರಕುಗಳ ಆಮದಿನ ಮೇಲೆ ಹಲವು ನಿರ್ಬಂಧಗಳನ್ನು ಸರಕಾರ ತೆಗೆದುಹಾಕಿರುವುದರಿಂದ ಆಮದು ಹೆಚ್ಚಾಗಲೇಬೇಕು.
2. ಆಮದು ಸುಂಕವನ್ನೂ ಸಹ ಸರಕಾರ ಕಡಿಮೆ ಮಾಡಿದೆ. ಇದರಿಂದಲೂ ಆಮದು ಹೆಚ್ಚಾಗುತ್ತದೆ.
3. ಡಾಲರಿಗೆ ಮಾರುಕಟ್ಟೆಯ ಬೆಲೆಯಾದ 32 ರೂಪಾಯಿಗಳನ್ನು ನೀಡುವುದರಿಂದ ಆಮದಿನ ಬೆಲೆಯೂ ಹೆಚ್ಚಾಗುತ್ತದೆ.

ಮೇಲಿನ ಎಲ್ಲವೂ ರೂಪಾಯಿಯ ಬೆಲೆಯನ್ನು ಇಳಿಸಿ ಡಾಲರಿನ ಬೆಲೆಯನ್ನು ಹೆಚ್ಚಿಸುತ್ತವೆ.

ಇದರಿಂದ ಆಗುವುದೇನು?

1. ನಾವು ಪೆಟ್ರೋಲಿಯಂ, ಆಹಾರ ಧಾನ್ಯಗಳು, ಅಡಿಗೆ ಎಣ್ಣೆ, ರಸಗೊಬ್ಬರ ಇತ್ಯಾದಿಗಳನ್ನೆಲ್ಲಾ ಹೆಚ್ಚಿನ ಬೆಲೆಗೆ ಆಮದು ಮಾಡಿಕೊಳ್ಳಬೇಕಾಗುವುದರಿಂದ ನಮ್ಮ ದೇಶದೊಳಗೆ ಬೆಲೆಗಳು ಯದ್ವಾತದ್ವಾ ಏರುತ್ತವೆ.
2. ಬೆಲೆಗಳು ಏರಿದಂತೆ ನಮ್ಮ ಸರಕುಗಳು ತುಟ್ಟಿಯಾಗಿ ವಿದೇಶೀಯರು ಅವನ್ನು ಕೊಂಡುಕೊಳ್ಳುವುದಿಲ್ಲ. ಆದರಿಂದ ವಿದೇಶೀ ವಿನಿಮಯದ ಕೊರತೆ ಇನ್ನೂ ಹೆಚ್ಚಾಗಿ ರೂಪಾಯಿಯ ಬೆಲೆ ಇನ್ನೂ ಕುಸಿಯುತ್ತವೆ.
3. ಆಮದು ಹೆಚ್ಚಳದಿಂದ ವ್ಯಾಪಾರ ಬಾಕಿ ಹೆಚ್ಚುತ್ತದೆ. ಈ ಬಾಕಿ ತೀರಿಸಲು ನಾವು ಹೆಚ್ಚು ಹೆಚ್ಚು ವಿಶ್ವಬ್ಯಾಂಕ್ ಐಎಂಎಫ್‌ಗಳ ಸಾಲಕ್ಕೆ ಮೊರೆ ಹೋಗಬೇಕಾಗುತ್ತದೆ. ಇದರಿಂದ ಸಾಲ ಹೆಚ್ಚಾಗುತ್ತಾ ಹೋಗುತ್ತದೆ. ಆದರೆ ಈ ಸಾಲ ಅಭಿವೃದ್ಧಿ ಕಾರ್ಯಗಳಿಗೆ ದೊರೆಯುವುದಿಲ್ಲ. ಸಾಲದ ವಿಷ ವೃತ್ತದೊಳಗೆ ಸಿಲುಕಿ ನಮ್ಮ ಸಾರ್ವಭೌಮತ್ವವನ್ನೇ ಕಳೆದುಕೊಳ್ಳಬೇಕಾಗುತ್ತದೆ.
4. ದೇಶದೊಳಗೆ ಹಣದುಬ್ಬರ ತೀವ್ರ ಹೆಚ್ಚಾಗುತ್ತದೆ. ಇದರಿಂದ ಉದ್ಯಮಗಳು ಮುಚ್ಚಿ ನಿರುದ್ಯೋಗ ಹೆಚ್ಚುತ್ತದೆ.

ಇಂತಹ ದೇಶಕ್ಕೇ ಮಾರಕವಾದ ಕ್ರಮವನ್ನು ಸರಕಾರ ಕೈಗೊಳ್ಳುವುದರ ಹಿನ್ನೆಲೆ ಏನು?

1. ವಿಶ್ವಬ್ಯಾಂಕ್ ಮತ್ತು ಐಎಂಎಫ್‌ಗಳು ಸತತವಾಗಿ ಈ ಕ್ರಮ ಕೈಗೊಳ್ಳಲು ಒತ್ತಡ ಹೇರುತ್ತಲೇ ಇದ್ದವು. ಅವುಗಳ ಪ್ರಕಾರ ಈ ಕ್ರಮದಿಂದ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಭಾರತದ ಸ್ಪರ್ಧಾತ್ಮಕತೆ ಹೆಚ್ಚಿ ಭಾರತ ಬೇಗ ಅಭಿವೃದ್ಧಿ ಹೊಂದುವುದಂತೆ!!(ಇದಕ್ಕೆ ಬದಲು ಈ ಕ್ರಮದಿಂದ ದೇಶವೇ ದಿವಾಳಿಯೆದ್ದು ಹೋಗುತ್ತದೆ ಎಂಬುದು ಮೇಲಿನ ಅಂಶಗಳಿಂದ ಸ್ಪಷ್ಟವಲ್ಲವೇ?)

   ವಿಶ್ವಬ್ಯಾಂಕ್ ಐಎಂಎಫ್‌ಗಳಲ್ಲಿ ದೊಡ್ಡ ಪಾಲಿರುವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಭಾರತವನ್ನು ಕೊಳ್ಳೆಹೊಡೆಯಲಂತೂ ಇದು ಸಹಾಯ ಮಾಡುತ್ತದೆ.
2. ಬಂಡವಾಳಿಗರ ಭೋಗದ ವಸ್ತುಗಳ ಆಮದಿಗ ಇದು ಅನುಕೂಲ ಮಾಡಿಕೊಡುತ್ತದೆ. ಆದ್ದರಿಂದ ಬಂಡವಾಳಿಗರೂ ಈ ಕ್ರಮಕ್ಕಾಗಿ ಒತ್ತಾಯಿಸುತ್ತಿದ್ದರು.
3. ರಫ್ತುದಾರರಿಗೆ ಹೆಚ್ಚು ರೂಪಾಯಿಗಳು ದೊರೆಯುವುದರಿಂದ ಅವರೂ ಇದಕ್ಕಾಗಿ ಒತ್ತಾಯಿಸುತ್ತಿದ್ದಾರೆ. ರಫ್ತಿನಿಂದ ಹೆಚ್ಚು ಹಣ ದೇಶಕ್ಕೆ ಬರುವುದೇನೋ ಹೌದು. ಆದರೆ ಅದೇ ರೀತಿ ಆಮದಿನ ಬೆಲೆಯೂ ಹೆಚ್ಚುವುದರಿಂದ ದೇಶಕ್ಕೆ ಹೆಚ್ಚು ಹಾನಿಯೇ ಆಗುವುದು.

ಈ ಕ್ರಮ ಬಂದ ನಂತರ.....

ರೂಪಾಯಿಯ ಬೆಲೆ ಭದ್ರವಾಗೇ ಇದೆ ಎಂದು ವರದಿಯಾಗುತ್ತಿದೆ. ಇದು ಇನ್ನು ಕೆಲವು ದಿನಗಳ ಕಾಲ ಮುಂದುವರಿಯಬಹುದು. ಆದರೆ ಕೆಲವು ವಾರಗಳಲ್ಲಿ ರೂಪಾಯಿಯ ಬೆಲೆ ಕುಸಿಯುತ್ತದೆ.

ಹಾಗೆ ಬೆಲೆ ಕುಸಿದರೆ ಭಾರತೀಯ ರಿಸರ್ವ್ ಬ್ಯಾಂಕ್‌ನ ಮೂಲಕ ಸರಕಾರ ಹಣದ ಮಾರುಕಟ್ಟೆ ಪ್ರವೇಶಿಸಿ ಪರಿಸ್ಥಿತಿಯನ್ನು ನಿಯಂತ್ರಿಸಬಹುದು ಎಂಬುದು ಸರಕಾರದ ನಿಲುವು. ಆದರೆ ಇದಕ್ಕೆ ಹೆಚ್ಚು ಸಂಪನ್ಮೂಲ ಬೇಕಾಗುತ್ತದೆ. ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಅದಿಲ್ಲ.

ಆದ್ದರಿಂದ ಇಂತಹ ಪರಿಸ್ಥಿತಿಯನ್ನು ನಿಭಾಯಿಸಲು ಸರಕಾರ 3 ಶತಕೋಟಿ ಡಾಲರುಗಳ ಸಾಲವನ್ನು ವಿಶ್ವಬ್ಯಾಂಕ್- ಐಎಂಎಫ್‌ಗಳಿಂದ ಪಡೆಯಲೆತ್ನಿಸಿದೆ.

ಈ ಎಲ್ಲಾ ಸಮಸ್ಯೆಗಳಿಗೂ ಸರಕಾರದ ಬಳಿ ಒಂದೇ ಉತ್ತರವಿದೆ. ಅದು ವಿಶ್ವಬ್ಯಾಂಕ್ ಐಎಂಎಫ್‌ಗಳಿಂದ ಸಾಲ ಪಡೆಯುವುದು.

1800 ಕೋಟಿಗಿಂತ ಹೆಚ್ಚು. ಮತ್ತೆ ...ರಿಕೆಗಳಿಂದ ಎಷ್ಟು? ಹೋದ ವರ್ಷದ ...ಕೇವಲ 2210.9 ಕೋಟಿ ರೂನಷ್ಟು ...ದ್ದರೆ ಈಗ ವರ್ಷ ಪೂರ್ತಿ ಜನಸಾಮಾ ...ತರಿಸುತ್ತಲೇ ಇದ್ದುದರಿಂದ - 11,800 ... ಕತ್ತರಿಸಿದುದರಿಂದ - ಕಾರು, ಕಲರ್ ...ದ ವೈಭೋಗದ ವಸ್ತುಗಳನ್ನು ಕೊಳ್ಳು ...2 2 ಕೋಟಿ ರೂ ದಾನ ನೀಡಲು ...ು. ಹಾವನ್ನು ಹೊಡೆದು ಹದ್ದಿಗೆ ...ಯಿತು. ಜೊತೆಗೆ ಬಜೆಟ್ ಕೊರತೆಯನ್ನು ...ಯೋ ಅತೀ ಕಡಿಮೆ ಎನ್ನುವಷ್ಟು ತಗ್ಗಿ ...ದು ಹೆಗ್ಗಳಿಕೆ ಹೇಳಿಕೊಳ್ಳಲು ಸಾಧ್ಯವಾ...

...ು ಕೂಡ ಮೇಲ್ನೋಟಕ್ಕೆ ಮಾತ್ರ ಕಾಣುವ ... ಆದರೆ ಆಮದು ಸುಂಕ, ತೆರಿಗೆ ಕಡಿ...ನ್ನು ಆಳವಾದ, ನಿಧಾನಕ್ಕೆ ನಮ್ಮನ್ನು ಕಾಡಿ...ಮಗಳಿವೆ. ಇದೇ ಬಜೆಟ್‌ನಲ್ಲಿ ಭಾರೀ ...ಗಳ ಕಾಡಿನಲ್ಲಿ ಅಡಗಿಸಿಟ್ಟ ನರಭಕ್ಷಕ ... ಚಿರತೆಗಳೆಂಬ ಭಯಂಕರ ಮೃಗಗಳೂ, ... ಮೊದಲಾದ ವಿಷ ಜಂತುಗಳೂ ಇವೆ. ...ಗಿ ಒಂದೊಂದಾಗಿ ನಮ್ಮನ್ನು, ನಮ್ಮ ...ಹುತಿ ತೆಗೆದುಕೊಳ್ಳುತ್ತವೆ.

...ಮ್ಮ ಬದುಕಿನ ಆಹುತಿ

...ಇಳಿತ ಮಾಡಿ ಬೆಲೆ ಇಳಿಸಿರುವ ಪ್ರಶ್ನೆ ...ದುಕೊಳ್ಳೋಣ. ಇದರಿಂದ ಯಾರಿಗೆ ... ತಕ್ಷಣ ಮನಸ್ಸಿಗೆ ಬರುವುದು. ಇನ್ನೂ ...ಫ್ರಿಜ್ ಕೊಳ್ಳದಿರುವವ ಆದರೆ ಕೊಳ್ಳಲು ...ರ ಮನಸ್ಸಿನಲ್ಲಿ ನಮಗೆ ಪ್ರಯೋಜನ ...ತಹ ಕೆಲವು ಮಧ್ಯಮ ವರ್ಗದ ದುಡಿ...ಗೆ ಬೆಲೆಯೇರಿಕೆಗಳಿಂದಾಗಿ ಹಲವಾರು ...ಪ್ರತಿ...ಗಳೂ ಕೈಬಿಡುತ್ತಿರುವುದು ಗಮ...

...ದು ತೆರಿಗೆ ಕಡಿತ

- ...ಕೀಟನಾಶಕಗಳಿಗೆ ಶೇಕಡಾ 110ರಿಂದ ...ಡಾ 75ಕ್ಕೆ
- ...ಔಷಧಿಗಳ ಮೇಲೆ 80-110 ಶೇಕ...ಿಂದ 25 ಶೇಕಡಾಕ್ಕೆ
- ...ಸ್ ಆಮದು ಮತ್ತು ಇತರ ಸಾಮಾನ್ಯ ...ತ್ರಗಳಿಗೆ ಶೇಕಡಾ 5 5ರಿಂದ ಶೇಕಡಾ ...
- ...ಲು, ಗಣಿ ಮತ್ತು ಪೆಟ್ರೋಲಿಯಂ ...ಮದ ಆಧುನೀಕರಣಕ್ಕೆ ಬೇಕಾದ ...ತ್ರಗಳ ಆಮದು ತೆರಿಗೆ ಶೇಕಡಾ ...ಿಂದ 25ಕ್ಕೆ, ವಿದ್ಯುತ್ ಉತ್ಪಾದನೆ ...ತ್ರಗಳಿಗೆ ಶೇಕಡಾ 20ಕ್ಕೆ ಇಳಿತ.
- ...ಕ್ಟ್ರಾನಿಕ್ಸ್ ಕೈಗಾರಿಕಾ ಯಂತ್ರಗಳಿಗೆ ...ಡಾ 25ಕ್ಕೆ, ಬಿಡಿ ಭಾಗಗಳಿಗೆ 40-80 ...ಕಾದಿ...20-50 ಶೇಕಡಾಕ್ಕೆ ಇಳಿತ.
- ... ಮತ್ತು ಕಬ್ಬಿಣೇತರ ಲೋಹದ ... ಶೇಕಡಾ 100ರಿಂದ 20 ರಷ್ಟು ...

...? ಜೊತೆಗೆ ಈ ಕೆಲವೇ ಜನ ದುಡಿಯು...ರೆ ಉಳಿದೆಲ್ಲಾ ದುಡಿಯುವ ಜನಕ್ಕೆ- ಕೃಷಿ..., ರೈತರಿಗೆ, ದೊಡ್ಡ ಭಾಗದ ಕಾರ್ಮಿಕ ...ಟುಂಬದ ವಿದ್ಯಾರ್ಥಿಗಳು, ಯುವಕರು, ...ಗೆ ಏನು ಪ್ರಯೋಜನ? ಬೆಲೆಯೇರಿ ...ಅವರ ನಿತ್ಯದ ಅಗತ್ಯಗಳಿಗೆ ಖೋತಾ, ..., ಮನೆಯವರಿಗೆ ಬಟ್ಟೆ, ಬರೆ, ಆರೋ...ದ ರೇಖೆಯ ಕೆಳಗಿರುವವರಿಗೆ ನಿತ್ಯದ ...ೋತಾ. ಅವರು ಗಳಿಸುವ ಹತ್ತಿಪ್ಪತ್ತು ...ಯಲ್ಲಿ ಈ ಬೆಲೆ ಏರಿಕೆ ನಾಲ್ಕೈದು ...ಷ್ಟನ್ನೇ ಕಿತ್ತುಕೊಳ್ಳುತ್ತದೆ. ಆದರೆ ಇಷ್ಟು ...ಿ.

“ಇದನ್ನೇಕೆ ...ಇಳಿಸುವುದಿಲ್ಲ ಸ್ವಾಮಿ”

...ತರು ಕೊಳ್ಳುವ ಆಹಾರಾದದ ವಸ್ತು... ಇಳಿಯುವಂತೆ ಮಾಡಿರುವಾಗಲೇ, ...ೇ ಕರಿಸುತ್ತಿರುವ ಜನಸಾಮಾನ್ಯರಿಗೆ ...ಡಿಗೆ ಎಣ್ಣೆ, ಸೀಮೆಎಣ್ಣೆ, ಡೀಸೆಲ್, ...ು, ರಸಗೊಬ್ಬರ, ಹಲವು ಔಷಧಿಗಳು ...ನಿಕಗಳು ಇತ್ಯಾದಿಗಳ ಮೇಲೆ ಇನ್ನೂ ...ುಂಕವಿದೆ. ವಿದೇಶದಲ್ಲಿ ಅವು ಸಿಗುವ ...ಲವು ಪಟ್ಟು ಹೆಚ್ಚಿಗೆ ಬೆಲೆಗೆ ನಮ್ಮ ದೇಶ...ವಾಗುತ್ತಿದೆ. ಕೇವಲ ತೆರಿಗೆಗಳ ಫಲ...ರ್ ಹಾಗೂ ಅದಕ್ಕೆ ಸಂಬಂಧಿಸಿದ ವಸ್ತು...ಮ್ಮ ದೇಶದ ತೆರಿಗೆಗಳ ಕಾಲು ಭಾಗ

ಬರುತ್ತದೆಂದು ಒಂದು ಅಂದಾಜು. ಈ ತೆರಿಗೆಯನ್ನು ಕಡಿಮೆ ಮಾಡಿದ್ದರೆ, ರೈಲು ಪ್ರಯಾಣ ದರ, ಸಾಗಾಣಿಕೆ ದರ, ಬಸ್ ದರ ಏರಿಕೆಗಳನ್ನು ಮಾಡುವ ಅವಶ್ಯಕತೆಯೇ ಬರುತ್ತಿರಲಿಲ್ಲವಲ್ಲ ಇದನ್ನೇಕೆ ಮಾಡಲಿಲ್ಲ. ಅದೇ ರೀತಿ ಹಲವಾರು ದಿನ ಬಳಕೆಯ ಮೇಲೆ, ಬಟ್ಟೆಯ ಮೇಲೆ ತೆರಿಗೆ ಕಡಿತ ಮಾಡಲಿಲ್ಲವೇಕೆ?

ಕೈಗಾರಿಕಾ ಮರುಭೂಮಿ

ಉತ್ತರಕ್ಕೆ ಈ ತೆರಿಗೆ ಇಳಿತಗಳಿಗೆ ಸಂಬಂಧಿಸಿ

ಎಕ್ಸೈಸ್ ತೆರಿಗೆ ಕಡಿತ

- ಕಾರುಗಳಿಗೆ ಶೇಕಡಾ 55ರಿಂದ 40ಕ್ಕೆ ಕಡಿತ.
- ರೆಫ್ರಿಜರೇಟರ್‌ಗೆ 400-350ರೂ ಕಡಿತ.
- ಕಲರ್ ಟಿವಿಗೆ 1250-2200 ರೂ ಕಡಿತ.
- ಏರ್‌ಕಂಡೀಶನರ್ಸ್‌ಗೆ 7000-17000ರೂ ಕಡಿತ.
- ತ್ರಿಚಕ್ರ ವಾಹನಗಳಿಗೆ 23 ಶೇಕಡಾದಿಂದ, 15 ಶೇಕಡಾಕ್ಕೆ
- ಕೆಲವು ವಿದ್ಯುತ್ ಬಳಕೆ ವಸ್ತುಗಳಿಗೆ ಶೇಕಡಾ 23ರಿಂದ ಶೇಕಡಾ 15 ಕ್ಕೆ
- ಪಾಲಿಯೆಸ್ಟರ್, ನೈಲಾನ್ ನೂಲುಗಳ ಮೇಲೆ ತೆರಿಗೆ ಕಡಿತ
- ಚಾ, ಕಾಫಿ ಮೇಲೆ ಪೂರ್ಣ ಎಕ್ಸೈಸ್ ವಿನಾಯಿತಿ.
- ವನಸ್ಪತಿ - 1900ರೂದಿಂದ 150 ರೂ ಪ್ರತಿ ಟನ್‌ಗೆ
- ಬಿಸ್ಕತ್ತು - 11.5 ಶೇಕಡಾದಿಂದ ಶೇಕಡಾ 7.5ಕ್ಕೆ

ಬರೆದಿರುವ ಪ್ರತ್ಯೇಕ ಲೇಖನ ನೋಡಿ. ಆಗ ಗೊತ್ತಾಗುತ್ತವೆ ಎಂತಹ ತೆರಿಗೆಗಳನ್ನು ಇಳಿಸಲಾಗಿದೆ ಮತ್ತು ಏಕೆ ಎಂದು. ಆಮದು ಸುಂಕ, ದೇಶದೊಳಕ್ಕೆ ವಸ್ತುಗಳನ್ನು ಬಿಡುವ ಕಸ್ಟಮ್ಸ್ ಸುಂಕಗಳನ್ನು ಇಳಿಸಿ ವಿದೇಶದ ದೊಡ್ಡ ದೊಡ್ಡ ಅಂದರೆ ನಮ ದೇಶದ ಟಾಟಾ, ಬಿರ್ಲಾರಿಗಿಂತಲೂ ಹಲವಾರು ಪ... ಶ್ರೀಮಂತರಾದ ಈ ಕಂಪೆನಿಗಳು ತಮ್ಮ ವಸ್ತುಗ...ನ್ನು ಭಾರತಕ್ಕೆ ಹಾಕಿ ನಮ್ಮ ಜನರನ್ನು ಕೊಳ್ಳೆ ಹೊಡೆಯಲೆಂದು, ಐಎಂಎಫ್-ವಿಶ್ವಬ್ಯಾಂಕ್‌ಗಳ ಶರತ್ತು ಪೂರೈಸಲೆಂದು. ಈ ವಸ್ತುಗಳನ್ನು ನಮ್ಮ ದೇಶದಲ್ಲಿಯೇ ತಯಾರಿಸಿದ್ದರೆ ಕೃಷಿ ಕೂಲಿಕಾರರ ರೈತರ, ಕೂಲಿಕಾರರ, ನೌಕರರ ಮಕ್ಕಳಿಗೆ ಸಿಗಬಹುದಾಗಿದ್ದ ನೌಕರಿಗಳು ನಾಶವಾಗುತ್ತವೆ.

ಈಗ ಇಳಿಸಿರುವ ತೆರಿಗೆಗಳು ಮೊದಲ ಹೆಜ್ಜೆ ಮಾತ್ರ. ಮುಂದಿನ ವರ್ಷಗಳಲ್ಲಿ ಇಂತಹ ಇನ್ನೂ ಹಲವು ತೆರಿಗೆ ಇಳಿಕೆಗಳು ಬರುತ್ತವೆಯಂತೆ. ಅದನ್ನು ಆಗಲೇ ತೀರ್ಮಾನ ಮಾಡಲಾಗಿದೆ ಎಂದು ಬಜೆಟ್ ಭಾಷಣ ಹೇಳುತ್ತದೆ. ಅಂದರೆ ಭಾರತ ಒಂದು ದೊಡ್ಡ ಹಸಿದ ಜನ ತುಂಬಿ ತುಳುಕುವ ಮರುಭೂಮಿ - ಕೈಗಾರಿಕಾ ಮರುಭೂಮಿ.

ಜನರ ಬದುಕಿನ ಜೊತೆ ಚೆಲ್ಲಾಟ

ಭಾರತದ ರೂಪಾಯಿಯನ್ನು ಪೂರ್ಣ ಪರಿವರ್ತನೀಯವಾಗಿ ಮಾಡಿದೆಯಂತೆ ಸರಕಾರ. ಸಂತೋಷದಿಂದ ಕುಣಿದು ಕುಪ್ಪಳಿಸುತ್ತಿದ್ದಾರೆ ನಮ್ಮ ದೇಶದ ದೊಡ್ಡ ದೊಡ್ಡ ಬಂಡವಾಳಶಾಹಿಗಳು. ಈಗಾಗಲೇ ಹಿಂದಿನ ವರ್ಷಗಳಲ್ಲಿ ದೇಶದ ಒಳಕ್ಕೆ ವಿದೇಶದ ಹಲವಾರು ವಸ್ತುಗಳನ್ನು ಖುಷಿ ಬಂದಂತೆ ಆಮದು ಮಾಡಿಕೊಳ್ಳಬಹುದು ಎಂದು ಒಜಿಎಲ್‌ಗೆ(ಒಪನ್ ಜನರಲ್ ಲೈಸೆನ್ಸಿಂಗ್) ಬಿಟ್ಟಿತ್ತು ಸರಕಾರ. ಆದರೆ ಅದನ್ನು ಮಾಡಬೇಕಾದರೆ ಅವರುಗಳ ಕೈಯಲ್ಲಿ ಡಾಲರುಗಳು ಬೇಕಲ್ಲ. ಹಿಂದಿನ ವರ್ಷ ನಮ್ಮ ದೇಶಕ್ಕೆ ಬರುವ ಡಾಲರುಗಳಲ್ಲಿ ಶೇ. 60 ಭಾಗವನ್ನು ಮಾತ್ರ ಈ ಜನ ಮಾರುಕಟ್ಟೆಯಲ್ಲಿ ಕೊಳ್ಳಲು ಬಿಡಬಹುದೆಂದು ನಿರ್ಧಾರ ಮಾಡಿತ್ತು. ಈ ವರ್ಷ ವಾಣಿಜ್ಯ ಉದ್ದೇಶಗಳಿಗೆ ಪೂರ್ಣವಾಗಿ ಪರಿವರ್ತನೆಗೆ ಅವಕಾಶ ಕೊಟ್ಟಿದ್ದೇವೆಂದು ಘೋಷಿಸಿದೆ. ಇದರ ಪರಿಣಾಮ ಏನು, ಪ್ರತ್ಯೇಕ ಲೇಖನ ಇದೆ ಓದಿ.(ನಮ್ಮ ಬದುಕನ್ನು ಜೂಜಾಟಗಾರರ ಕೈಯಲ್ಲಿಟ್ಟ ಬಜೆಟ್ ನೀತಿ).

ಆದರೆ ಅದರ ಫಲ ಮತ್ತೆ ಬೇಕಾದಷ್ಟು ಆಮದು. ಭಾರತದ ಕೈಗಾರಿಕೆಗಳ ನಾಶ ಇದು ಒಂದೆಡೆ ಮತ್ತೊಂದೆಡೆ ಭಾರತದ ಜನ ಸಾಮಾನ್ಯರಿಗೆ ಬೇಕಾದ ಎಲ್ಲಾ ವಸ್ತುಗಳೂ ಹೇಗೆಂದರೆ ಹಾಗೆ ಬೆಲೆ ಏರಬಹುದು. ಡಾಲರಿನ ಬೆಲೆ ಏರಿದಂತೆ. ಕೆಲವೇ ಜನ ಹರ್ಷದ್ ಮೆಹ್ತಾ, ಭೂಪೇನ್ ದಲಾಲ್, ಹಿತೇನ್ ದಲಾಲ್‌ಗಳು ಡಾಲರುಗಳನ್ನು ಹಿಡಿದು, ಕಳ್ಳ ಸಾಗಾ

ಪುಟ 8 ಕ್ಕೆ



ಕೃಪೆ : ಮಹಮ್ಮದ್

ಆಹಾ ತೆರಿಗೆ ಇಳಿಕೆಯಂತೆ! ಕಾರು, ಟಿವಿ ಅಗ್ಗವಂತೆ! ನಮಗೂ ನಿಮಗೂ ಏನಂತೆ! ಡುಂ ಡುಂ ಡುಂ

ಶರತ್‌ಚಂದ್ರ

‘ಬಜೆಟ್ ಪೂರ್ವ ದರಗಳಲ್ಲಿ ಅಮೋಘ ಮಾರಾಟ,’ ‘ಬಜೆಟ್ ನಂತರದ ಹೆಚ್ಚಿನ ದರ ತಪ್ಪಿಸಲು ಈಗಲೇ ಕೊಳ್ಳಿ’ ಮುಂತಾದ ಜಾಹೀರಾತುಗಳು ಹಿಂದಿನ ವರ್ಷಗಳಲ್ಲಿ ಬಜೆಟ್ ಪೂರ್ವ ಅವಧಿಯಲ್ಲಿ ಸರ್ವೆ ಸಾಮಾನ್ಯವಾಗಿತ್ತು. ಆದರೆ ಈ ಬಾರಿ ಇಂತಹ ಜಾಹೀರಾತುಗಳ ಪತ್ತೆಯೇ ಇರಲಿಲ್ಲ. ಯಾಕೆಂದರೆ ಕೈಗಾರಿಕೋದ್ಯಮಿಗಳು, ವಾಣಿಜ್ಯೋದ್ಯಮಿಗಳು ಈ ಬಾರಿ ಆಮದು ಮತ್ತು ಎಕ್ಸೈಸ್ ತೆರಿಗೆಗಳಲ್ಲಿ ಕಡಿತ ನಿರೀಕ್ಷಿಸುತ್ತಿದ್ದರು. ಬಜೆಟ್‌ನ ಗುಟ್ಟು ಒಂದು ರೀತಿಯಲ್ಲಿ ಮೊದಲೇ ರಟ್ಟಾಗಿತ್ತು. ಯಾಕೆಂದರೆ ಕಳೆದ ಬಜೆಟ್ ಭಾಷಣದಲ್ಲೇ ಮನಮೋಹನಸಿಂಗ್‌ರು ‘ಸದ್ಯದಲ್ಲೇ ರಾಜಾ ಚೆಲ್ಲಯ್ಯ ಸಮಿತಿ ವರದಿಯಂತೆ ತೆರಿಗೆ ಪದ್ಧತಿಯಲ್ಲಿ ‘ಸುಧಾರಣೆ’ಗಳನ್ನು ತರುವ’ - ಭರವಸೆ ನೀಡಿದ್ದರು. ರಾಜಾ ಚೆಲ್ಲಯ್ಯ ಸಮಿತಿ ಐಎಂಎಫ್-ವಿಶ್ವಬ್ಯಾಂಕ್ ತೆರಿಗೆಗಳ ಸಂಬಂಧದಲ್ಲಿ ಯಾವ ನೀತಿ ಬಯಸಿದ್ದವೋ ಅದನ್ನೇ ಸೂಚಿಸಿತು ಎಂಬುದು ತೀರಾ ಆಕಸ್ಮಿಕ! ಅದನ್ನು ಪೂರ್ಣವಾಗಲ್ಲದಿದ್ದರೂ ಬಹುಪಾಲು ಮನಮೋಹನಸಿಂಗರ 1993-94ರ ಬಜೆಟ್ ಈಡೇರಿಸಿದೆ ಎಂಬುದು ಆಕಸ್ಮಿಕವಲ್ಲ. ಶ್ರೀಮಂತರಿಗೆ ಮತ್ತು ಅವರಿಗೆ ಬೇಕಾದ ಭೋಗವಸ್ತುಗಳಿಗೆ ತೆರಿಗೆ ಕಡಿಮೆ ಮಾಡುವ ಈ ನೀತಿಯನ್ನು ಬಜೆಟ್ ಅನುಸರಿಸಿದೆ.

ರಾಜಾ ಚೆಲ್ಲಯ್ಯ ಸಮಿತಿಯ ಮುಖ್ಯ ಶಿಫಾರಸುಗಳೆಂದರೆ - ನೇರ ಅಥವಾ ಪ್ರತ್ಯಕ್ಷ ತೆರಿಗೆಗಳನ್ನು ಕಡಿಮೆ ಮಾಡುವುದು. ಮುಂದಿನ ಐದು ವರ್ಷಗಳಲ್ಲಿ ಆಮದು ತೆರಿಗೆಯನ್ನು ಶೇಕಡಾ 25ಕ್ಕಿಂತ ಹೆಚ್ಚಾಗಿರದಂತೆ ಹಂತ ಹಂತವಾಗಿ ಕಡಿಮೆ ಮಾಡುವುದು. ಅದೇ ರೀತಿ ಕೈಗಾರಿಕೆಗಳ ಮೇಲೆ ಹೇರುವ ಎಕ್ಸೈಸ್ ತೆರಿಗೆಯನ್ನು ಶೇಕಡಾ 5ರಿಂದ 30ರೊಳಗೆ ಮಿತಿಗೊಳಿಸುವುದು. ಇನ್ನೊಂದು ವರದಿಯ ಮುಖ್ಯಾಂಶವೆಂದರೆ ತೆರಿಗೆ ಕಡಿಮೆ ಮಾಡಿದರೆ ಬಂಡವಾಳ ಹೂಡಿಕೆಗೆ, ಉತ್ಪಾದನೆಗೆ ಕುಮ್ಮಕ್ಕು ಸಿಗುವುದು. ಆಮದು ತೆರಿಗೆ ಕಡಿಮೆ ಮಾಡಿದರೆ ಸ್ಥಳೀಯ ಕೈಗಾರಿಕೆ ಆಮದಾದ ಸರಕಿನೊಂದಿಗೆ ಪೈಪೋಟಿಗೆ ನಿಲ್ಲಬೇಕಾದ್ದರಿಂದ, ಅದರ ದಕ್ಷತೆ ಹೆಚ್ಚುವುದು ಎಂಬ ಸಿದ್ಧಾಂತ.

ಇದು ಭಾರತದಂತಹ ವಿಕಾಸಶೀಲ ದೇಶದ ಬೆಳವಣಿಗೆಗೆ ಬೇಕಾದ ನೀತಿಗೆ ತದ್ವಿರುದ್ಧ. ಭಾರತದಂತಹ ಆರ್ಥಿಕ ಸಂಪನ್ಮೂಲ ಕೊರತೆ ಇರುವ ದೇಶದಲ್ಲಿ ಬೆಳವಣಿಗೆಗೆ ಬೇಕಾದ ಬಂಡವಾಳ ಒದಗಿಸಲು, ಸಮಾಜದ ಶ್ರೀಮಂತ ವಿಭಾಗದ ಮೇಲೆ ನೇರ ತೆರಿಗೆಗಳನ್ನು ಹೇರಬೇಕು. ಹೆಚ್ಚಿನ ಆಮದು ಇರುವವರ ತೆರಿಗೆ ದರ ಹೆಚ್ಚಿರಬೇಕು. ಆಮದು ತೆರಿಗೆ ದರಗಳು ಅಮೂಲ್ಯ ವಿದೇಶೀ ವಿನಿಮಯವನ್ನು ದೇಶದಲ್ಲಿ ಲಭ್ಯವಿಲ್ಲದ, ಉತ್ಪಾದಿಸಲಾಗದ ಆದರೆ ಅಗತ್ಯವಿರುವ ಕಚ್ಚಾ ವಸ್ತು, ಸರಕುಗಳು, ಯಂತ್ರಗಳ ಆಮದಿಗೆ ವಿನಿಯೋಗಿಸುವಂತಿರಬೇಕು. ಆಮದು ತೆರಿಗೆ ಇತರ ಅನವಶ್ಯಕ ಆಮದುಗಳನ್ನು ಪ್ರೋತ್ಸಾಹಿಸಬಾರದು. ವಿದೇಶೀ ಬಹುರಾಷ್ಟ್ರೀಯ ಸಂಸ್ಥೆಗಳ ಸರಕುಗಳ ಆಮದು, ಸ್ಥಳೀಯ ಕೈಗಾರಿಕೆಯ ಬೆಳವಣಿಗೆಗೆ ಧಕ್ಕೆ ತರಬಾರದು.

ರಾಜಾ ಚೆಲ್ಲಯ್ಯ ಸಮಿತಿ ಇದಕ್ಕೆ ತದ್ವಿರುದ್ಧ ನೀತಿ ಹೇಳುತ್ತದೆ.

ಈ ಬಜೆಟ್‌ನಲ್ಲಿ ಮೊದಲೇ ಹೇಳಿದಂತೆ ರಾಜಾ ಚೆಲ್ಲಯ್ಯ ಸಮಿತಿಯ ಶಿಫಾರಸುಗಳ ಮೊದಲ ಹಂತ ಮಾತ್ರ ಜಾರಿ ಮಾಡಲಾಗಿದೆ. ಆದರೆ ಮನಮೋಹನಸಿಂಗ್ ತಮ್ಮ ಬಜೆಟ್ ಭಾಷಣದಲ್ಲಿ ಶಿಫಾರಸುಗಳನ್ನು ಸರಕಾರ ಸಂಪೂರ್ಣವಾಗಿ ಒಪ್ಪಿಕೊಂಡಿದೆ. ಅದನ್ನು ಹಂತ ಹಂತವಾಗಿ ಜಾರಿಗೆ ತರಲಾಗುತ್ತದೆ ಎಂದು ಹೇಳಿದ್ದಾರೆ. ಮುಖ್ಯವಾಗಿ ನೇರ ತೆರಿಗೆಗಳಲ್ಲಿ ಕೈಗಾರಿಕೋದ್ಯಮಿಗಳು, ಐಎಂಎಫ್ ಅಪೇಕ್ಷಿಸಿದಷ್ಟು ಕಡಿತ ಮಾಡಲಾಗಿಲ್ಲ ಅರ್ಥ ಮಂತ್ರಿಗಳಿಗೆ. ಆದರೂ ಕೆಲವು ವಿನಾಯಿತಿಗಳನ್ನು ಕೊಡಲಾಗಿದೆ.(ಬಾಕ್ಸ್ ನೋಡಿ)

ಆಮದು ತೆರಿಗೆಗಳಲ್ಲಿ ಭಾರಿ ಕಡಿತ ಈ ಬಜೆಟ್‌ನ ಅತ್ಯಂತ ಅಪಾಯಕಾರಿ ಅಂಶ(ರೂಪಾಯಿ ಪೂರ್ಣ ಪರಿವರ್ತನೆ ಜತೆಗೆ). ಇದು ನಮ್ಮ ಸ್ಥಳೀಯ ಕೈಗಾರಿಕೆಗೆ ಭಾರಿ ಹೊಡೆತ ನೀಡಲಿದೆ. ಈಗಾಗಲೇ ಬೇಡಿಕೆ ಹಿಂಜರಿತ ಎದುರಿಸುತ್ತಿರುವ ಕೈಗಾರಿಕೆಯ ಚರಮ ಗೀತೆ ಹಾಡಲಿದೆ ಈ ನೀತಿ. ಆಮದು ತೆರಿಗೆ ಕಡಿತದಿಂದ ಸರಕಾರಕ್ಕೆ ಆದಾಯದಲ್ಲಿ 3273 ಕೋಟಿ ರೂ.ಗಳಷ್ಟು ಕಡಿತವಾಗಲಿದೆ. ಬಟ್ಟೆ, ಚರ್ಮ ಇತ್ಯಾದಿ ತಯಾರಿಸುವುದಕ್ಕೆ ಉಪಯೋಗವಾಗುವ ಯಂತ್ರಗಳ ಆಮದು ತೆರಿಗೆ ಶೇಕಡಾ 40 ರಿಂದ 25ರಷ್ಟು ಕಡಿತ ಮಾಡಲಾಗಿದೆ. ಇಂತಹ ಯಂತ್ರಗಳನ್ನು ಸ್ಥಳೀಯ ಕೈಗಾರಿಕೆ ಉತ್ಪಾದಿಸುತ್ತಿದೆ ಎಂದು ಇಲ್ಲಿ ಗಮನಿಸಬೇಕು. ಇದಲ್ಲದೆ ಸ್ಥಳೀಯವಾಗಿ ಉತ್ಪಾದನೆಯಾಗುತ್ತಿರುವ ಅವಶ್ಯಕ ಔಷಧಿ ರಾಸಾಯನಿಕಗಳ ಮೇಲಿನ ಆಮದು ತೆರಿಗೆಯನ್ನು ಶೇಕಡಾ 80-110ರಿಂದ ಶೇಕಡಾ 25ಕ್ಕೆ ಕಡಿತ ಮಾಡಲಾಗಿದೆ. ಇದಲ್ಲದೆ ಕೀಟ ನಾಶಕಗಳು, ಅದಕ್ಕೆ ಬೇಕಾದ ರಾಸಾಯನಿಕಗಳು, ಕಬ್ಬಿಣ ಮತ್ತು ಇತರ ಲೋಹಗಳ ಆಮದು ತೆರಿಗೆಯನ್ನೂ ಕಡಿತ ಮಾಡಲಾಗಿದೆ.

ಸುಮಾರು 2249 ಕೋಟಿ ರೂ.ಗಳಷ್ಟು ಎಕ್ಸೈಸ್ ತೆರಿಗೆಗಳಲ್ಲಿ ಬಜೆಟ್ ಕಡಿತ ತೋರಿಸಿದೆ. ಇದರಲ್ಲಿ ಮುಖ್ಯವಾದ ಕಡಿತ 80ರ ದಶಕದಲ್ಲಿ ವೇಗವಾಗಿ ಬೆಳೆದ ಭೋಗ ವಸ್ತುಗಳಿಗೆ ಎಂಬುದನ್ನು ಗಮನಿಸಬೇಕು. ಈ ವರ್ಷ ಇಂತಹ ಭೋಗ ವಸ್ತುಗಳಿಗೆ - ಕಲರ್ ಟಿವಿ, ರೆಫ್ರಿಜರೇಟರ್, ಏರ್‌ಕಂಡೀಶನರ್ಸ್, ಕಾರು, ಮೋಟಾರು ವಾಹನಗಳು - ತಿಪ್ರ ಬೆಲೆ ಏರಿಕೆಯಿಂದ ಬೇಡಿಕೆ ಇಳಿಮುಖವಾಗಿ ಈ ಕೈಗಾರಿಕೆಗಳು, ತೀವ್ರ ಹಿಂಜರಿತ ಅನುಭವಿಸುತ್ತಿದ್ದವು. ಈ ಭೋಗ ವಸ್ತುಗಳು ಆಮದಿನ ಮೇಲೆ ನಿರ್ಣಾಯಕವಾಗಿ ಆಧರಿಸಿದ ಕೈಗಾರಿಕೆಗಳೂ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಸ್ಥಳೀಯವಾಗಿ ಸರಕಿಗೆ ಸೇರಿಸಿದ ಮೌಲ್ಯ ತೀರಾ ಕಡಿಮೆ. ಅಷ್ಟರಮಟ್ಟಿಗೆ ಉದ್ಯೋಗ ಸೃಷ್ಟಿ ಸಹ ಕಡಿಮೆ. ಕಳೆದ ಕೆಲವು ವರ್ಷಗಳ ಕೈಗಾರಿಕಾ ಉತ್ಪಾದನೆಯ ಸಿಂಹಪಾಲು ಈ ಕ್ಷೇತ್ರದಿಂದ ಬಂದಿದ್ದು, ಅದಕ್ಕೆ ಜೀವ ತುಂಬುವ ಪ್ರಯತ್ನ ಎಕ್ಸೈಸ್ ತೆರಿಗೆಗಳಲ್ಲಿ ಕಡಿತ. ಕಾಫಿ, ಟೀ, ಮುಂತಾದ ಕೆಲವು ದಿನನಿತ್ಯದ ವಸ್ತುಗಳ ಮೇಲೂ ಎಕ್ಸೈಸ್ ತೆರಿಗೆ ಕಡಿಮೆ ಮಾಡಲಾಗಿದೆ. ಎಕ್ಸೈಸ್ ತೆರಿಗೆ ಕಡಿತ ಎಷ್ಟರಮಟ್ಟಿಗೆ ಬಳಕೆದಾರರಿಗೆ ಬೆಲೆ ಕಡಿತ ರೂಪದಲ್ಲಿ ವರ್ಗಾವಣೆ ಆಗುತ್ತದೆ ಎಂದು ಕಾದು ನೋಡಬೇಕಾಗಿದೆ. ಇದಲ್ಲದೆ ಎಕ್ಸೈಸ್ ತೆರಿಗೆ ವಿನಾಯಿತಿಯಲ್ಲಿ ಆಗುವ ನಷ್ಟದ ದೊಡ್ಡ ಭಾಗ ರಾಜ್ಯ ಸರಕಾರಗಳಿಗೆ ಎಂದು ಗಮನಿಸಬಹುದು.

ಲೆನಿನ್‌ರ ಹೆಸರಲ್ಲಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ರಿಯಾಯಿತಿ!

ಬಜೆಟ್ ಭಾಷಣದಲ್ಲಿ ಮನಮೋಹನಸಿಂಗ್ ಒಂದು ಕಡೆ ‘ಲೆನಿನ್ ಸಮಾಜವೆಂದರೆ ಪೂರ್ಣ ವಿದ್ಯುದೀಕರಣ + ಸೋವಿಯತ್ ಎಂದಿದ್ದರು. ಸೋವಿಯತ್ ಬಗ್ಗೆ ಬಿಡಿ. ಆದರೆ ವಿದ್ಯುದೀಕರಣದ ಬಗ್ಗೆ ಅವರು ಹೇಳಿದ್ದು ಸರಿ...... ಆದ್ದರಿಂದ ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಬಂಡವಾಳ ಹೂಡುವ ಹೊಸ ಕೈಗಾರಿಕೆಗಳಿಗೆ 5 ವರ್ಷ ತೆರಿಗೆ ರಜ ನೀಡಲಾಗುವುದು......’ ಎಂದರು. ಅವರ ಈ ಚಿಕ್ಕ ಜೋಕಿಗೆ ಕಾಂಗ್ರೆಸ್ ಸದಸ್ಯರು ಗಹಗಹಿಸಿದರು.

ವಿದ್ಯುತ್ ಉತ್ಪಾದನೆ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ವಿದೇಶೀ ಕಂಪೆನಿಗಳು ಪ್ರವೇಶಿಸುತ್ತಿರುವುದನ್ನು ಮುಚ್ಚಿಕೊಳ್ಳಲು ಈ ಚಿಕ್ಕ ಜೋಕು ಬೇಕೆ!

ಚುನಾವಣಾ ಕಮಿಶನ್‌ನಿಂದ ಉಗಿಸಿಕೊಂಡ

ತ್ರಿಪುರಾ ಸರಕಾರಕ್ಕೆ ಆಡಳಿತದ ಅರ್ಹತೆಯಿಲ್ಲ



ತ್ರಿಪುರಾದ ಉಸ್ತುವಾರಿ ಕಾಂಗ್ರೆ-ಟಿಯುಜೆಎಸ್ ಸಮಿಶ್ರ ಸರಕಾರ ತಕ್ಷಣ ವಜಾ ಮಾಡಿ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರುವಂತೆ ಒತ್ತಾಯಪಡಿಸಿ ರಾಜ್ಯದ ಪ್ರಮುಖ ಪ್ರತಿಪಕ್ಷವಾದ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಫೆಬ್ರವರಿ 28 ರಂದು ಅಗರ್ತಲಾದಲ್ಲಿ ಬೃಹತ್ ರ್‍ಯಾಲಿಯನ್ನು ನಡೆಸಿತು.

ಫೆಬ್ರವರಿ 15ರಂದು ನಡೆಯಬೇಕಿದ್ದ ವಿಧಾನಸಭಾ ಚುನಾವಣೆಗಳನ್ನು ರಾಜ್ಯದಲ್ಲಿನ ಹಿಂಸಾಚಾರದ ಪರಿಸ್ಥಿತಿಯಿಂದಾಗಿ ಚುನಾವಣಾ ಆಯೋಗ ಏಪ್ರಿಲ್ ಮೂರಕ್ಕೆ ಮುಂದೂಡಿತ್ತು. ಇದು ರಾಜ್ಯ ಸರಕಾರಕ್ಕೆ ಹಾಕಿದ ಸ್ಪಷ್ಟ ಛೀಮಾರಿಯಾಗಿತ್ತು. ಅಲ್ಲದೆ ಅಲ್ಲಿನ ಭಯಭೀತ ವಾತಾವರಣಕ್ಕೆ ಹಿಡಿದ ಕೈಗನ್ನಡಿಯೂ ಆಗಿದೆ.

ಆದರೆ ಅದೇ ಸರಕಾರದ ಅಡಿಯಲ್ಲಿ ಏಪ್ರಿಲ್ ಮೂರರ ಚುನಾವಣೆಗಳು ನಡೆಯುವಂತೆ ಕೇಂದ್ರ ಸರಕಾರ ಅವಕಾಶ ಮಾಡಿಕೊಡುತ್ತಿದೆ. ಇದನ್ನು ಸಿಪಿಐ(ಎಂ) ಬಲವಾಗಿ ಪ್ರತಿಭಟಿಸಿ ರಾಷ್ಟ್ರಪತಿ ಆಡಳಿತ ಹೇರಲು ಆಗ್ರಹಪಡಿಸಿದೆ.

ತ್ರಿಪುರಾ ವಿಧಾನಸಭೆಯ ಹಾಲಿ ಅವಧಿ ಫೆಬ್ರವರಿ 28ರಂದು ಮುಕ್ತಾಯವಾಯಿತು. ಇದಕ್ಕೆ ಒಂದು ದಿನ ಮುನ್ನ ಮುಖ್ಯಮಂತ್ರಿ ಸಮೀರ್ ರಂಜನ್ ಬರ್ಮನ್ ರಾಜೀನಾಮೆ ನೀಡಿದರು. ಆದರೆ ಅವರ ನೇತೃತ್ವದ ಉಸ್ತುವಾರಿ ಸರಕಾರ ಮುಂದುವರಿಯಬೇಕು ಎಂದು ರಾಜ್ಯಪಾಲರು ಸೂಚಿಸಿದ್ದರಿಂದ ಸಂವಿಧಾನ ನೀಡಿದ ಹಕ್ಕುಗಳ ಪಾಲನೆಯನ್ನು ಮಾಡಲಾಗದ, ಕಾನೂನು-ಸುವ್ಯವಸ್ಥೆಯನ್ನು ರಕ್ಷಿಸಲಾಗದ ಸರಕಾರವೇ ತ್ರಿಪುರಾದಲ್ಲಿ ಮುಂದುವರಿದಂತಾಗಿದೆ.

ಹಂಗಾಮಿ ಸರಕಾರ ಅಸ್ತಿತ್ವಕ್ಕೆ ಬರುವ ಮುನ್ನವೇ ಬರ್ಮನ್ ಸರಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಡಳಿತ ಹೇರಬೇಕೆಂದು ಒತ್ತಾಯಿಸಿ ಎಲ್ಲಾ ಸಬ್ ಡಿವಿಜನ್‌ಗಳಲ್ಲಿ ಫೆ. 17ರಂದು ರ್‍ಯಾಲಿಗಳನ್ನು ನಡೆಸುವಂತೆ ಪಕ್ಷದ ರಾಜ್ಯ ಸಮಿತಿ ಕರೆ ನೀಡಿತ್ತು. ಅನಂತರ ಇದೀಗ ಹಂಗಾಮಿ ಸರಕಾರವನ್ನು ತೆಗೆದು ಹಾಕಿ ಕೇಂದ್ರವೇ ಆಡಳಿತವನ್ನು ವಹಿಸಿಕೊಳ್ಳಬೇಕೆಂದು ಆಗ್ರಹಪಡಿಸಿ ಫೆ. 28ರಂದು ರಾಜ್ಯ ರಾಜಧಾನಿಯಲ್ಲಿ ದೊಡ್ಡ ರ್‍ಯಾಲಿಯನ್ನು ನಡೆಸಲಾಯಿತು.

ರಾಜ್ಯದಲ್ಲಿ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಯಬೇಕು ಹಾಗೂ ಪ್ರಜಾಪ್ರಭುತ್ವದ ಮರುಸ್ಥಾಪನೆ ಆಗಬೇಕು ಎಂಬ ಜನರ ಆಶೋತ್ತರಗಳನ್ನು ಪ್ರತಿಬಿಂಬಿಸುವ ರ್‍ಯಾಲಿ ಇದಾಗಿತ್ತು.

ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಮಾಣಿಕ್ ಸರ್ಕಾರ್, ರಾಜ್ಯ ಅಸೆಂಬ್ಲಿಯಲ್ಲಿ ಪಕ್ಷದ ಮುಖ್ಯ ಸಚೇತಕ ಸಮರ್ ಚೌಧರಿ ಮತ್ತೆ ಮಾಜಿ ಸಚಿವ ಬಾದಲ್ ಚೌಧರಿ ಮೊದಲಾದವರು ಜನಸಮೂಹವನ್ನುದ್ದೇಶಿಸಿ ಮಾತನಾಡಿದರು.

ಸಂವಿಧಾನದಲ್ಲೇ ಅವಕಾಶವಿಲ್ಲ......

ರ್‍ಯಾಲಿಯ ನಂತರ ಪಕ್ಷ ಒಂದು ಪತ್ರಿಕಾಗೋಷ್ಠಿಯನ್ನು ನಡೆಸಿತು. ಪ್ರಸಕ್ತ ಸರಕಾರ ಉಸ್ತುವಾರಿ ನೆಲೆಯಲ್ಲಿ ಮುಂದುವರಿದರೂ ಕೂಡಾ ಏಪ್ರಿಲ್ ಮೂರರಂದು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ಸಾಧ್ಯವಿಲ್ಲದ ಮಾತು ಎಂದು ಪಕ್ಷದ ವಕ್ತಾರ ಗೌತಮ್ ದಾಸ್ ಹೇಳಿದರು.

ಯಾವುದೇ ಒಂದು ವಿಧಾನಸಭೆಯ ಅವಧಿ ಮುಗಿದ ನಂತರ ಉಸ್ತುವಾರಿ ಸರಕಾರ ಅಸ್ತಿತ್ವದಲ್ಲಿರಲು ಸಂವಿಧಾನದಲ್ಲಿ ಅವಕಾಶವೇ ಇಲ್ಲ ಎಂದು ದಾಸ್ ಸ್ಪಷ್ಟಪಡಿಸಿದರು.

ಕುಖ್ಯಾತ ಭಯೋತ್ಪಾದಕ ಮನೋಚಹಲ್ ಹತ್ಯೆ

ಪಂಜಾಬಿನಲ್ಲಿ ಧರ್ಮದ ಹೆಸರು ಹೇಳಿಕೊಂಡು ಖಲಿಸ್ತಾನ್‌ಗಾಗಿ ಪ್ರತ್ಯೇಕತಾವಾದಿ ಚಳುವಳಿ ನಡೆಸುತ್ತಾ ಮುಗ್ಧ ಜನರ ರಕ್ತದ ಹೊಳೆ ಹರಿಸುತ್ತಿದ್ದ ಕರಾಳ ಅಧ್ಯಾಯಕ್ಕೆ ಒಂದು ಮಹತ್ವದ ತೆರೆ ಬಿದ್ದಿದೆ. ಭಯೋತ್ಪಾದಕರ ಭಯೋತ್ಪಾದಕನಂತಿದ್ದ ಗುರುಚರಣ್ ಸಿಂಗ್ ಮನೋಚಹಲ್ (39 ವರ್ಷ) ಹತನಾಗಿದ್ದಾನೆ. ಫೆಬ್ರವರಿ 28ರಂದು ತರನ್ ತಾರನ್ ಜಿಲ್ಲೆಯ ರತೋಲ್‌ನಲ್ಲಿ ಗುಂಡುಗಳಿಂದ ಜರ್ಝರಿತವಾದ ಮನೋಚಹಲನ ಶವ ರಕ್ತದ ಮಡುವಿನಲ್ಲಿ ಬಿದ್ದಿತ್ತು. ಒಂದು ದಶಕದಷ್ಟು ದೀರ್ಘಕಾಲದ ಪಂಜಾಬ್‌ನ ಭಯೋತ್ಪಾದಕ ಚಳುವಳಿಯ ಅಂತ್ಯದ ಆರಂಭದ ಸಂಕೇತದಂತಿತ್ತು.

ಖಲಿಸ್ತಾನಿ ಭಿಂದ್ರನ್‌ವಾಲೆ ಟೈಗರ್ ಫೋರ್ಸ್‌ನ ಮುಖ್ಯಸ್ಥನಾಗಿದ್ದ ಮನೋಚಹಲ್ ಪಂಜಾಬ್ ಮಾತ್ರವಲ್ಲದೆ ದೆಹಲಿ, ಉತ್ತರ ಪ್ರದೇಶ, ಮಧ್ಯಪ್ರದೇಶದ ಕೆಲ ಭಾಗಗಳು ಮತ್ತು ಮುಂಬಯಿಯಲ್ಲಿಯೂ ಭಯವನ್ನು ಬಿತ್ತಲು ಕಾರಣನಾಗಿದ್ದ. ಗಡಿ ವಲಯದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಡಿ.ಆರ್.ಭಟ್ಟಿ ಮಾತುಗಳಲ್ಲಿ ಹೇಳುವುದಾದರೆ ಮನೋಚಹಲ್‌ನ ಹತ್ಯೆ 'ಪಂಜಾಬ್ ಭಯೋತ್ಪಾದಕ ಚಳುವಳಿಯ ಒಂದು ಯುಗದ ಅಂತ್ಯವಾಗಿದೆ'.

ಸಾವಿರಾರು ಜನರ ಹತ್ಯೆಗೆ ಹೊಣೆಗಾರನಾಗಿದ್ದ ಮನೋಚಹಲ್‌ನ ತಲೆಗೆ 30 ಲಕ್ಷ ರೂಪಾಯಿ ಬಹುಮಾನವನ್ನು ಘೋಷಿಸಲಾಗಿತ್ತು. ಪಂಜಾಬಿನಲ್ಲಿ ಪ್ರತ್ಯೇಕತಾವಾದ ಹಾಗೂ ಭಯೋತ್ಪಾದನೆಯ ಕಿಚ್ಚು ಹಚ್ಚಿದ ಜರ್ನೈಲ್ ಸಿಂಗ್ ಭಿಂದ್ರನ್‌ವಾಲೆಯ ನಿಕಟವರ್ತಿಯಾಗಿದ್ದನು ಮನೋಚಹಲ್.

ದುರ್ಬಲ ಚಳುವಳಿ

ಪಂಜಾಬಿನಲ್ಲಿ ಇತ್ತೀಚೆಗೆ ಪಂಚಾಯತ್ ಚುನಾವಣೆಗಳು ಶಾಂತಿಯುತವಾಗಿ ನಡೆದದ್ದು ಭಯೋತ್ಪಾದಕರ ಹಾವಳಿ ತಗ್ಗುತ್ತಿರುವುದರ ಸ್ಪಷ್ಟ ಸೂಚನೆಯಾಗಿತ್ತು. ಪ್ರತ್ಯೇಕತಾವಾದಿ ಶಕ್ತಿಗಳನ್ನು ಜನರು ಪ್ರತ್ಯೇಕಗೊಳಿಸುತ್ತಿರುವುದಕ್ಕೆ ಸಾಕ್ಷಿಯಾಗಿತ್ತು. ಅದಕ್ಕೂ ಮುನ್ನ ಭಯೋತ್ಪಾದಕ ಚಳುವಳಿಯ ಹಲವು ಪ್ರಮುಖ ತಲೆಗಳು ಉರುಳಿದ್ದವು. ಕಳೆದ ವರ್ಷದ ಜನವರಿಯಿಂದ ಅಕ್ಟೋಬರ್‌ವರೆಗಿನ ಅವಧಿಯಲ್ಲಿ ಸುಮಾರು 1600 ಮಂದಿ ಭಯೋತ್ಪಾದಕರ ಹತ್ಯೆ ನಡೆದಿತ್ತು ಹಾಗೂ 1300 ಜನರನ್ನು ಸೆರೆ ಹಿಡಿಯಲಾಗಿತ್ತು.

ಇವೆಲ್ಲ ವಿದೇಶೀ ಬೆಂಬಲಿತ ಪ್ರತ್ಯೇಕತಾವಾದಿ ಶಕ್ತಿಗಳು ನೆಲೆ ಕಳೆದುಕೊಳ್ಳುತ್ತಿರುವುದರ ಸೂಚನೆಯಾಗಿದೆ. ಇದೀಗ ಕುಖ್ಯಾತ ಮನೋಚಹಲ್‌ನ ಹತ್ಯೆಯಾಗಿರುವುದರಿಂದ ಭಯೋತ್ಪಾದಕರ ಶಕ್ತಿ ಬಹುತೇಕವಾಗಿ ಉಡುಗಿಹೋಗುವುದರಲ್ಲಿ ಸಂದೇಹವಿಲ್ಲ.

ಜಿಲ್ಲೆ	ಸರಪಂಚರು ಸದಸ್ಯ	ಸರಪಂಚರು ಬೆಂಬಲಿಗ	ಪಂಚರು ಸದಸ್ಯ	ಪಂಚರು ಬೆಂಬಲಿಗ
ಅಮೃತಸರ	12	14	34	96
ಗುರುದಾಸ್‌ಪುರ	11	29	29	87
ಜಲಂಧರ	48	22	181	379
ಸಂಗ್ರೂರು	34	33	120	384
ಹೋಷಿಯಾರ್‌ಪುರ	20	44	26	291
ಫಿರೋಜ್‌ಪುರ	8	12	20	73
ಪಾಟಿಯಾಲ	36	42	114	125
ಲೂಧಿಯಾನ	16	24	118	100
ಫರೀದ್‌ಕೋಟ್	2	2	20	30
ಭಟಿಂಡಾ	2	2	16	25
ರೋಪಾರ್	20	20	80	100
ಒಟ್ಟು	209	244	758	1690

ಖಲಿಸ್ತಾನಿ ಕಮಾಂಡೋ ಪಡೆಯ ಎರಡು ಬಣಗಳ ಮುಖ್ಯಸ್ಥ ವಾಸನ್ ಸಿಂಗ್ ಝಫರ್‌ವಾಲ್, ಪರಮ್‌ಜಿತ್ ಸಿಂಗ್ ಪಂಜ್ವಾರ್, ಮಹಲ್ ಸಿಂಗ್ ಮತ್ತು ದಲ್ಜಿತ್ ಸಿಂಗ್ ಮೊದಲಾದ ಕೆಲವು ಉಗ್ರಗಾಮಿಗಳು ಇನ್ನೂ ಬಲೆಗೆ ಬೀಳದೆ ತಪ್ಪಿಸಿಕೊಳ್ಳುತ್ತಿದ್ದಾರೆ.

ಸರಪಂಚರು ಪಂಚರ ಪಟ್ಟಿ

ಪಂಜಾಬಿನಲ್ಲಿ ಫೆಬ್ರವರಿಯಲ್ಲಿ ನಡೆದ ಪಂಚಾಯತ್ ಚುನಾವಣೆಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಕ್ರಿಯವಾಗಿ ಭಾಗವಹಿಸಿತ್ತು. ರಾಜ್ಯದಲ್ಲಿನ ಪ್ರತ್ಯೇಕತಾವಾದಿ ಚಳುವಳಿ ಬಹುಜನರ ಬೆಂಬಲವಿಲ್ಲದ ಕೇವಲ ಕೆಲ ಗುಂಪುಗಳ ದುಷ್ಕೃತ್ಯ ಹಾಗೂ ಎಡ-ಜಾತ್ಯಾತೀತ ಶಕ್ತಿಗಳು ರಾಜ್ಯದಲ್ಲಿ ಗಮನಾರ್ಹ ಶಕ್ತಿಯಾಗಿವೆ ಎಂಬುದನ್ನು ಈ ಚುನಾವಣೆ ಸಾಬೀತು ಪಡಿಸಿತು. ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಅನೇಕ ಸದಸ್ಯರು ಹಾಗೂ ಬೆಂಬಲಿಗರು ಪಂಚಾಯತ್‌ಗಳಿಗೆ ಆಯ್ಕೆಯಾಗಿದ್ದಾರೆ.

ಸರಪಂಚರು ಹಾಗೂ ಪಂಚರಾಗಿ ಆಯ್ಕೆಯಾಗಿರುವ ಸಿಪಿಐ(ಎಂ) ಸದಸ್ಯರು ಮತ್ತು ಬೆಂಬಲಿಗರು ಜಿಲ್ಲಾವಾರು ವಿವರಗಳನ್ನು ಕೊಡಲಾಗಿದೆ.(ಬಾಕ್ಸ್ ನೋಡಿ)

ಮಹಾರಾಷ್ಟ್ರ ಮುಖ್ಯಮಂತ್ರಿ ಆಯ್ಕೆ ಅಧಿಕಾರ ಪ್ರಧಾನಿಗೆ

ಮಹಾರಾಷ್ಟ್ರದ ಮುಖ್ಯಮಂತ್ರಿ ಸ್ಥಾನಕ್ಕೆ ಸುಧಾಕರ್‌ರಾವ್ ನಾಯಕ್ ರಾಜೀನಾಮೆ ನೀಡಿರುವ ವಿಷಯ ಕಳೆದ ವಾರದ ಸಂಚಿಕೆಯಲ್ಲಿ ಪ್ರಕಟವಾಗಿದೆ. ಅವರು ಈಗ ಹಂಗಾಮಿಯಾಗಿ ಅದೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಇಷ್ಟರೊಳಗೆ ಹೊಸ ಮುಖ್ಯಮಂತ್ರಿಯ ಆಯ್ಕೆ ನಡೆಯಬೇಕಿತ್ತು. ಆ ಕೆಲಸ ಇನ್ನೂ ಆಗಿಲ್ಲ. ಫೆಬ್ರವರಿ 28ರಂದು ಮಹಾರಾಷ್ಟ್ರ ಕಾಂಗ್ರೆಸ್(ಐ) ಶಾಸಕ ಪಕ್ಷ ಸಭೆ ಸೇರಿತ್ತು. ಹೈಕಮಾಂಡ್ ವೀಕ್ಷಕರಾಗಿ ಎ.ಕೆ.ಆಂಟನಿ ಮತ್ತು ಪ್ರಣಬ್ ಮುಖರ್ಜಿ ಸಭೆಯಲ್ಲಿ ಭಾಗವಹಿಸಿದ್ದರು. ಆದರೆ ಕಾಂಗ್ರೆಸ್‌ನ ಮಾಮೂಲಿ ಪದ್ಧತಿಯಂತೆ ಶಾಸಕಪಕ್ಷ ನೇರವಾಗಿ ತನ್ನ ನಾಯಕನನ್ನು ಆಯ್ಕೆ ಮಾಡಲಿಲ್ಲ. ಹೊಸ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವ ಅಧಿಕಾರವನ್ನು ಪ್ರಧಾನಿಯೂ ಆಗಿರುವ ಪಕ್ಷದ ಅಧ್ಯಕ್ಷ ಪಿ.ವಿ.ನರಸಿಂಹರಾವ್‌ರವರಿಗೆ ನೀಡುವ 'ಸರ್ವಾನುಮತದ ನಿರ್ಣಯ' ವನ್ನು ಸಭೆ ಕೈಗೊಂಡಿತು.

ಕೋಲಾರ ಜಿಲ್ಲೆಯಾದ್ಯಂತ ರಸ್ತೆ ತಡೆ ಚಳುವಳಿ

ಕೋಲಾರ: ಕೇಂದ್ರ ಸರಕಾರದ ಆರ್ಥಿಕ ನೀತಿಯ ಫಲವಾಗಿ ಎಲ್ಲಾ ದಿನಬಳಕೆಯ ವಸ್ತುಗಳ ಬೆಲೆಗಳು ಗಗನಕ್ಕೇರಿದ್ದು ಇದರ ಸಂಕಷ್ಟದಲ್ಲಿ ಜನತೆ ತತ್ತರಿಸುತ್ತಿರುವಾಗಲೇ ರಾಜ್ಯ ಸರಕಾರ ಏಕಪಕ್ಷೀಯವಾಗಿ ದಿಢೀರನೇ ಸುಮಾರು ಶೇ. 25ರಷ್ಟು ಪ್ರಯಾಣದರ ಏರಿಕೆಯನ್ನು ಮಾಡಿ ಜನತೆ ಇನ್ನಷ್ಟು ಆರ್ಥಿಕ ಸಂಕಷ್ಟಕ್ಕೆ ಒಳಗಾಗುವ ಹಾಗಿದೆ.

ಇದನ್ನು ಪ್ರತಿಭಟಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್(ಡಿವೈಎಫ್ಐ) ಕೋಲಾರ ಜಿಲ್ಲಾ ಸಮಿತಿ ರಸ್ತೆ ತಡೆ ಚಳುವಳಿಗೆ ಕರೆ ನೀಡಿತು. ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್‌ಎಫ್ಐ) ಹಾಗೂ ಡಿವೈಎಫ್ಐ ಸಂಘಟನೆಗಳು ಜಂಟಿಯಾಗಿ ಜಿಲ್ಲೆಯಾದ್ಯಂತ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದೆ.

ಕೋಲಾರ : ಕೋಲಾರದಲ್ಲಿ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಮುಖ್ಯದ್ವಾರದ ಬಳಿ ರಾಷ್ಟ್ರೀಯ ಹೆದ್ದಾರಿಯ ಬಳಿ ಎಸ್‌ಎಫ್ಐ ಹಾಗೂ ಡಿವೈಎಫ್ಐನ ಸುಮಾರು 200 ಕಾರ್ಯಕರ್ತರು 10.30ರಿಂದ 11.30ರ ತನಕ ರಸ್ತೆ ತಡೆ ಚಳುವಳಿ ನಡೆಸಿ ರಾಜ್ಯ ಸರಕಾರ ಹಾಗೂ ಸಾರಿಗೆ ಸಚಿವರ ವಿರುದ್ಧ ಘೋಷಣೆ [illegible]ಗಿದರು. ಪೋಲೀಸರು ಬಂಧಿಸಿ ಬಿಡುಗಡೆ ಮಾಡಿದರು.

ಚಿಂತಾಮಣಿ : ಸುಮಾರು 150 ಕಾರ್ಯಕರ್ತರು ಚೇಳೂರು ಸರ್ಕಲ್‌ನಲ್ಲಿ 9 ರಿಂದ 11 ಗಂಟೆಯವರೆಗೆ ರಸ್ತೆ ತಡೆ ಮಾಡಿದರು. ಸಾರಿಗೆ ಸಚಿವರ ವಿರುದ್ಧ ಘೋಷಣೆಗಳನ್ನು ಕೂಗಿದರು.

[illegible] : ಸುಮಾರು 150 ಕಾರ್ಯಕರ್ತರು ... ನಿಲ್ದಾಣದ ಮುಂಭಾಗದ ರಸ್ತೆಯಲ್ಲಿ ರಸ್ತೆ ತಡೆ 9ರಿಂದ 11 ತನಕ ನಡೆಸಿದರು.

ಬಾಗೇಪಲ್ಲಿ: ಬಾಗೇಪಲ್ಲಿಯಲ್ಲಿ ಎರಡು ಕಡೆಗಳಲ್ಲಿ ಬೆಳಿಗ್ಗೆ 6ರಿಂದ 11 ಗಂಟೆಯತನಕ ರಸ್ತೆ ತಡೆ ಚಳುವಳಿ ನಡೆಸಲಾಯಿತು.

ಬಂಗಾರುಪೇಟೆ : ಬಸ್ ನಿಲ್ದಾಣದ ಮುಂಭಾಗದಲ್ಲಿ ರಸ್ತೆ ತಡೆ ಮಾಡಲಾಗಿ ಪೋಲೀಸರು ಬಂಧಿಸಿ ಬಿಡುಗಡೆ ಮಾಡಿದರು.

ಕೆಜಿಎಫ್ : ಇತರೆ ವಿರೋಧ ಪಕ್ಷಗಳು ರಸ್ತೆ ತಡೆ ಚಳುವಳಿ ನಡೆಸಿದ್ದರಿಂದ 11-2-93ರಂದು ಡಿ.ವೈ.ಎಫ್.ಐ. ರಾತ್ರಿಯನ್ನು ಪಂಜಿನ ಮೆರವಣಿಗೆಯ ಮುಖಾಂತರ ಆಚರಿಸಲಾಯಿತು. ರಾತ್ರಿ ವಿದ್ಯುಚ್ಛಕ್ತಿ ಇಲ್ಲದೆ ಬಿಕೋ ಎನ್ನುತ್ತಿದ್ದ ಕೆಜಿಎಫ್ ನಗರ ಪಂಜಿನ ಮೆರವಣಿಗೆಯಿಂದ ನಗರವೇ ಕಂಗೊಳಿಸಿತು. ಮುಖ್ಯಮಂತ್ರಿ ಹಾಗೂ ಸಾರಿಗೆ ಮಂತ್ರಿಗೆ ಧಿಕ್ಕಾರದ ಘೋಷಣೆಗಳು ಮೊಳಗುತ್ತಿದ್ದವು. ಇದರಲ್ಲಿ ನೂರಾರು ಕಾರ್ಯಕರ್ತರು ಭಾಗವಹಿಸಿದರು.

ಒಟ್ಟಾರೆಯಾಗಿ ಜಿಲ್ಲಾದ್ಯಂತ ಎರಡು ಸಂಘಟನೆಗಳ ಆಶ್ರಯದಲ್ಲಿ ಯಶಸ್ವಿಯಾಗಿ ನಡೆದ ಈ ಕಾರ್ಯಕ್ರಮಕ್ಕೆ ಜನತೆಯಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಜನರು ದೊಡ್ಡ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ

ಚಿಂತಾಮಣಿಯಲ್ಲಿ ತರಗತಿ ಬಹಿಷ್ಕಾರ

ಚಿಂತಾಮಣಿ : ಜನವಿರೋಧಿ ಕ್ರಮವನ್ನು ಖಂಡಿಸಿ ಪ್ರಯಾಣದರ ಏರಿಕೆಯನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಚಿಂತಾಮಣಿಯ ಸರಕಾರಿ ಕಾಲೇಜ್‌ನ ವಿದ್ಯಾರ್ಥಿಗಳು 6-10-93ರಂದು ಎಸ್‌ಎಫ್ಐ ನಾಯಕತ್ವದಲ್ಲಿ ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ತಹಸೀಲ್ದಾರರಿಗೆ ಮನವಿಯನ್ನು ಸಲ್ಲಿಸಿದರು. ಸುಮಾರು 300 ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಎಸ್‌ಎಫ್‌ಐ ಹಾಸನ ಜಿಲ್ಲಾ ಸಮಾವೇಶ

ಹಾಸನ : ಎಸ್‌ಎಫ್‌ಐನ ಹಾಸನ ಜಿಲ್ಲಾ ಮಟ್ಟದ ಸಮಾವೇಶವು ದಿನಾಂಕ 6-2-93ರಂದು ಹಾಸನದಲ್ಲಿ ಜರುಗಿತು. ಭಾರತ ಜ್ಞಾನ ವಿಜ್ಞಾನ ಸಮಿತಿಯ ಬೇಲೂರು ತಾಲೂಕು ಕಾರ್ಯದರ್ಶಿ ಸ್ವಾಮಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಿಐಟಿಯು ಮುಖಂಡ ರಾಘವೇಂದ್ರ, ಎಸ್‌ಎಫ್‌ಐ ರಾಜ್ಯ ಸಹ ಕಾರ್ಯದರ್ಶಿ ಕೆ. ಪ್ರಕಾಶ್ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಎಸ್‌ಎಫ್‌ಐ ರಾಜ್ಯ ಸಮಿತಿ ಸದಸ್ಯ ಈ. ಬಸವರಾಜು ವಹಿಸಿದ್ದರು.

ಸಮಾವೇಶಕ್ಕೆ ಶುಭ ಕೋರಿ ಉಪನ್ಯಾಸಕ ಅಪ್ಪಾಜಿಗೌಡ, ಶಿಕ್ಷಕ ದೇವರಾಜ್, ಡಿವೈಎಫ್‌ಐನ ಸತ್ಯನಾರಾಯಣ ಮಾತನಾಡಿದರು. ಯೋಗೇಶ್ ಸ್ವಾಗತಿಸಿ ಎಂ.ಇ. ಈರೇಗೌಡ(ಮಲ್ಲೇಶ್) ವಂದಿಸಿದರು.

ಸಮಾವೇಶದಲ್ಲಿ ಕೆಳಕಂಡಂತೆ ಜಿಲ್ಲಾ ಸಂಘಟನಾ ಸಮಿತಿಯನ್ನು ರಚಿಸಲಾಯಿತು.

ಲೋಕೇಶ್ ಸಂಚಾಲಕರು, ಈರೇಗೌಡ(ಮಲ್ಲೇಶ್), ಗಿರೀಶ್, ಚನ್ನಕೇಶವ, ಹಫೀಜ್ ಸಹಸಂಚಾಲಕರು.

ಬಸ್ ದರ ಹೆಚ್ಚಳ ವಿರೋಧಿಸಿ ರಸ್ತೆ ತಡೆ

ಕಾರ್ಯದರ್ಶಿ ಎಂ.ಮೋಹನ್ ವಂದನಾರ್ಪಣೆ ಸಲ್ಲಿಸಿದರು.

ಉಳ್ಳಾಲ ವಲಯ ರಿಕ್ಷಾ ಚಾಲಕರ ಸಂಘ

ಮಂಗಳೂರು : ದ.ಕ. ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘ(ರಿ.) ಉಳ್ಳಾಲ ವಲಯ ಶಾಖೆಯ ಪ್ರಾರಂಭದ ಸಭೆ ದ.ಕ. ಜಿಲ್ಲಾ ಆಟೋರಿಕ್ಷಾ ಚಾಲಕ ಸಂಘದ ಹಿರಿಯ ಮುಖಂಡರಾದ ಬಿ.ಎಸ್. ಪರಮೇಶ್ವರ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಆಟೋ ಚಾಲಕರು ನೀಡುವ ಜನ ಸೇವೆ ಸಮಾಜಕ್ಕೆ ಒಂದು ಉತ್ತಮ ಸೇವೆಯಾಗಿದೆ ಎಂದು ಹೇಳಿದ ಅವರು ಆಟೋ ಚಾಲಕರು ಪಡುವ ಕಷ್ಟನಷ್ಟಗಳ ಬಗ್ಗೆ ತಿಳಿಸುತ್ತಾ ಚಾಲಕ ವರ್ಗಕ್ಕೆ ಶಿಸ್ತು ಮತ್ತು ಕಾನೂನು ಕಾಯಿದೆಗಳ ಬಗ್ಗೆ ವಿವರಿಸಿದರು. ಸಂಘದ ಸಂಘಟನಾ ಸಂಚಾಲಕರಾದ ಜಗದೀಶ ಸುವರ್ಣ ಸಂಘ ಹುಟ್ಟಿ ಬಂದ ದಾರಿ 1969ರಲ್ಲಿ ಮಾಲಿಕ ವರ್ಗದಿಂದ ಸರಕಾರಿ ಅಧಿಕಾರಿಗಳಿಂದ ದಬ್ಬಾಳಿಕೆಗಳಿಗೆ ಒಳಗಾಗಿ ರಿಕ್ಷಾ ಚಾಲಕರನ್ನು ಕೇಳುವವರಿಲ್ಲದೆ ರಿಕ್ಷಾ ಚಾಲಕರ ಬವಣೆ ಶೋಷಣೆಗಳನ್ನು ವಿವರಿಸಿದರು. ತದ ನಂತರ ದ.ಕ. ಜಿಲ್ಲಾ ಆಟೋ ರಿಕ್ಷಾ ಚಾಲಕ ಸಂಘದ ಪ್ರಧಾನ ಕಾರ್ಯದರ್ಶಿ ಸುವನ್ ಕುಮಾರ್(ಉರ್ವ) ಇವರು ಜಿಲ್ಲಾ ಸಂಘದ ಒಂದು ಅಂಗವಾಗಿರುವ ಈ ಉಳ್ಳಾಲ ವಲಯ ಶಾಖೆಯು ಒಂದು ಉತ್ತಮ ಸಂಘಟನೆಯಾಗಿ ಮೂಡಿ ಬರಲಿ ಎಂದು ಶುಭ ಕೋರಿದರು. ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ಸ್ ಯೂನಿಯನ್ ಇವರ ಉಪಾಧ್ಯಕ್ಷರಾದ ಕೆ. ಈಶ್ವರ್ ಕೂಡ ಶುಭ ಕೋರಿ ಮಾತನಾಡಿದರು. ನೂತನ ಸಾಲಿನ ಅಧ್ಯಕ್ಷರಾಗಿ ಎ.ಎಮ್. ಅನೀನಾರ್ ಬೆರ್ಲಕಟ್ಟೆ, ಉಪಾಧ್ಯಕ್ಷರಾಗಿ ಪೃಥ್ವಿಯಬ್ಬ ನಾಟೇಕರ್, ಕಾರ್ಯದರ್ಶಿಯಾಗಿ ಯು. ಜಯಂತ ನಾಯಕ್, ಸಹ ಕಾರ್ಯದರ್ಶಿಯಾಗಿ ಅಶೋಕ್ ಆಳ್ವ ಬೆರ್ಲಕಟ್ಟೆ, ಕೋಶಾಧಿಕಾರಿ ಹೂನ್ ಬ್ಯಾಪ್ಟಿಸ್ಟ್ ಕುತ್ತಾರ್, ಸಮಿತಿ ಸದಸ್ಯರಾಗಿ ಮಹಮ್ಮದ್ ಬೆರ್ಲಕಟ್ಟೆ, ಬಾವು ಮದನಿ ನಗರ, ಎಂ. ಇಬ್ರಾಹಿಂ ನಾಟೇಕರ್, ಇವರುಗಳ ಸಮಿತಿಯನ್ನು ಸರ್ವಾನುಮತದಿಂದ ಆರಿಸಲಾಯಿತು.

ಗುಲ್ಬರ್ಗಾ ವಿ.ವಿ. ಕುಲಪತಿ ಅವಧಿ ವಿಸ್ತರಣೆಗೆ ವಿರೋಧ

ಗುಲ್ಬರ್ಗಾ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ರುದ್ರಯ್ಯನವರನ್ನು ಇನ್ನೊಂದು ಅವಧಿಗೆ 3 ವರ್ಷ ಉಪಕುಲಪತಿಗಳಾಗಿ ಮುಂದುವರಿಸಿರುವುದನ್ನು ಎಸ್‌ಎಫ್‌ಐ ಖಂಡಿಸಿದೆ ಈ ಆಜ್ಞೆಯನ್ನು ಸರಕಾರ ರದ್ದುಗೊಳಿಸಬೇಕೆಂಬ ನಿರ್ಣಯವನ್ನು ಬೆಂಗಳೂರಿನಲ್ಲಿ ಸೇರಿದ್ದ ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್‌ಎಫ್‌ಐ) ರಾಜ್ಯ ಸಮಿತಿ ಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಗಿದೆ. ಈಗಾಗಲೇ ಭ್ರಷ್ಟಾಚಾರಿ, ಸ್ವಜನ ಪಕ್ಷಪಾತಿ ಎಂದು ತೀವ್ರ ಟೀಕೆಗೆ ಒಳಗಾಗಿರುವ ರುದ್ರಯ್ಯನವರನ್ನು ಮುಂದುವರಿಸುವುದು ತೀವ್ರ ಅಕ್ಷಮ್ಯ ಅಪರಾಧ ಎಂದು ಎಸ್‌ಎಫ್‌ಐ ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ. ತಮ್ಮ ಹುಟ್ಟಿದ ದಿನಾಂಕದ ತಪ್ಪು ಸರ್ಟಿಫಿಕೇಟ್ ನೀಡಿ ಸವಲತ್ತು ಪಡೆದಿರುವುದಾಗಿ ಸಹ ಕೆಲವು ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ಗಮನಿಸಿ ಸರಕಾರ ತಕ್ಷಣ ಅವಧಿ ವಿಸ್ತರಣೆ ಆಜ್ಞೆಯನ್ನು ವಾಪಸ್ಸು ಪಡೆಯಬೇಕೆಂದು ಸರಕಾರವನ್ನು ಬಲವಾಗಿ ಎಸ್‌ಎಫ್‌ಐ ಒತ್ತಾಯಿಸುತ್ತದೆ.

ಶಿಕ್ಷಣದಲ್ಲಿ ಸುಧಾರಣೆ ತರುವುದಾಗಿ ಹೇಳುತ್ತಿರುವ ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರು. ವಿದ್ಯಾರ್ಥಿಗಳು, ಫೆ. 12ರಂದು ಗುಲ್ಬರ್ಗಾ ವಿ.ವಿ. ಉಪಕುಲಪತಿಗಳ ಭ್ರಷ್ಟಾಚಾರದ ವಿರುದ್ಧ ದೊಡ್ಡ ಪ್ರದರ್ಶನ ನಡೆಸುತ್ತಿರುವಾಗಲೇ ಮತ್ತೊಂದು ಅವಧಿಗೆ ಉಪಕುಲಪತಿಗಳಾಗಿ ಮುಂದುವರಿಸುತ್ತಿರುವುದರಿಂದ ಮೊಯಿಲಿಯವರ ಮಾತುಗಳು ಪ್ರಶ್ನಾರ್ಹವಾಗಿ ಉಳಿಯುತ್ತವೆ ಎಂದು ಎಸ್‌ಎಫ್‌ಐ ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ

ಸುಪ್ರೀಂ ಕೋರ್ಟ್ ಆಜ್ಞೆ ಜಾರಿಗೆ ಆಗ್ರಹ : ಕ್ಯಾಪಿಟೇಶನ್ ಶುಲ್ಕ ವಸೂಲಿಯನ್ನು

ಪುಟ 7 →

ಲೋಕ ಸಂಚಾರ

ರಶ್ಯಾ ಕಮ್ಯುನಿಸ್ಟ್ ಪಕ್ಷದ ಸಮ್ಮೇಳನ ಯೆಲ್ಟ್‌ಸಿನ್‌ರ ಕೊನೆಯ ದಿನಗಳು.....

ರಶ್ಯವಲ್ಲಿ ಬಂಡವಾಳಶಾಹಿ ವ್ಯವಸ್ಥೆ ಪುನಃ ಸ್ಥಾಪಿಸುವ ಯೆಲ್ಟ್‌ಸಿನ್‌ರ ಯತ್ನ ತೀವ್ರ ತೊಂದರೆಗೊಳಗಾಗಿದೆ. ರಾಜಕೀಯ - ಸಂವೈಧಾನಿಕ ಬಿಕ್ಕಟ್ಟು ಅದರ ಪ್ರತಿಫಲನ. ಎಡ ಮತ್ತು ದೇಶಪ್ರೇಮಿಗಳ ಒಕ್ಕೂಟ ಯೆಲ್ಟ್‌ಸಿನ್‌ರ ಅಧಿಕಾರಕ್ಕೆ ಸವಾಲು ಹಾಕುವಷ್ಟು ಈಗ ಪ್ರಬಲವಾಗಿದೆ. ಯೆಲ್ಟ್‌ಸಿನ್‌ರ ಕೊನೆ ದಿನಗಳು ಸಮೀಪಿಸಿವೆ ಎಂದು ಅಮೇರಿಕನ್ನರ ರಾಯಭಾರ ಕಚೇರಿಯ ಅಧಿಕಾರಿಗಳಿಗೆ ಅನ್ನಿಸಿದ ಮೇಲೆ ಇನ್ನೇನು?

ರಶ್ಯವಲ್ಲಿ ತೀವ್ರ ವೇಗವಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳಿಂದ ಯೆಲ್ಟ್‌ಸಿನ್‌ರ ಸರಕಾರ ಜನಪ್ರಿಯತೆ ಕಳೆದುಕೊಂಡು ಕುಸಿದು ಬೀಳುವ ಹಾದಿಯಲ್ಲಿದೆ ಎಂದು ಕಾಣುತ್ತಿದೆ.

ಅಧ್ಯಕ್ಷ ಯೆಲ್ಟ್‌ಸಿನ್‌ರು ಮಂಡಿಸಿದ ಮಂತ್ರಿಮಂಡಲವಲ್ಲಿ ಪಾರ್ಲಿಮೆಂಟು ಹಲವು ಬದಲಾವಣೆಗಳನ್ನು ಮಾಡಿದಾಗಿನಿಂದ ಆರಂಭವಾದ ರಾಜಕೀಯ-ಸಂವೈಧಾನಿಕ ಬಿಕ್ಕಟ್ಟು ದಿನೇ ದಿನೇ ತೀವ್ರವಾಗುತ್ತಿದೆ. ಈ ಸ್ಥರಣಿಯಲ್ಲಿ ಇತ್ತೀಚಿನ ಸುಪ್ರೀಂ ಸೋವಿಯತ್ ನಿರ್ಧಾರ ಯೆಲ್ಟ್‌ಸಿನ್‌ಗೆ ವಿರುದ್ಧ ಹೋಗಿದೆ. ಅಧ್ಯಕ್ಷೀಯ ಅಧಿಕಾರಗಳ ಬಗ್ಗೆ ಜನಮತಸಂಗ್ರಹದ ಬಗ್ಗೆ ರಶ್ಯಾದ ಜನತಾ ಪ್ರತಿನಿಧಿಗಳ ಕಾಂಗ್ರೆಸ್ ಮತದಾನದ ಮೂಲಕ ಜನಮತಸಂಗ್ರಹ ಬೇಕೆ ಬೇಡವೇ ಎಂದು ನಿರ್ಧರಿಸಬೇಕು ಎಂಬುದೇ ಈ ನಿರ್ಧಾರ.

ಸುಪ್ರೀಂ ಸೋವಿಯತ್‌ನಲ್ಲೂ, ಜನತಾ ಪ್ರತಿನಿಧಿಗಳ ಕಾಂಗ್ರೆಸ್‌ನಲ್ಲೂ ಎಡ ಮತ್ತು ದೇಶಪ್ರೇಮಿ ಶಕ್ತಿಗಳ ಒಕ್ಕೂಟಕ್ಕೆ ಬಹುಮತವಿದೆ. ವಿದೇಶಾಂಗ ವ್ಯವಹಾರ, ರಕ್ಷಣೆ, ಆಂತರಿಕ ಭದ್ರತೆ ಮುಂತಾದ ವಿಷಯಗಳಲ್ಲಿ ಅಧ್ಯಕ್ಷೀಯ ಅಧಿಕಾರವನ್ನು ಪಾರ್ಲಿಮೆಂಟಿಗೆ ಬಿಟ್ಟುಕೊಡುವುದು ಮುಂತಾದ ಮಾತುಕತೆ ಮೂಲಕ ಪರಿಹರಿಸುವ ಬಗ್ಗೆ ಆಗೊಮ್ಮೆ ಈಗೊಮ್ಮೆ ಯೆಲ್ಟ್‌ಸಿನ್ ಮಾತನಾಡುತ್ತಿರುವುದು ತಗ್ಗುತ್ತಿರುವ ಆತ್ಮವಿಶ್ವಾಸದ ಪ್ರತೀಕ. ಜನತಾ ಪ್ರತಿನಿಧಿಗಳ ಕಾಂಗ್ರೆಸ್ ಸಂವೈಧಾನಿಕ ಬಿಕ್ಕಟ್ಟು ಬಗೆಹರಿಸಲು ಅಧ್ಯಕ್ಷೀಯ ಚುನಾವಣೆ ಮತ್ತು ಪಾರ್ಲಿಮೆಂಟು ಚುನಾವಣೆಯನ್ನು 1994ರಲ್ಲೇ ಮಾಡುವ ಬದಲಿ ಸಲಹೆ ಬಗೆಗೂ ಚರ್ಚಿಸಲಿದೆ. ಇದು ಜನಮತಸಂಗ್ರಹದ ಬದಲು ಇರುತ್ತದೆ. ಚುನಾವಣೆಯಲ್ಲಿ 1994ರಲ್ಲಿ ಮಾಡುವ ಈ ಸಲಹೆ ಬಗ್ಗೆ ಯೆಲ್ಟ್‌ಸಿನ್ ತೀವ್ರ ವಿರೋಧವಿದೆ. ಆರ್ಥಿಕ ದುಸ್ಥಿತಿ, ರಾಜಕೀಯ ಅರಾಜಕತೆಯಿಂದ ತತ್ತರಿಸುತ್ತಿರುವ ಜನರ ಕೋಪ ಎದುರಿಸಲು ಯೆಲ್ಟ್‌ಸಿನ್ ಈಗ ತಯಾರಿಲ್ಲ. ಅದು ಅವರಲ್ಲಿ ನಡುಕ ಹುಟ್ಟಿಸಿದೆ.

ಯೆಲ್ಟ್‌ಸಿನ್‌ರಲ್ಲಿ ನಡುಕ ಹುಟ್ಟಿಸಿದ ಇನ್ನೊಂದು ಇತ್ತೀಚಿನ ಘಟನೆಯೆಂದರೆ ಫೆಬ್ರವರಿ 14-15ರಂದು ನಡೆದ ಸಫಲ ರಶ್ಯನ್ ಕಮ್ಯುನಿಸ್ಟ್ ಪಕ್ಷದ ಸಮ್ಮೇಳನ. ರ‍್ಯಾಲಿಯಲ್ಲಿ ಬಂದ ಜನಸ್ತೋಮ, ಸಮ್ಮೇಳನದ ಕಾರ್ಯಕಲಾಪಗಳಲ್ಲಿ ಕಂಡ ಹೊಸ ರಾಜಕೀಯ ಉತ್ಸಾಹ, ದೃಢ ನಿರ್ಧಾರ ಯೆಲ್ಟ್‌ಸಿನ್‌ರ ರಾಜಕೀಯ ಬುಡವನ್ನೇ ಅಲುಗಾಡಿಸಿದೆ. ಗೋರ್ಬಚೇವ್ ಅವಧಿಯಲ್ಲಿ ನಿಸ್ತೇಜಗೊಳಿಸಲ್ಪಟ್ಟಿದ್ದ ಕಮ್ಯುನಿಸ್ಟ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಕೆಲಸ ಆರಂಭಿಸಿದ್ದು, ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲೂ ಅದು ರಷ್ಯಾದ ಅತ್ಯಂತ ದೊಡ್ಡ ರಾಜಕೀಯ ಪಕ್ಷವಾಗಿ ಹೊಮ್ಮಿದೆ. ಅದರ ಸದಸ್ಯತ್ವ 5 ಲಕ್ಷ ದಾಟಿದೆ. ಸಂದರ್ಭ ಸಾಧಕರಿಂದ ಮುಕ್ತವಾದ ಜನರ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವ ಪಕ್ಷವಾಗಿದೆ.

ಇದರ ಜತೆಗೆ ರಶ್ಯದ ಕಮ್ಯುನಿಸ್ಟ್ ಪಕ್ಷ ನಿರ್ಧರಿಸಿದಂತೆ ಮಾರ್ಚ್ 26-29ರ ಅವಧಿಯಲ್ಲಿ ಸೋವಿಯತ್ ಕಮ್ಯುನಿಸ್ಟ್ ಪಕ್ಷದ 29ನೇ ಮಹಾಧಿವೇಶನಕ್ಕಾಗಿ ತಯಾರಿ ಭರದಿಂದ ಸಾಗಿದೆ. ಮಾಜಿ ಸೋವಿಯತ್ ಒಕ್ಕೂಟದ ಎಲ್ಲಾ ಗಣರಾಜ್ಯಗಳಲ್ಲಿ ಇದಕ್ಕೆ ಪೂರ್ವಭಾವಿಯಾಗಿ ಅಲ್ಲಿನ ಕಮ್ಯುನಿಸ್ಟ್ ಪಕ್ಷಗಳ ಸಮ್ಮೇಳನಗಳು ಆರಂಭವಾಗಿವೆ. ಸೋವಿಯತ್ ಒಕ್ಕೂಟದ ಮತ್ತು ಸಮಾಜವಾದಿ ವ್ಯವಸ್ಥೆಯ ಪುನಃ ಸ್ಥಾಪನೆ ಪಕ್ಷದ ಘೋಷಣೆಯಾಗಲಿದೆ.

ಪದೇ ಪದೇ ರಶ್ಯಕ್ಕಾಗುತ್ತಿರುವ ರಾಷ್ಟ್ರೀಯ ಅವಮಾನ ಹಾಗೂ ಹದಗೆಡುತ್ತಿರುವ ಪರಿಸ್ಥಿತಿಯಿಂದ ಪ್ರಬಲವಾದ ದೇಶಪ್ರೇಮಿ ಚಳುವಳಿ ಆರಂಭವಾಗಿದೆ. ಅತೃಪ್ತ ಸೈನ್ಯಾಧಿಕಾರಿಗಳು, ಸೈನಿಕರು ತಮ್ಮ ಕೋಪಕ್ಕೆ ದನಿ ಕೊಡಲು ಆರಂಭಿಸಿದ್ದಾರೆ. ಇತ್ತೀಚೆಗೆ 'ಕೆಂಪು ಸೈನ್ಯದ ದಿನ'ವನ್ನು ಭಾರಿ ಸಂಭ್ರಮದಿಂದ ಆಚರಿಸಲಾಯಿತು. ಈ ವರ್ಷ 'ಕೆಂಪುಸೈನ್ಯ'ದ 75ನೇ ವಾರ್ಷಿಕ ದಿನ. ಈ ವರ್ಷ ಆ ದಿನವನ್ನು 'ಪಿತೃ ಭೂಮಿ ರಕ್ಷಕರ ದಿನ'ದ ಹೆಸರಿನಲ್ಲಿ ಆಚರಿಸಲಾಯಿತು. ರ‍್ಯಾಲಿಗೆ ವಿಧಿಸಿದ್ದ ನಿಷೇಧವನ್ನು ಉಲ್ಲಂಘಿಸಿ ಒಂದು ಲಕ್ಷ ಜನರು ರ‍್ಯಾಲಿಯಲ್ಲಿ ಭಾಗವಹಿಸಿದ್ದರು. ಬೃಹತ್ ಮೆರವಣಿಗೆ ಚಾರಿತ್ರಿಕ ಬೈಲೋರಶ್ಯನ್ ಸ್ಟೇಶನ್‌ನಿಂದ ಕ್ರೆಮ್ಲಿನ್ ಚೌಕದ ಬಳಿ ಇರುವ ಮನೇಝ್ ಚೌಕದವರೆಗೆ ಹಾದು ಹೋಯಿತು. 1945ರಲ್ಲಿ ಎರಡನೇ ಮಹಾಯುದ್ಧದಲ್ಲಿ ವಿಜಯದ ನಂತರ ಇದೇ ಹಾದಿಯಲ್ಲಿ 'ವಿಜಯೋತ್ಸವದ ಪೆರೇಡ್' ನಡೆಸಿತ್ತು. ಈ ರ‍್ಯಾಲಿ ಯೆಲ್ಟ್‌ಸಿನ್ ಸರಕಾರವನ್ನು ಭಯಭೀತಗೊಳಿಸಿದೆ. ಎಲ್ಲಿಯವರೆಗೆ ಎಂದರೆ ಯೆಲ್ಟ್‌ಸಿನ್‌ರಿಗೆ ಅಮೇರಿಕ ಸರಕಾರ ಎಲ್ಲಾ ರೀತಿಯ ಬೆಂಬಲ ಕೊಟ್ಟು, ಬೆಂಗಾವಲಿಗೆ ನಿಲ್ಲದಿದ್ದರೆ ಪ್ರಬಲವಾಗಿರುವ ಯೆಲ್ಟ್‌ಸಿನ್ ವಿರೋಧಿ ಶಕ್ತಿಗಳು ಸರಕಾರವನ್ನು ಉರುಳಿಸುತ್ತವೆ ಎಂದು ಅಧ್ಯಕ್ಷರ ಉನ್ನತ ಮಿಲಿಟರಿ ಸಲಹೆಗಾರರು ಹೇಳಿದ್ದಾರೆ. ಅಮೇರಿಕಾ ರಾಯಭಾರಿ ಕಚೇರಿಯ ಅಧಿಕಾರಿಗಳೊಬ್ಬರು 'ಯೆಲ್ಟ್‌ಸಿನ್‌ರ ಉಪಯುಕ್ತ ಅಮೇರಿಕಕ್ಕೆ ಮುಗಿದಿದೆ' ಎಂದು ಹೇಳಿದ್ದರಂತೆ. ಇದರಿಂದಲೂ ಯೆಲ್ಟ್‌ಸಿನ್ ಸರಕಾರ ನಡುಗಿ ಹೋಗಿತ್ತು. ಹಿಂದೆ ಯೆಲ್ಟ್‌ಸಿನ್ ಅಧ್ಯಕ್ಷ ಬುಶ್‌ರಿಗೆ ಮಾಡಿದ ಟೆಲಿಫೋನ್‌ನಲ್ಲಿ ತನ್ನನ್ನು ಅಗತ್ಯಬಿದ್ದರೆ ಸೈನಿಕ ಬೆಂಬಲದಿಂದ ರಕ್ಷಿಸಬೇಕೆಂದು ಗೋಗರೆದಿದ್ದರು ಎಂದು ಈ ಸಂಭಾಷಣೆಯನ್ನು ಗುಟ್ಟಾಗಿ ಪಡೆದ ಪತ್ರಿಕೆಯೊಂದು ಪ್ರಕಟಿಸಿತ್ತು. ಇದು ಯೆಲ್ಟ್‌ಸಿನ್ ಬಗ್ಗೆ ಎಲ್ಲಾ ದೇಶಪ್ರೇಮಿಗಳು ಆತ್ಮಗೌರವವಿರುವ ಎಲ್ಲರೂ ಹೇಸಿಗೆ ಪಡುವಂತಿತ್ತು. ಸೈನಿಕ ಅಧಿಕಾರಿಗಳ ಕೌನ್ಸಿಲ್ ರಕ್ಷಣಾ ಮಂತ್ರಿ ಜನರಲ್ ಗ್ರಾಚೆವ್‌ರನ್ನು ವಜಾ ಮಾಡುವಂತೆ ಕರೆ ನೀಡಿದೆ. ಜನರಲ್ ಗ್ರಾಚೆನ್ ಸೈನ್ಯದ ಒಂದು ಭಾಗ ಕಮ್ಯುನಿಸ್ಟರ ನಿಯಂತ್ರಣಕ್ಕೊಳಗಾಗಿದೆ ಎಂದು ಸಾರ್ವಜನಿಕವಾಗಿ ಪ್ರಲಾಪಿಸಿದ್ದಾರೆ.

ರಶ್ಯಾ - ಕೆಲವು ಭಯಾನಕ ಅಂಕೆ-ಸಂಖ್ಯೆಗಳು

ಅಕ್ಟೋಬರ್ ಕ್ರಾಂತಿಯ ನಂತರ - ಅಂತರ್ಯುದ್ಧ ಮತ್ತು ಮಹಾಯುದ್ಧದ ವರ್ಷಗಳನ್ನು ಬಿಟ್ಟರೆ ಉಳಿದ ಶಾಂತಿಯುತ ವರ್ಷಗಳಲ್ಲಿ - ಮೊದಲ ಬಾರಿಗೆ ಮರಣದ ದರ (ಸಾವಿರದಲ್ಲಿ 12) ಜನನ ದರ (ಸಾವಿರದಲ್ಲಿ 10.6)ಕ್ಕಿಂತ ಹೆಚ್ಚಾಗಿದೆ.

ಆತ್ಮಹತ್ಯೆಯ ಸಂಖ್ಯೆ 1986ರಿಂದ 1992ರ ಅವಧಿಯಲ್ಲಿ ಶೇಕಡಾ 25ರಷ್ಟು ಹೆಚ್ಚಿದೆ.

1952ರಲ್ಲಿ ಕಳೆದ ವರ್ಷಕ್ಕಿಂತ ಉತ್ಪಾದನೆ ಶೇಕಡಾ 20ರಷ್ಟು ಕಡಿಮೆಯಾಯಿತು.

ಮನೆ ನಿರ್ಮಾಣದ ಸಂಖ್ಯೆ 1956ರ ಮಟ್ಟಕ್ಕೆ ಇಳಿದಿದೆ.

1992ರ ಅಪರಾಧಗಳ ಸಂಖ್ಯೆ 20 ಲಕ್ಷ, 1991ಕ್ಕಿಂತ ಶೇಕಡಾ 28ಹೆಚ್ಚು.

ಮದ್ದುಗುಂಡು ಉಳ್ಳ ಶಸ್ತ್ರಾಸ್ತ್ರ ಬಳಸಿ ನಡೆಸಿದ ಅಪರಾಧಗಳ ಸಂಖ್ಯೆ ಕಳೆದ ವರ್ಷಕ್ಕಿಂತ ಎರಡು ಪಟ್ಟು ಆಗಿದೆ.

ಹಿಂದೆ ಜಗತ್ತಿನಲ್ಲೇ ಅತ್ಯಂತ ಸುರಕ್ಷಿತ ನಗರವೆಂದು ಹೆಸರಾಗಿದ್ದ ಮಾಸ್ಕೋದಲ್ಲಿ ಇಂದು ಶಸ್ತ್ರಾಸ್ತ್ರಗಳು ಸುಲಭವಾಗಿ ದೊರೆಯುತ್ತವೆ.

ಈಗ ಸರಕಾರ ಸೂಚಿಸುತ್ತಿರುವ ಶಸ್ತ್ರಾಸ್ತ್ರಗಳ ಕಾನೂನು ಜಾರಿಗೆ ಬಂದರೆ 17 ವರ್ಷಕ್ಕಿಂತ ಹೆಚ್ಚಿನ ಯಾರಾದರೂ ಖಾಸಗಿ ಶಸ್ತ್ರಾಸ್ತ್ರ ಹೊಂದಬಹುದು. ಅಪರಾಧಗಳ ಹೆಚ್ಚಳ, ತೀವ್ರತೆ ಇದರಿಂದಲೇ ಅನುಮಾನಿಸಬಹುದು.

——> ಪುಟ 6.

ತಡೆಗಟ್ಟುವ ಸುಪ್ರಿಂ ಕೋರ್ಟ್ ನೀಡಿರುವ ಐತಿಹಾಸಿಕ ಆಜ್ಞೆಯನ್ನು ಜಾರಿಗೆ ತರುವುದಾಗಿ ಸರಕಾರ ಹೇಳುತ್ತಿರುವುದನ್ನು ಸ್ವಾಗತಿಸಿದ ಎಸ್‌ಎಫ್‌ಐ ರಾಜ್ಯ ಸಮಿತಿ 1993-94ರ ಶೈಕ್ಷಣಿಕ ವರ್ಷದಿಂದಲೇ ಚಾಚೂ ತಪ್ಪದೆ ಜಾರಿಗೊಳಿಸಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸುತ್ತದೆ.

ಬಸ್ ದರ ಏರಿಕೆ ವಾಪಸ್ಸಿಗೆ ಆಗ್ರಹ

ಪ್ರತಿ ಶತ 25 ರಷ್ಟು ಏರಿಸಿರುವ ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣದರವನ್ನು ಪೂರ್ತಿಯಾಗಿ ವಾಪಸ್ಸು ಪಡೆಯಬೇಕೆಂದು ಎಸ್‌ಎಫ್‌ಐ ರಾಜ್ಯ ಸಮಿತಿ ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಿದೆ.

ಬೆಲೆಯೇರಿಕೆ ಬಜೆಟ್ : ಮುಖ್ಯಮಂತ್ರಿ ವೀರಪ್ಪಮೊಯಿಲಿಯವರು ವಿಧಾನಸಭೆಯಲ್ಲಿ ಮಂಡಿಸಿರುವ ಬಜೆಟ್ ದಿನಬಳಕೆಯ ವಸ್ತುಗಳನ್ನು ಮತ್ತಷ್ಟು ದುಬಾರಿಗೊಳಿಸಿ ಜನತೆಯ ಜೀವನವನ್ನು ಇನ್ನಷ್ಟು ಕೆಳಮಟ್ಟಕ್ಕೆ ಇಳಿಸುವುದಾಗಿದೆ. ಬೆಲೆ ಏರಿಕೆ ದಿನೇ ದಿನೇ ಹೆಚ್ಚುತ್ತಿದ್ದರೆ ವಿದ್ಯಾರ್ಥಿ ವೇತನವನ್ನಾಗಿ, ವಿದ್ಯಾರ್ಥಿ ಹಾಸ್ಟೆಲ್ ಸೌಲಭ್ಯಗಳನ್ನಾಗಲಿ ಹೆಚ್ಚಿಸುವ ಬಗ್ಗೆ ಯಾವುದೇ ವಿಚಾರ ಪ್ರಸ್ತಾಪ ಮಾಡದಿರುವುದನ್ನು ರಾಜ್ಯ ಸಮಿತಿ ಖಂಡಿಸುತ್ತದೆ.

ರಾಜ್ಯ ಸಮಿತಿ ಸಭೆಯಲ್ಲಿ ಎಸ್‌ಎಫ್‌ಐ

ಅಖಿಲ ಭಾರತ ಅಧ್ಯಕ್ಷರಾದ ವೈ.ವೆಂಕಟೇಶ್ವರ ರಾವ್ ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆಯನ್ನು ಎಸ್‌ಎಫ್‌ಐ ರಾಜ್ಯ ಸಮಿತಿ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿಯವರು ವಹಿಸಿದ್ದರು.

ಎಸ್.ಎಫ್.ಐ. ಬೆಳ್ತಂಗಡಿ ತಾಲೂಕು ಪ್ರಥಮ ಸಮ್ಮೇಳನ

ಬೆಳ್ತಂಗಡಿ : ಇತ್ತೀಚೆಗೆ ಎಸ್.ಎಫ್.ಐ. ಬೆಳ್ತಂಗಡಿ ತಾಲೂಕು ಪ್ರಥಮ ಸಮ್ಮೇಳನವನ್ನು ಮಂಗಳೂರು ಸಮುದಾಯ ಕಾರ್ಯದರ್ಶಿ ಫಣಿರಾಜ್ ಅವರು ಉದ್ಘಾಟಿಸಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಸ್ಥಳೀಯ ಘಟಕದ ಅಧ್ಯಕ್ಷರಾದ ಯೋಗೀಶ್‌ಕುಮಾರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಿ.ವೈ.ಎಫ್.ಐ.ನ ತಾಲೂಕು ಅಧ್ಯಕ್ಷರಾದ ಮಹಾಲಿಂಗೇಶ್ವರ ಭಟ್. ಎಸ್.ಎಫ್.ಐ. ಜಿಲ್ಲಾ ಸಹಕಾರ್ಯದರ್ಶಿ ರಾಮ್‌ದಾಸ್. ಜಿಲ್ಲಾ ಕಾರ್ಯದರ್ಶಿ ಎಸ್. ರಾಜ್‌ಕುಮಾರ್ ಉಪಸ್ಥಿತರಿದ್ದರು.

ನೂತನ ತಾಲೂಕು ಸಮಿತಿ

ಯೋಗೀಶ್ ಕುಮಾರ್ ಅಧ್ಯಕ್ಷರಾಗಿ ಮಂಜುನಾಥ ಎಂ. ಪ್ರಭಾಕರ ಶೆಟ್ಟಿ ಕುಮಾರಿ ಸಿ.ಬಿ. ಉಪಾಧ್ಯಕ್ಷರುಗಳಾಗಿ ಸಿ.ಐ.ಥೋಮಸ್ ಕಾರ್ಯದರ್ಶಿ, ಕುಮಾರಿ ಮಾಲತಿ ಭಟ್, ಮಹಮದ್ ಆಲಿ, ಪ್ರಭಾಚಂದ್ರ ಅವರು ಉಪಾಧ್ಯಕ್ಷರುಗಳಾಗಿ ಮತ್ತು 11 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಮ್ಮೇಳನ ಆಯ್ಕೆ ಮಾಡಿತು.

ಎಸ್.ಎಫ್.ಐ. ಮಂಗಳೂರು ತಾಲೂಕು ಸಮ್ಮೇಳನ

ಮಂಗಳೂರು : ಎಸ್.ಎಫ್.ಐ. ಮಂಗಳೂರು ತಾಲೂಕು ಸಮ್ಮೇಳನವು ಫೆಬ್ರವರಿ 13,1993 ರಂದು ಮಂಗಳೂರಿನಲ್ಲಿ ನಡೆಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಎಸ್.ಎಫ್.ಐ. ಜಿಲ್ಲಾ ಸಮಿತಿ ಉಪಾಧ್ಯಕ್ಷರಾದ ಸತೀಶ್ ಕುಮಾರ್ ಬಜಾಲ ವಹಿಸಿದ್ದರು.

ಸಮ್ಮೇಳನದ ಧ್ವಜಾರೋಹಣವನ್ನು ಶರತ್‌ಕುಮಾರ್(ತಾಲೂಕು ಸಮಿತಿಯ ಕಾರ್ಯದರ್ಶಿ) ನೆರವೇರಿಸಿದರು.

ಸಮ್ಮೇಳನವನ್ನು ಡಿ.ವೈ.ಎಫ್.ಐ. ಜಿಲ್ಲಾ ಅಧ್ಯಕ್ಷ ವಸಂತ ಆಚಾರಿಯವರು ಉದ್ಘಾಟಿಸುತ್ತಾ ಶಿಕ್ಷಣದಲ್ಲಿ ಧರ್ಮವನ್ನು ಬೆರೆಸುವುದರಿಂದ ದೇಶದಲ್ಲಿ ಉದ್ಭವಿಸಿರುವ ಆರ್ಥಿಕ ಶೈಕ್ಷಣಿಕ ಸಮಸ್ಯೆಗಳಿಗೆ ಉತ್ತರ ದೊರಕಲಾರದು ಎಂದರು. ಅನಕ್ಷರತೆ ಬಡತನ, ನಿರುದ್ಯೋಗ ನಿವಾರಣೆಗಾಗಿ, ಶಿಕ್ಷಣ ಮತ್ತು ಉದ್ಯೋ

ಚೆನ್ನರಾಯಪಟ್ಟಣ : ರಾಜ್ಯ ಸರಕಾರ ಹೆಚ್ಚಿಸಿರುವ ಬಸ್‌ಪ್ರಯಾಣ ದರದಲ್ಲಿನ ಹೆಚ್ಚಳವನ್ನು ವಿರೋಧಿಸಿ ರಸ್ತೆ ತಡೆ ನಡೆಸಿತು. ಸುಮಾರು ಅರ್ಧಗಂಟೆಗೂ ಹೆಚ್ಚು ಕಾಲ ವಿದ್ಯಾರ್ಥಿಗಳು ಸಂಚಾರ ತಡೆದು ಸಮಸ್ಯೆಯತ್ತ ಗಮನಿಸದಿದ್ದ ಜನರ ಗಮನ ಸೆಳೆದರು. ವಿದ್ಯಾರ್ಥಿಗಳನ್ನುದ್ದೇಶಿಸಿ ಜಿಲ್ಲಾ ಸಹ ಸಂಚಾಲಕ ಮಲ್ಲೇಶ್(ಈರೇಗೌಡ) ನಿರಂಜನ ಮತ್ತಿತರರು ಮಾತನಾಡಿದರು.

ಮೂಲಪ್ರಶ್ನೆಗಳನ್ನು ಕಡೆಗಣಿಸಿದ ರಾಷ್ಟ್ರಪತಿ ಭಾಷಣ

ಪಿ.ಡಿ. ಸಂಪಾದಕೀಯ

ಸಂಸತ್ತಿನ ಬಜೆಟ್ ಅಧಿವೇಶನವನ್ನು ಉದ್ಘಾಟಿಸಿದ ರಾಷ್ಟ್ರಪತಿ ಭಾಷಣ ನರಸಿಂಹರಾವ್ ಸರಕಾರ ತಯಾರಿಸಿದ, ಅನುಮೋದಿಸಿದ ಭಾಷಣ. ಇದು ಹೆಚ್ಚೆಂದರೆ ಒಂದು ಅಸಂಬದ್ಧವಾದ ದೇಶದ ಉರಿಯುತ್ತಿರುವ ಪ್ರತಿಯೊಂದು ಸಮಸ್ಯೆಯ ಬಗ್ಗೆಯೂ ನಿರ್ಲಕ್ಷ್ಯ ತೋರಿದ ಭಾಷಣ. ಕಳೆದ ಎರಡು ತಿಂಗಳ ನಾಚಿಕೆಗೇಡಿ ಘಟನೆಗಳನ್ನು, ದೇಶದ ಮೇಲೆ ಗಂಭೀರ ಪರಿಣಾಮ ಬೀರುತ್ತಿರುವ ಘಟನೆಗಳನ್ನು "ಡಿಸೆಂಬರ್ 6ರ ದುರಂತಕಾರೀ ಘಟನೆಗಳು ಮತ್ತು ನಂತರ ನಡೆದ ಸಂಗತಿಗಳು" ಎಂದಷ್ಟೇ ಹೇಳಿ ಮುಗಿಸಿಬಿಟ್ಟಿರುವ ರೀತಿಯಂತೂ ಇಷ್ಟೊಂದು ಇದನ್ನು ಹಗುರವಾಗಿ ಕಾಣಲು ಸಾಧ್ಯವೇ ಎಂದು ನಂಬಲಿಕ್ಕೂ ಸಾಧ್ಯವಾಗುತ್ತಿಲ್ಲ. ಅತ್ಯಂತ ದುಷ್ಟ ಕೋಮುವಾದಿ ಶಕ್ತಿಯ ಅತ್ಯಂತ ಯೋಜಿತ, ದೃಢ ಆಕ್ರಮಣದ ಎದುರು ನಡುಗಿದ ಪ್ರಧಾನಮಂತ್ರಿಯ(ಅವರಿಗೆ ನಿಜವಾಗಿಯೂ ಏನೊಂದೂ ತೋಚಲಿಲ್ಲ ಎಂದೇ ಬೇಕಾದರೆ ನಂಬೋಣ) ಭಾಷಣಗಳಂತೆ, ವರ್ತನೆಯಂತೆ ಈ ರಾಷ್ಟ್ರಪತಿ ಭಾಷಣದಲ್ಲಿ ಕೂಡಾ ಜಾತ್ಯಾತೀತ ಪ್ರಜ್ಞೆಯನ್ನು ಆಳವಾಗಿ ಕಲಕಿದ ಈ ಘಟನೆಯ ಬಗ್ಗೆ ಅಸಹ್ಯವಾಗಲಿ, ಸಿಟ್ಟಾಗಲಿ ಕಾಣಿಸುತ್ತಿಲ್ಲ. "ಡಿಸೆಂಬರ್ 6ರ ದುರಂತಕಾರೀ ಘಟನೆಗಳು" ಸ್ವತಂತ್ರ ಭಾರತದ ಇತಿಹಾಸದಲ್ಲಿ ಒಂದು ಕವಲು ದಾರಿಯಲ್ಲಿ ತಂದು ನಮ್ಮನ್ನು ನಿಲ್ಲಿಸಿದೆಯೆಂದು ದೇಶವನ್ನು ಅದು ಎಚ್ಚರಿಸಿಲ್ಲ. ಇದರ ಪರಿಹಾರಕ್ಕೆ ಸುಪ್ರೀಂ ಕೋರ್ಟ್‌ನ್ನು 143 ನೇ ಕಲಮಿನ ಪ್ರಕಾರ ಕೇಳಿಕೊಳ್ಳಲಾಗಿದೆ ಎಂದಿದೆಯಷ್ಟೇ. 138ನೇ ಕಲಮಿನಡಿಯಲ್ಲಿ ಈ ಸಂಬಂಧ ಎಲ್ಲಾ ಸಮಸ್ಯೆಗಳನ್ನು ಒಟ್ಟು ಸೇರಿಸಿ ಒಂದು ತೀರ್ಪನ್ನು ಕೊಡಲು ಕೇಳದೆ, 143ನೇ ಕಲಮಿನ ಪ್ರಕಾರ ಸುಪ್ರೀಂ ಕೋರ್ಟ್ ಅಭಿಪ್ರಾಯವನ್ನು ಕೊಡಲು ಮಾತ್ರ ಕೇಳಲಾಗಿದೆ. "ಡಿಸೆಂಬರ್ 6ರ ದುರಂತಕಾರೀ ಘಟನೆಗಳ"ನ್ನು ನಡೆಸಿದ, ಸಂಸತ್ತನ್ನು ಪ್ರವೇಶಿಸುವಾಗ ಸಂವಿಧಾನವನ್ನು ಎತ್ತಿ ಹಿಡಿಯುತ್ತೇವೆಂದು ಹೇಳಿದ ಜನ ಮತ್ತೊಮ್ಮೆ ಸುಪ್ರೀಂ ಕೋರ್ಟ್‌ನ ಅಭಿಪ್ರಾಯಕ್ಕಿಂತ ತಮ್ಮ ನಂಬಿಕೆಯೇ ಮೇಲು ಎಂದರೇನು ಮಾಡುವುದು?

ಇದು ಸುಮ್ಮನೇ ತರ್ಕದಲ್ಲಿ ಗೆಲ್ಲಲು ಹೇಳುವ ಮಾತಲ್ಲ. ದೇಶದ ಭವಿಷ್ಯದ ಬಗ್ಗೆ ಆಳವಾದ ಆತಂಕದಿಂದ ಹೇಳುವ ಮಾತು. ಹತ್ತಾರು ಧರ್ಮಗಳಿಂದ, ಇನ್ನು ಹೆಚ್ಚು ಭಾಷೆಗಳಿಂದ ಕೂಡಿರುವ ನಾಡು ಭಾರತ ಒಂದು ಭೌಗೋಳಿಕ, ರಾಜಕೀಯ ಘಟಕವಾಗಿ ಉಳಿಯಲು ಸಾಧ್ಯವೇ? ಇದೀಗ ನಮ್ಮ ಮುಂದಿರುವ ಪ್ರಶ್ನೆ. ಈ ಮೂಲಭೂತ ಪ್ರಶ್ನೆಯನ್ನು ರಾಷ್ಟ್ರಪತಿ ಭಾಷಣ ಬದಿಗೆ ಸರಿಸಲು ಪ್ರಯತ್ನಿಸಿದೆ. ಇದರಿಂದ ಯಾವ ಉದ್ದೇಶ ಸಾಧನೆಯೂ ಆಗುವುದಿಲ್ಲ.

ಇನ್ನು ಈ ಭಾಷಣದಲ್ಲಿ ನೀಡಿರುವ ಆರ್ಥಿಕ ಚಿತ್ರಣದ ಬಗ್ಗೆ ನೋಡೋಣ. ಜನ ಈ ಬಗ್ಗೆ ಸರಕಾರದ ಆರ್ಥಿಕ ತಜ್ಞರ ದೊಡ್ಡ ದೊಡ್ಡ ಮಾತುಗಳ ಮೂಲಕ ತೀರ್ಪಿಗೆ ಬರುವುದಿಲ್ಲ. ಏಕೆಂದರೆ ಮಾರುಕಟ್ಟೆಯಲ್ಲಿ ಅವರ ದಿನನಿತ್ಯದ ಅನುಭವ ಬೇರೆಯೇ ಆಗಿದೆ. ಅವರು ಅಕ್ಕಿ, ಗೋಧಿ, ತರಕಾರಿ ಮತ್ತಿತರ ಜೀವನದ ಅಗತ್ಯ ವಸ್ತುಗಳ ಬೆಲೆಗಳನ್ನು ಕಂಡು ಆರ್ಥಿಕ ಪಾಠ ಕಲಿಯುತ್ತಾರೆ..1991-92 ರಲ್ಲಿ 16 ಶೇ. ಕ್ಕೂ ಹೆಚ್ಚಿದ್ದ ಹಣದುಬ್ಬರ ದರ 1992-93ರಲ್ಲಿ ಶೇ. 7ಕ್ಕೆ ಇಳಿದಿದೆ ಎಂದು ಆರ್ಥಿಕ ತಜ್ಞರು ನಮಗೆ ಹೇಳುತ್ತಿದ್ದಾರೆ. ಆದರೆ ಕಮ್ಮಿಯಾದದ್ದು ಹಣದುಬ್ಬರದ ದರ - ಹಣದುಬ್ಬರ ಅಲ್ಲ. ಸಗಟು ಬೆಲೆಗಳ ಪ್ರಕಾರ ಕೂಡಾ 1991-92ಕ್ಕೆ ಹೋಲಿಸಿದರೆ ಬೆಲೆಗಳು ಶೇ.23 ಹೆಚ್ಚಿವೆ ಎಂದೇ ಅರ್ಥವಲ್ಲವೇ? ಈ ಅಂಶವನ್ನು ಎಂದೂ ಅವರು ಹೇಳುವುದಿಲ್ಲ.

ಆರ್ಥಿಕ ರಂಗದಲ್ಲಿ ಆಸೆ-ನಿರೀಕ್ಷೆಗಳ ಚಿತ್ರ ನೀಡಲು ಸರಕಾರ ಬಹಳ ಶ್ರಮ ಪಡುತ್ತಿದೆ. ಆದರೆ ಇದರಿಂದ ಯಾರನ್ನೂ ಮರುಳು ಮಾಡಲು ಸಾಧ್ಯವಿಲ್ಲ. ಪ್ರಕೃತಿ ಸತತ ನಾಲ್ಕು ವರ್ಷ ಒಳ್ಳೆಯ ಮಳೆ ನೀಡಿ ಹಿಂದೆಂದೂ ಕಾಣದ ಔದಾರ್ಯವನ್ನು ತೋರಿದ್ದರೂ ಆರ್ಥಿಕ ರಂಗದ ಜಡತೆ, ಮಂದತ್ವ ಮುಂದುವರಿಯುತ್ತಲೇ ಇದೆಯೇಕೆ? ಕೈಗಾರಿಕಾ ಬೆಳವಣಿಗೆ ಕೇವಲ ಶೇ. 4 ಎಂದು ಲೆಕ್ಕ ಹಾಕಲಾಗಿದೆ. ವಿದೇಶ ವ್ಯಾಪಾರವಂತೂ ಶೋಚನೀಯ. ರಫ್ತು 19 ಶತಕೋಟಿ ಡಾಲರು(ಸುಮಾರು 60 ಸಾವಿರ ಕೋಟಿ ರೂಪಾಯಿ) ಮೀರಲಾರದು, ಆದರೆ ಆಮದು 25 ಶತಕೋಟಿ ಡಾಲರು(ಸುಮಾರು 80 ಸಾವಿರ ಕೋಟಿ ರೂಪಾಯಿ)! ವಿದೇಶೀ ಸಾಲ 2 ಲಕ್ಷ ಕೋಟಿ ರೂಗೂ ಹೆಚ್ಚು! ಇನ್ನೂ ಆತಂಕದ ಸಂಗತಿಯೆಂದರೆ ನಮ್ಮಲ್ಲಿರುವ ವಿದೇಶೀ ಕರೆನ್ಸಿ ಆಸ್ತಿ 12960 ಕೋಟಿ ರೂ. ಆದರೆ ನಾವು ಸದ್ಯದಲ್ಲೇ ತೀರಿಸಬೇಕಾದ ಸಾಲದ ಮೊತ್ತ 15991ಕೋಟಿ ರೂ. ಈ ಸಾಲ ತೀರಿಸುವುದು ಹೇಗೆ? ಅಂದರೆ ಮತ್ತೊಂದು ಬಿಕ್ಕಟ್ಟು! ಈ ಬಿಕ್ಕಟ್ಟಿನಿಂದ ಹೊರಬರಲು ಮತ್ತೆ ಸರಕಾರ ಐಎಂಎಫ್-ವಿಶ್ವಬ್ಯಾಂಕ್‌ಗೆ ಮೊರೆ!

ಈ ಹಿನ್ನೆಲೆಯಲ್ಲಿ ಭಾರತದ ತಕ್ಷಣದ ಸ್ಥಿತಿಯೇನು? ನಮ್ಮ ಆರ್ಥಿಕದ ಮೇಲೆ ಐಎಂಎಫ್-ವಿಶ್ವಬ್ಯಾಂಕಿನ ಇನ್ನೂ ಬಿಗಿ ಹಿಡಿತ. ಎಕ್ಸಿಟ್ ಪಾಲಿಸಿ ಅಥವಾ ನಿರ್ಗಮನ ನೀತಿ ಎಂಬ ಭಾರೀ ಪದಪುಂಜ ಹೇಳುವ ಅಥವಾ ಅಡಗಿಸಿಡುವ ರಿಟ್ರೆಂಚ್‌ಮೆಂಟ್ ನೀತಿ ಆಗಲೇ ಜಾರಿಯಾಗಿದೆ. 22 ಸಾವಿರ ಎನ್‌ಟಿಸಿ ಕಾರ್ಮಿಕರಿಗೆ ಈ 'ಎಕ್ಸಿಟ್ ಪಾಲಿಸಿ ಅನ್ವಯವಾಗಿದೆ' ಎಂದು ಭಾರೀ ಗಂಭೀರವಾಗಿ ರಾಷ್ಟ್ರಪತಿ ಭಾಷಣ ತಿಳಿಸುತ್ತದೆ. ಅಂದರೆ 22 ಸಾವಿರ ಕಾರ್ಮಿಕರನ್ನು ಕೆಲಸದಿಂದ ಹೊರದಬ್ಬಲಾಗಿದೆ. ಸಮಯ ಕಳೆದಂತೆ ಈ ಪ್ರವೃತ್ತಿ ಇನ್ನಷ್ಟು ತೀವ್ರವಾಗಲಿವೆ. ಕಾರ್ಮಿಕ ವರ್ಗದ ಮೇಲೆ ಧಾಳಿ... ಮೇಲೆ ಧಾಳಿಗಳು ಬರಲಿವೆ. ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಧಕ್ಕೆ ತಾರದೆ ಇದು ಸಾಧ್ಯವಿಲ್ಲವಾದ್ದರಿಂದ ಪ್ರಜಾಪ್ರಭುತ್ವವೇ ಈ ಎಲ್ಲಾ ಕ್ರಮಗಳಿಗೆ ಪ್ರಮುಖ ಬಲಿ. ಹೀಗಿರುವಾಗ ಪಂಜಾಬ್, ಮೇಘಾಲಯ, ನಾಗಾಲ್ಯಾಂಡ್‌ಗಳ ಚುನಾವಣೆಗಳನ್ನು ಸಾಧಿಸಲಾಗುವ ರಾಷ್ಟ್ರಪತಿ ಭಾಷಣ ತ್ರಿಪುರಾದ ಬಗ್ಗೆ ಮೌನವಾಗಿದ್ದರೆ ಆಶ್ಚರ್ಯವೇನು? ತ್ರಿಪುರಾದ ಕಾಂಗ್ರೆಸ್(ಐ) ಸರಕಾರ

ಪುಟ ೮ಕ್ಕೆ

KRNM/BGS-405 MAG(2) PRB DECR 319-78/79

ಮುಸುಕಿನಲ್ಲಿ ಅಡಗಿದೆ ಮಾಯೆ ....

ಪುಟ 5ರಿಂದ

ಗೆಳಿ ಮಾಡಿ ಡಾಲರ್ ಬೆಲೆ ವಿಥೀರ್ ಏರಿಕೆಯಾಗುವಂತೆ ಮಾಡಬಹುದು. ದೇಶದ ಜನರ ಬದುಕಿನ ಜೊತೆ ಚೆಲ್ಲಾಟವಾಡಬಹುದು. ಈಗಂತೂ ರಸಗೊಬ್ಬರದ ರಂಜಕ ಪೊಟ್ಯೋಷ್ ಮೇಲಿನ ಸರಕಾರೀ ನಿಯಂತ್ರಣವನ್ನು ಕಿತ್ತು ಹಾಕಿದೆ. ಅದರಿಂದ ಇದ್ದಕ್ಕಿದ್ದಂತೆ ನಾಲ್ಕು ಪಟ್ಟು ಏರಿದ ಈ ಬೆಲೆಗಳು, ಈಗ ಮತ್ತಷ್ಟು ಏರಬಹುದು ಯಾವಾಗೆಂದರೆ ಆಗ ಏರುತ್ತಿರಬಹುದು. ಏಕೆಂದರೆ ಪೊಟ್ಯಾಷ್ ಪೂರ್ಣ ಆಮದು, ರಂಜಕದ ಮೂಲ ವಸ್ತುಗಳ ಆಮದು.

ಬಜೆಟ್‌ನಲ್ಲಿರುವ ಮಾಯಾ ಮಂತ್ರ

4522 ಕೋಟಿ ರೂ ತೆರಿಗೆ ಕಡಿತ ಮಾಡಿ ಬಜೆಟ್‌ನ ಕೊರತೆಯನ್ನು ಳಿಸಬೇಕಾದರೆ ಹಾಗೂ ಯೋಜನಾ ವೆಚ್ಚವನ್ನು ಬಹುವಾಗಿ ಹೆಚ್ಚಿಸಬೇಕಾದರೆ ಮತ್ತೇನು ಮಂತ್ರ ಮಾಟ ಮಾಡಿರಬಹುದು ಮನಮೋಹನಸಿಂಗರವರು. ಹಾಕಿದ್ದಾರೆ ದೊಡ್ಡ ಮಂತ್ರ ಮಾಯಗಳನ್ನು ಹಾಕಿದ್ದಾರೆ.

ಹಾಂ! ನೋಡಿ ಸ್ವಾಮಿ!! ಮಂತ್ರ ಒಂದು: ಸಾಲ! ಸಾಲ!! ಸಾಲ!!!

ಮತ್ತೆ ನೋಡಿ ಸ್ವಾಮಿ! ಮಂತ್ರ ಎರಡು : ಸಬ್ಸಿಡಿಗಳ ಕಡಿತ - ರಸಗೊಬ್ಬರದ ಸಬ್ಸಿಡಿಯಲ್ಲಿ 2300 ಕೋಟಿ ರೂ ಮಂಗಮಾಯ.

ಬಜೆಟ್ ಕೊರತೆ ತುಂಬಲು ವಿದೇಶದಿಂದ ಸಾಲ ಐಎಂಎಫ್ - ವಿಶ್ವಬ್ಯಾಂಕ್‌ಗಳಿಂದ ಸಾಲ, ವಿದೇಶಿ ಖಾಸಗಿ ಬ್ಯಾಂಕ್‌ಗಳಿಂದ ದುಬಾರಿ ಬಡ್ಡಿಯ ಅಲ್ಪಾವಧಿಯ ಸಾಲ, ಸರಕಾರವೇ ಸಾಲ ಮಾಡುವುದು, ವಿವಿಧ ಸರಕಾರಿ ಕೈಗಾರಿಕೆ, ಕಾರ್ಪೋರೇಷನ್‌ಗಳೂ ಸಾಲ ಮಾಡುವುದು.

ನಮ್ಮ ದೇಶದೊಳಗಡೆ ಶ್ರೀಮಂತರಿಂದ ಸರಕಾರ ಸಾಲ ಪಡೆಯುವುದು, ಸರಕಾರಿ ಕಂಪೆನಿಗಳು, ಬ್ಯಾಂಕ್‌ಗಳೂ ಹಣ ಎತ್ತುವುದು ಈ ಶ್ರೀಮಂತರ ಮಹೋದಯರಿಗೆ ಬಡ್ಡಿ ಕೊಡುವುದು. ಅವರು ಕೊಡಬೇಕಾದ ಆದಾಯ ತೆರಿಗೆ ಇತ್ಯಾದಿಗಳನ್ನು ಕಡಿಮೆ ಮಾಡುವುದು ಅಥವಾ ಕಣ್ಣುಮುಚ್ಚಿ ಕುಳಿತುಕೊಳ್ಳುವುದು.

ಮಂತ್ರ ಮೂರು: ರಾಜ್ಯ ಸರಕಾರಗಳಿಗೆ ಕೊಡುತ್ತಿದ್ದ ತೆರಿಗೆ ಪಾಲು ತೆರಿಗೆ ಕಡಿತ ಮಾಡಿ ಕೂಡಲೇ ಕಡಿತ. ಅದರ ಜೊತೆಗೆ ಯೋಜನೇತರ ಸಹಾಯದಲ್ಲಿ ಕಡಿತ. 500-600 ಕೋಟಿ ಕಡಿತ. ಇದರ ಫಲ ರಾಜ್ಯ ಸರಕಾರದಿಂದ ಬೆಲೆ ಏರಿಕೆಗಳು, ಖೋತಾ ಬಜೆಟ್‌ಗಳು. ಅಭಿವೃದ್ಧಿಗಳು ಮತ್ತಷ್ಟು ಕುಂಠಿತ.

ಸಾಲಿಗನು ಬಂದು ಸೆಳೆವಾಗ ಕಿಬ್ಬದಿಯ ಕೀಲು ಮುರಿದಂತೆ

ಸಾಲ! ಸಾಲ!!! ಎಂಬ ಮಂತ್ರ ಸರಕಾರಕ್ಕೆ ಸುಲಭವಾಗಿ ದಕ್ಕಿದೆ. ಆದರೆ "ಸಾಲವನು ಕೊಂಬಾಗ ಹಾಲೋಗರಉಂಡಂತೆ, ಸಾಲಿಗನು ಬಂದು ಸೆಳೆವಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ" ಎಂಬ ಪಾಠ ಸರಕಾರದ ಅನುಭವಕ್ಕೆ ಬಂದಿಲ್ಲವೆ? ಈಗಾಗಲೇ ದೇಶದ ಮೇಲಿರುವ ವಿದೇಶೀ ಸಾಲದ ಹೊರೆ 2,40,000 ಕೋಟಿ ರೂಗಳಿಗಿಂತಲೂ ಜಾಸ್ತಿ. ಕೇವಲ ಆರೇಳು ವರ್ಷಗಳ ಹಿಂದೆ ರಾಜೀವ್ ಗಾಂಧಿ ಅಧಿಕಾರಕ್ಕೆ ಬಂದಾಗ, ಕೇವಲ 20,000 ಕೋಟಿ ರೂಗಳಷ್ಟಿದ್ದ ವಿದೇಶೀ ಸಾಲ ಈಗ ಎಷ್ಟಾಗಿದೆ? ಇನ್ನು ದೇಶದೊಳಗಿನ ಶ್ರೀಮಂತರಿಂದ ಮಾಡಿದ ಸಾಲ ಎರಡೂವರೆ ಲಕ್ಷ ಕೋಟಿ ರೂಗಳಿಗಿಂತ ಹೆಚ್ಚು.ಸಾಲ ಮಾಡುವುದು ಬಿಟ್ಟು ಬೇರ ಯಾವ ಕೆಲಸವೂ ಇಲ್ಲ ಎಂಬಂತಾಗಿದೆ ನಮ್ಮ ಕೇಂದ್ರ ಸರಕಾರಕ್ಕೆ. ಅದರ ಫಲ ಇಂದು ನಾವು ವರ್ಷಕ್ಕೆ 38,000 ಕೋಟಿ ರೂ ಬಡ್ಡಿ ಹಾಗೂ ಕಂತುಗಳಿಗಾಗಿ ತೆರುತ್ತಿದ್ದೇವೆ. ಇದು ಹಿಂದಿನ ವರ್ಷಕ್ಕಿಂತ 5,500 ಕೋಟಿ ರೂ ಹೆಚ್ಚು. ಈ ವರ್ಷದ ದೇಶದ ಒಟ್ಟು ವೆಚ್ಚದ ಕಾಲು ಭಾಗ. ಈ ಬಡ್ಡಿಯ ಪ್ರಮಾಣವನ್ನು ದೇಶದಲ್ಲಿ ಶಿಕ್ಷಣಕ್ಕೆಂದು ಮೀಸಲಾಗಿಟ್ಟಿರುವ ಕೇವಲ 1310 ಕೋಟಿ ಆರೋಗ್ಯಕ್ಕೆಂದು ಇಟ್ಟಿರುವ ಕೇವಲ 483 ಕೋಟಿ ರೂಗಳ ಜೊತೆ ಹೋಲಿಸಿ. ಈ ಅಗಾಧ ಬಡ್ಡಿಯ ಹೊರೆಯ

ಮುಂದೆ ದೇಶದ ರೈತರಿಗೆ ರಸಗೊಬ್ಬರ ಸಬ್ಸಿಡಿಗೆ ಬೇಕಾದ 6000 ಕೋಟಿ ರೂ ಕೂಲಿಕಾರರಿಗೆ ಕಾರ್ಮಿಕರಿಗೆ ರೇಷನ್ ಕೊಡುವುದಕ್ಕೆ ಬೇಕಾದ 3000 -4000 ಕೋಟಿ ರೂ ಆಹಾರ ಸಬ್ಸಿಡಿಗೆ ಹೋಲಿಸಿ. ಈ ಬಡ್ಡಿಯ ಹೊರೆ ಇಲ್ಲದಿದ್ದರೆ ಆಹಾರ ಧಾನ್ಯಗಳ, ರಸಗೊಬ್ಬರದ ಬೆಲೆ ಏರಿಸಬೇಕಾದ ಅಗತ್ಯ ಬರುತ್ತಿರಲಿಲ್ಲ.

ಇಂತಹ ಬಡ್ಡಿಯನ್ನು ಪ್ರತಿ ವರ್ಷ ತೆರುತ್ತಿದ್ದೇವೆ. ಆದರೆ ಕೇವಲ 2-3000 ಕೋಟಿ ರೂ. ವೆಚ್ಚದ ಕೃಷ್ಣಾ ಮೇಲ್ದಂಡೆ ಯೋಜನೆ, ಕಾವೇರಿ ಯೋಜನೆಗಳು ಹಿಂದೆ ಬೀಳುತ್ತಾ ಹೋಗುತ್ತಿವೆ. 500-600 ಕೋಟಿ ರೂ ವೆಚ್ಚದ ವಿಜಯನಗರ ಉಕ್ಕಿನ ಕಾರ್ಖಾನೆ 20ವರ್ಷಗಳಿಂದ ಅಲ್ಲೇ ಇದೆ.

ಇಂತಹ ಕಷ್ಟ ಕೋಟಲೆಗಳಿಗೆ ಒಳಗಾಗಿಯೂ ಮತ್ತೆ ಸಾಲಕ್ಕಾಗಿ ನುಗ್ಗುತ್ತಿದ್ದೇವೆ. ಇನ್ನೂ ಹೆಚ್ಚಿನ ದುಬಾರಿ ಬಡ್ಡಿಯ ವಿದೇಶೀ ಖಾಸಗಿ ಬ್ಯಾಂಕ್‌ಗಳ ಸಾಲಕ್ಕಾಗಿ. ಯಾಕೆ? ಈ ಸಾಲವನ್ನು ಕೊಂಬಾಗ ಹಾಲೋಗರವುಂಡಂತೆ ಆಗುತ್ತಿದೆ ನಮ್ಮ ದೇಶದ ಆಳುವ ವರ್ಗಗಳಿಗೆ ಬಂಡವಾಳಶಾಹಿಗಳಿಗೆ ಭೂ ಮಾಲಕರಿಗೆ ಆದ್ದರಿಂದ ಮತ್ತೆ ಮತ್ತೆ ಅವರಿಗೆ ಸಾಲ ಬೇಕು. ಆದರೆ ಕಿಬ್ಬದಿಯ ಕೀಲು ಮುರಿಯುತ್ತಿರುವುದು ಜನಸಾಮಾನ್ಯರಿಗೆ. ಮತ್ತೆ ಮತ್ತೆ ಮುರಿಯುತ್ತಿದೆ ಅವರ ಪಕ್ಕೆಲುಬುಗಳು.

ಕೃಷಿಗೆ ಶಿಕ್ಷಣಕ್ಕೆ ಹೆಚ್ಚು ಹಣ

ಯೋಜನೆಗೆ, ಕೃಷಿಗೆ, ಶಿಕ್ಷಣ, ಆರೋಗ್ಯಗಳಿಗೆ ಹೆಚ್ಚು ಹಣ ನೀಡಲಾಗಿದೆ ಎಂದು ದೊಡ್ಡೆ ಹೊಡೆಯಲಾಗುತ್ತಿದೆ. ಎಲ್ಲಾ ಕಡೆ ಮನಮೋಹನಸಿಂಗ್‌ರು ಅದನ್ನೇ ಹೇಳುತ್ತಿದ್ದಾರೆ. ದೇಶದಲ್ಲಿ ಏಳುತ್ತಿರುವ ಅತೃಪ್ತಿಯ ಅಲೆ, ರೈತರಲ್ಲಿ, ಕಾರ್ಮಿಕರಲ್ಲಿ, ಜನಸಾಮಾನ್ಯರಲ್ಲಿನ ಅಸಮಾಧಾನವನ್ನು ನೋಡಿದ ಐಎಂಎಫ್ ಈ ಬಾಬ್ತುಗಳಿಗೆ ಹಣ ನೀಡಿಕೆ ಕಡಿಮೆ ಮಾಡಬೇಡಿ ಎಂದು ಎಚ್ಚರಿಸಬೇಕಾಯಿತು ಎಂದು ಅಮೇರಿಕಾದ ರಾಜಧಾನಿ ವಿಶ್ವಬ್ಯಾಂಕ್‌ನ ಕಛೇರಿಯಿರುವ ವಾಷಿಂಗ್‌ಟನ್ನಿನ ವರದಿಗಳು ಹೇಳುತ್ತವೆ. ಎಂಥಾ ದೌರ್ಭಾಗ್ಯ ನಮ್ಮ ದೇಶದ್ದು!

ಆದರೆ ಈ ಅಂಕಿ ಅಂಶದಲ್ಲಿಯೂ ಸುಳ್ಳುಗಳು ಮೋಸಗಳು. ಬಜೆಟ್‌ನಲ್ಲಿ ಹಿಂದಿನ ವರ್ಷ ನಿಜವಾಗಿ ಎಷ್ಟು ವೆಚ್ಚವಾಗಿದೆ ಎನ್ನುವುದನ್ನು ಬಿಟ್ಟು ವೆಚ್ಚ ಮಾಡಬೇಕೆಂದು ಹಾಕಿಕೊಂಡ ಅಂದಾಜಿನ ಜೊತೆ ಹೋಲಿಸಿ ನೋಡುವ ಈ ಪರಿ ಮೆಚ್ಚಬೇಕಾದ್ದೇ.

ಬೆಲೆಯೇರಿಕೆ ವಿಪರೀತ ಏರಿರುವಾಗ ಸ್ವತಃ ಸರಕಾರವೇ ಅನೇಕ ವಸ್ತುಗಳ ಬೆಲೆ ಏರಿಕೆ ಮಾಡಿರುವಾಗ ಅವೆಲ್ಲದರ ಪರಿಣಾಮ ಈ ವೆಚ್ಚದ ಮೇಲೆ ಆಗುವುದರಿಂದ ಈ ಎಲ್ಲಾ ಯೋಜನೆಗಳ ವೆಚ್ಚವೂ ಹೆಚ್ಚುತ್ತಿವೆ. ಹೀಗಾಗಿ

ಪಿ.ಡಿ. ಸಂಪಾದಕೀಯ

ಮೇಲೆ ಕೇಂದ್ರ ಚುನಾವಣಾ ಆಯೋಗದ ಆಪಾದನೆಯನ್ನು ಪ್ರಸ್ತಾಪಿಸುವುದು ನರಸಿಂಹರಾವ್ ಸರಕಾರಕ್ಕೆ ಮುಜುಗರ ಉಂಟು ಮಾಡುವುದಿಲ್ಲವೇ?

ರಾಷ್ಟ್ರಪತಿ ಭಾಷಣ ಗಾಳಿಯಲ್ಲಿ ತೇಲಬಿಟ್ಟಿರುವ ಹುಲ್ಲುಕಡ್ಡಿ. ಇದರಿಂದ ಗಾಳಿ ಯಾವ ದಿಕ್ಕಿನಲ್ಲಿ ಬೀಸುತ್ತಿದೆ ಎಂದು ತಿಳಿಯುವುದು ಕಷ್ಟವಲ್ಲ. ಆದ್ದರಿಂದ ದೇಶದ ಜನಗಳು ತೋಳು ಮಡಿಸಿ ಸಮರಕ್ಕೆ ಸಿದ್ಧರಾಗಬೇಕು - ತಮ್ಮ ಜೀವ - ಜೀವನದ ಮೇಲೆ ಬರಲಿರುವ ಧಾಳಿಗಳನ್ನು ಎದುರಿಸಲು ಸಿದ್ಧರಾಗಬೇಕು.

ನಿಜದಲ್ಲಿ ಹಿಂದಿನ ವರ್ಷದ ಸಾಧನೆಯನ್ನು ಅನೇಕ ರಂಗಗಳಲ್ಲಿ ಸಾಧಿಸಲಾಗುವುದಿಲ್ಲ.

ಹೆಚ್ಚು ಹಣ ನೀಡಿಕೆಯ ವಿಷಯದಲ್ಲಿ ಇನ್ನೂ ಒಂದು ಟೊಳ್ಳಿದೆ. ತೆರಿಗೆಯನ್ನು ಬಹಳ ಕಡಿಮೆ ಮಾಡಿದ್ದರೂ ಹೆಚ್ಚು ತೆರಿಗೆ ಸಂಗ್ರಹವಾಗುತ್ತದೆಂದು ನಿರೀಕ್ಷಿಸಲಾಗಿದೆ. ಇದು ನಿಜವಾಗುತ್ತದೆಯೋ ಎಂಬುದರ ಮೇಲೆ ಅವಲಂಬಿತವಾಗಿದೆ ಈ ಹೆಚ್ಚು ಹಣ ನೀಡಿಕೆ.

ಬ್ಯಾಂಕ್ - ಜೀವವಿಮೆಗಳ ಖಾಸಗೀಕರಣ

ಇನ್ನು ಬ್ಯಾಂಕ್ ಮತ್ತು ಜೀವವಿಮಾ ನಿಗಮಗಳನ್ನು ಹಂತ ಹಂತವಾಗಿ ಖಾಸಗಿಯವರ ವಶಕ್ಕೊಪ್ಪಿಸುವ ಸರಕಾರದ ಯೋಚನೆ ಬಜೆಟ್ ನೀತಿಯ ಘೋಷಣೆಯಿಂದ ಭಾರತದ ಜನಸಾಮಾನ್ಯರ ಗಳಿಕೆ - ಉಳಿಕೆಗಳು ಈಗ ವಿದೇಶೀ ಬಂಡವಾಳದಾರರ, ದೇಶಿ ಬಂಡವಾಳದಾರರ ಅಧೀನ. ಅವರ ಖಾಸಗಿ ಲಾಭಕ್ಕಾಗಿ ವಿನಿಯೋಗ. ಲಕ್ಷಾಂತರ ಉದ್ಯೋಗಿಗಳಿಗೆ ಕಷ್ಟದಿಂದ ಗಳಿಸಿದ ಹಕ್ಕುಗಳ ನಾಶ.

ನಮ್ಮ ಕುಡಿಯುವ ನೀರಿನ ಯೋಜನೆ ಮುಂತಾದ ಆರೋಗ್ಯ ರಕ್ಷಣೆಯ ಯೋಜನೆಯಲ್ಲಿ ಜೀವ ವಿಮಾ ನಿಗಮ ಹಣ ಹೂಡುತ್ತಿದೆ. ಬ್ಯಾಂಕ್‌ಗಳು ಬಡ ಭಾರತೀಯನಿಗೆ ಸೀಮಿತ ಪ್ರಮಾಣದಲ್ಲಾದರೂ ಲಭ್ಯವಾಗಿವೆ. ಹಳ್ಳಿಗಳ ಕಡೆಗೆ ಮುಖ ಮಾಡಿವೆ.

ಬ್ಯಾಂಕ್ ರಾಷ್ಟ್ರೀಕರಣ, ಜೀವ ವಿಮಾ ರಾಷ್ಟ್ರೀಯಕರಣಗಳು ಭಾರತದಲ್ಲಿ ಒಂದು ದೊಡ್ಡ ಪ್ರತಿಷ್ಠೆಯ ಪ್ರಶ್ನೆಗಳಾಗಿದ್ದವು ಹಾಗೂ ಭಾರತದ ಜನಸಾಮಾನ್ಯರಿಗೆ ಪ್ರಯೋಜನಕಾರಿಯಾಗಿದ್ದವು. ಅದರ ಮೇಲೆ ಗದಾಪ್ರಹಾರ ಆರಂಭವಾಗಿದೆ.

ಒಟ್ಟಿನಲ್ಲಿ ಪ.ಬಂಗಾಳದ ಮುಖ್ಯಮಂತ್ರಿ ಕಾಂ.ಜ್ಯೋತಿಬಸುವರು ಹೇಳಿರುವಂತೆ ಈ ಬಜೆಟ್ ರಾವ್ ಸರಕಾರದ ಆರ್ಥಿಕ ನೀತಿಗಳ ಅಪಾಯದ ಬಗ್ಗೆ ಒಂದು ಒಳನೋಟವನ್ನು ನೀಡುತ್ತದೆ. ಅದರ ಐಎಂಎಫ್‌ಗೆ ಶರಣಾಗಿರುವುದನ್ನು ಪ್ರತಿಫಲಿಸುತ್ತದೆ. ಬರುವ ದಿನಗಳಲ್ಲಿ ಬಜೆಟ್ ಮೂಡಿಸಿರುವ ಭ್ರಮೆಗಳು ಹರಿಯುತ್ತಾ ಜನಸಾಮಾನ್ಯರಿಗೆ ಪೆಟ್ಟು ಬಡಿಯಲಾರಂಭಿಸುತ್ತದೆ..... ರಾವ್ ಸರಕಾರದ ದೇಶವನ್ನೇ ಕೊಲ್ಲುವ ನೀತಿಗಳ ವಿರುದ್ಧ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಪ್ರಚಾರ ಆಗಲೇ ಆರಂಭವಾಗಿದೆ. ಮುಂದೆ ಅದು ದೇಶವ್ಯಾಪಿಯಾಗಿ ತೀಕ್ಷ್ಣ ಹರಿತವನ್ನು ಪಡೆಯುತ್ತದ.

ಕೋಮುವಾದ-ವಿರೋಧಿ ದೆಹಲಿ ರ್‍ಯಾಲಿ

ಏಪ್ರಿಲ್ 14ರಂದು

13 ಬಿಜೆಪಿಯೇತರ ವಿರೋಧ ಪಕ್ಷಗಳು ಹಾಗೂ ಸುಮಾರು 40 ಸಾಮಾಜಿಕ ಸಂಘಟನೆಗಳು ರಚಿಸಿಕೊಂಡ ರಾಷ್ಟ್ರೀಯ ಏಕತಾ ಆಂದೋಲನ ದೇಶವ್ಯಾಪಿ ಆಂದೋಲನದ ಭಾಗವಾಗಿ ಮಾರ್ಚ್ 30ರಂದು ದೆಹಲಿಯಲ್ಲಿ ನಡೆಸಬೇಕೆಂದಿದ್ದ ಬೃಹತ್ ರ್‍ಯಾಲಿಯನ್ನು ಈಗ ಏಪ್ರಿಲ್ 14ರಂದು ನಡೆಸಲಾಗುವುದು. ಕೋಮುವಾದ- ವಿರೋಧಿ ಪ್ರಚಾರದ ಪ್ರಗತಿಯನ್ನು ವಿಶ್ಲೇಷಿಸಿದ ನಂತರ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ. ದೇಶದೆಲ್ಲೆಡೆ ಈ ಆಂದೋಲನ-ಪ್ರಚಾರ ತೃಪ್ತಿಕರವಾಗಿ ಸಾಗುತ್ತಿದೆ. ಉತ್ತರ ಪ್ರದೇಶದಲ್ಲಿ ಮಾತ್ರ ಸರಕಾರದ ನಿರ್ಬಂಧ, ಅಡೆತಡೆಗಳಿಂದಾಗಿ ಅದು ವ್ಯಾಪಕವಾಗಿಲ್ಲ. ಈ ಎರಡು ವಾರಗಳಲ್ಲಿ ಈ ಆಂದೋಲನವನ್ನು ಮತ್ತಷ್ಟು ವ್ಯಾಪಕಗೊಳಿಸಿ ದೆಹಲಿ ರ್‍ಯಾಲಿಗೆ ಸಿದ್ಧತೆ ನಡೆಯುತ್ತದೆ ಎಂದು ತಿಳಿದು ಬಂದಿದೆ.

ಬಂಗಾರಪೇಟೆಯಲ್ಲಿ ಎಸ್‌ಎಫ್‌ಐ ಸಭೆ

ಬಂಗಾರಪೇಟೆ : ಎಸ್‌ಎಫ್‌ಐ ಬಂಗಾರಪೇಟೆ ಘಟಕದ ಸರ್ವ ಸದಸ್ಯರ ಸಭೆಯು ಫೆ. 17ರಂದು ಕಿಂಗ್ ಎಡ್ವರ್ಡ್ ಹಾಲ್‌ನಲ್ಲಿ ನಡೆಯಿತು.

ಸ್ಥಳೀಯ ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸರಕಾರಿ ಕಿರಿಯ ಕಾಲೇಜುಗಳ ಸುಮಾರು 60 ವಿದ್ಯಾರ್ಥಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.

ಮನ್ಸೂರ್ ಅಹ್ಮದ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಎಸ್‌ಎಫ್‌ಐನ ಕೋಲಾರ ಜಿಲ್ಲಾಧ್ಯಕ್ಷ ಎಂ.ವಿ. ನಾರಾಯಣಸ್ವಾಮಿ ಮುಖ್ಯ ಭಾಷಣ ಮಾಡಿ ಎಸ್‌ಎಫ್‌ಐನ ಸಂವಿಧಾನ, ಕಾರ್ಯಕ್ರಮ, ಗುರಿ ಮತ್ತು ಉದ್ದೇಶಗಳನ್ನು ವಿವರಿಸಿದರು. ಪಠ್ಯಪುಸ್ತಕಗಳಲ್ಲಿ ಯಾವ ರೀತಿ ಹಳೇ ಕಂದಾಚಾರಗಳ ಬಗ್ಗೆ ಹೇಳಲಾಗುತ್ತಿದೆ ಎಂಬುದರ ಬಗ್ಗೆ ವಿವರಿಸಿದರು.

ಡಿವೈಎಫ್‌ಐನ ಕೋಲಾರ ಜಿಲ್ಲಾ ಜಂಟಿ ಕಾರ್ಯದರ್ಶಿ ಎ.ರವಿಚಂದರ್ ಬಾಬು ಶುಭ ಕೋರಿ ಮಾತನಾಡಿ ಎಸ್‌ಎಫ್‌ಐ ಮತ್ತು ಎಬಿವಿಪಿ ಸಂಘಟನೆಗಳ ಮಧ್ಯೆ ಇರುವ ವ್ಯತ್ಯಾಸಗಳನ್ನು ವಿವರಿಸಿದರು. ಕೋಮುವಾದದ ಅಪಾಯದ ಬಗ್ಗೆ ವಿದ್ಯಾರ್ಥಿಗಳು ಎಚ್ಚರದಿಂದ ಇರಬೇಕಾದ ಅವಶ್ಯಕತೆಯನ್ನು ಹೇಳಿದರು.

9 ವಿದ್ಯಾರ್ಥಿಗಳು ಚರ್ಚೆಯಲ್ಲಿ ಭಾಗವಹಿಸಿ ಎಸ್‌ಎಫ್‌ಐ ಸಂಘಟನೆಯ ಬಗ್ಗೆ ತಮಗಿದ್ದ ಅನುಮಾನಗಳನ್ನು ಪರಿಹಾರ ಮಾಡಿಕೊಂಡರು.

ಸುಳ್ಳರನ್ನು ನಂಬುವುದು ಹೇಗೆ?

ಸಂಸತ್ತಿನಲ್ಲಿ ನಮ್ಮವರು - ವಿಶ್ವ

ಸಂಸತ್ತಿನ ಮುಂಗಡ ಪತ್ರ ಅಧಿವೇಶನ ಫೆಬ್ರವರಿ 22ರಂದು ಆರಂಭವಾಯಿತು. ಸಂಸತ್ತಿನ ಉಭಯ ಸದನಗಳ ಸಂಯುಕ್ತ ಅಧಿವೇಶನದಲ್ಲಿ ರಾಷ್ಟ್ರಪತಿಯವರು ಅಂದು ಭಾಷಣ ಮಾಡಿದರು.

ದೇಶ ಸ್ವಾತಂತ್ರ್ಯ ಪಡೆದ ನಂತರದ ಅವಧಿಯಲ್ಲಿ ಸಂಭವಿಸಿದ ಭೀಕರ ಕೋಮು! ಹಿಂಸಾಚಾರದ ಹಿನ್ನೆಲೆಯಲ್ಲಿ ಆರಂಭವಾಗಿರುವ ಸಂಸತ್ ಅಧಿವೇಶನ ಮಹತ್ವದ್ದಾಗಿದೆ.

ಕೋಮುವಾದಿ ಶಕ್ತಿಗಳ ಸಂಚುಗಳನ್ನು ಬಯಲುಗೊಳಿಸಿ ಸಂಸತ್ತಿನಲ್ಲಿಯೂ ಅವನ್ನು ಪ್ರತಿನಿಧಿಸುವವರ ಮುಖವಾಡವನ್ನು ಕಿತ್ತೊಗೆಯಲು ಈ ಅಧಿವೇಶನ ಉತ್ತಮ ಅವಕಾಶ ಆಗಲಿದೆ. ಕೋಮು ಸೌಹಾರ್ದ-ರಾಷ್ಟ್ರೀಯ ಸಮಗ್ರತೆಗಾಗಿನ ಸಂಘರ್ಷ ದೇಶದ ಸರ್ವೋನ್ನತ ಜನಪ್ರತಿನಿಧಿಗಳ ವೇದಿಕೆಯನ್ನೇ ಪ್ರವೇಶಿಸಿದೆ.....

ಫೆ. 23 : ಫೆಬ್ರವರಿ 25ರಂದು ತಾನು ದೆಹಲಿಯಲ್ಲಿ ನಡೆಸಲು ಉದ್ದೇಶಿಸಿದ್ದ ರ್‍ಯಾಲಿಯನ್ನು ನಿಷೇಧಿಸಿ ಸರಕಾರ ಹೊರಡಿಸಿದ್ದ ಆಜ್ಞೆ ಸಂಬಂಧದಲ್ಲಿ ಬಿಜೆಪಿ ಲೋಕಸಭೆಯಲ್ಲಿ ನಿಲುವಳಿ ಗೊತ್ತುವಳಿಯೊಂದನ್ನು ಸಲ್ಲಿಸಿತ್ತು. ಸ್ಪೀಕರ್ ಅದಕ್ಕೆ ಅವಕಾಶ ನೀಡಿರಲಿಲ್ಲ. ಆದರೆ 193ನೇ ನಿಯಮದಡಿ ವಿಶೇಷ ಚರ್ಚೆಗೆ ಅವಕಾಶ ನೀಡಿದ್ದರು.

ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಸಿಪಿಐ(ಎಂ) ಗುಂಪಿನ ನಾಯಕ ಸೋಮನಾಥ ಚಟರ್ಜಿ ಕೋಮುವಾದಿಗಳ ದುಷ್ಟಕೂಟದ ಮೇಲೆ ಉಗ್ರ ಪ್ರಹಾರ ಮಾಡಿದರು. ಎಲ್ಲಾ ಜಾತ್ಯಾತೀತ ಪಕ್ಷಗಳು ಒಗ್ಗಟ್ಟಾಗಬೇಕು. ಭಾರತೀಯ ರಾಜಕಾರಣದಲ್ಲಿ ಬಿಜೆಪಿ ಹರಡಿರುವ 'ಕೋಮುವಾದಿ ಕ್ಯಾನ್ಸರ್' ವಿರುದ್ಧ ಹೋರಾಡಬೇಕು 'ಎಂದು ಅವರು ಮನವಿ ಮಾಡಿದರು. ದೇಶದ ಬಹುಸಂಖ್ಯೆಯ ಜನರು ಜಾತ್ಯಾತೀತರಾಗಿದ್ದು ರಾಜಕೀಯ ಲಾಭಕ್ಕಾಗಿ ರಾಜಕೀಯದಲ್ಲಿ ಧರ್ಮವನ್ನು ಬೆರೆಸುವುದನ್ನು ತಡೆಯಲು ಜನರನ್ನು ಅಣಿನೆರೆಸಬೇಕು ಎಂದು ಕೋರಿದರು.

ಈಗಿನ ಪರಿಸ್ಥಿತಿಗೆ ಬಿಜೆಪಿಯೇ ಕಾರಣ ಎಂದು ದೂಷಿಸಿದ ಚಟರ್ಜಿ 'ಹಿಂದುತ್ವ'ದ ಹೆಸರಿನಲ್ಲಿ ಭಾರತ ಧರ್ಮಾಧಾರಿತ ಆಡಳಿತವನ್ನು ಹೊಂದಲಾಗದು ಎಂದು ಹೇಳಿದರು. ಫೆ. 25ರ ರ್‍ಯಾಲಿ ಶಾಂತಿಯುತವಾಗಿರುತ್ತದೆ ಎಂದು ಎಲ್.ಕೆ.ಅಡ್ವಾಣಿ ಹೇಳಿದ್ದನ್ನು ಪ್ರಸ್ತಾವಿಸಿದ ಚಟರ್ಜಿ, ಇದು ಇನ್ನೊಂದು ಆಶ್ವಾಸನೆಯಷ್ಟೇ ಎಂದು ಹೇಳಿದರು. ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ಶಾಂತಿಯುತ ಕಾರ್ಯಕ್ರಮ ನಡೆಸುವುದಾಗಿ ಅದು ಭರವಸೆ ಕೊಟ್ಟಿತ್ತು. ಆದರೆ ಬಾಬರಿ ಮಸೀದಿಯನ್ನು ನಾಶ ಮಾಡಲಾಯಿತು ಎಂದು ಹೇಳಿದರು.

ರಾಜಕೀಯ ಉದ್ದೇಶಗಳಿಗಾಗಿ ಸಂವಿಧಾನವನ್ನೇ ಹಾಳುಗೆಡವಲು ಬಿಜೆಪಿ ಯತ್ನಿಸುತ್ತಿದೆ ಎಂದರು. ಅಯೋಧ್ಯೆಗೆ ಸಂಬಂಧಿಸಿ ಸುಪ್ರಿಂ ಕೋರ್ಟ್ ನೀಡಿದ ಆಜ್ಞೆಗಳನ್ನು ಉಲ್ಲಂಘಿಸಿದ ಬಿಜೆಪಿಗೆ ಸಂವಿಧಾನದ ಮೇಲಿನ ಪ್ರೀತಿ ಎಲ್ಲಿದೆ ಎಂದು ಪ್ರಶ್ನಿಸಿದರು.

ರಾಜಧಾನಿಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ರ್‍ಯಾಲಿಗಳನ್ನು ಸಾರಾಸಗಟಾಗಿ ನಿಷೇಧಿಸಿದ ಕೇಂದ್ರದ ಕ್ರಮವನ್ನು ಅವರು ಖಂಡಿಸಿದರು. ಜಾತ್ಯಾತೀತತೆ ಹಾಗೂ ರಾಷ್ಟ್ರೀಯ ಏಕತೆಗಾಗಿ ತಮ್ಮ ಶಕ್ತಿ ಪ್ರದರ್ಶನಕ್ಕೆ ಜಾತ್ಯಾತೀತ ಶಕ್ತಿಗಳಿಗೆ ಅವಕಾಶ ನೀಡಬೇಕಿತ್ತು ಎಂದು ಅವರು ಪ್ರತಿಪಾದಿಸಿದರು.

ಕೋಮು ಸಂಸ್ಥೆಗಳ ನಿಷೇಧದ ಜಾರಿಗೆ ಸರಕಾರ ಏನು ಕ್ರಮಗಳನ್ನು ಕೈಗೊಂಡಿದೆ ಎಂದು ಚಟರ್ಜಿ ಪ್ರಶ್ನಿಸಿದರು.

ಅಂತ್ಯದ ಆರಂಭ

ಬಿಜೆಪಿಗೆ ಯಾವುದು ಅನುಕೂಲವೋ ಅದು ದೇಶಕ್ಕೆ ವಿನಾಶಕಾರಿಯಾದುದು ಎಂದು ಅಟಲ್ ಬಿಹಾರಿ ವಾಜಪೇಯಿಯವರೇ ಒಪ್ಪಿಕೊಂಡಿದ್ದಾರೆ. ನಿಮಿಷಗಳ ಎಣಿಕೆ ಆರಂಭವಾಗಿದೆ ಎಂದೂ ವಾಜಪೇಯಿ ಹೇಳಿದ್ದಾರೆ ಎಂದು ಹೇಳಿದ ಸೋಮನಾಥ ಚಟರ್ಜಿ 'ಆದರೆ, ಅದು ಈ ದೇಶದಲ್ಲಿ ಕೋಮು ಶಕ್ತಿಗಳ ಅಂತ್ಯದ ಕ್ಷಣಗಳ ಎಣಿಕೆಯಾಗಿದೆ' ಎಂದು ಆತ್ಮವಿಶ್ವಾಸದಿಂದ ಹೇಳಿದರು.

ಸಂಸತ್ತಿನ ಬಗ್ಗೆ ಗೌರವವಿಲ್ಲದವರು.......

ಫೆ. 25ರಂದು ದೆಹಲಿಯಲ್ಲಿ ಭಾರಿ ದೊಡ್ಡ ರ್‍ಯಾಲಿ ನಡೆಸುವುದಾಗಿ ಬಿಜೆಪಿ ಭರ್ಜರಿಯಾಗಿ ಕೊಚ್ಚಿಕೊಂಡಿತ್ತು. ಆದರೆ ಅದು ದಯನೀಯ ಸೋಲು ಕಂಡಿದೆ. ಇದನ್ನು ಸಹಿಸಲಾಗದೆ ಬಿಜೆಪಿ ಸಂಸತ್ತಿನಲ್ಲಿ ಕಲಾಪಗಳನ್ನು ತಡೆಗಟ್ಟುವ ರೀತಿಯಲ್ಲಿ ಗೌಜುಗದ್ದಲ ಎಬ್ಬಿಸಿದರು.

ಫೆ. 26ರಂದು ಈ ಸಂಬಂಧ ಲೋಕಸಭೆಯಲ್ಲಿ ಬಿಜೆಪಿಯವರು ಮಾತನಾಡುತ್ತಿದ್ದಾಗ ಮಧ್ಯಪ್ರವೇಶಿಸಿದ ಸಿಪಿಐ(ಎಂ) ಸದಸ್ಯ ಟಿ.ಬಿ. ತೋಪ್‌ದಾರ್ 'ನಿಮಗೆ ಸಂಸತ್ತಿನ ಬಗ್ಗೆ ಗೌರವವಿಲ್ಲ' ಎಂದು ಬಿಜೆಪಿಯನ್ನು ಛೇಡಿಸಿದರು.

ಪೋಲೀಸರು ನಡೆಸಿದರೆನ್ನಲಾದ ದೌರ್ಜನ್ಯಗಳ ಬಗ್ಗೆ ಚರ್ಚೆಗಾಗಿ ಪ್ರಶ್ನೋತ್ತರ ಅವಧಿಯನ್ನು ರದ್ದುಪಡಿಸಬೇಕೆಂಬ ಬೇಡಿಕೆಗೆ ಎಡ ಪಕ್ಷಗಳು ಮತ್ತು ಜನತಾದಳದ ಬೆಂಬಲ ಪಡೆಯಲು ಬಿಜೆಪಿ ನಡೆಸಿದ ಯತ್ನ ವಿಫಲವಾಗಿದೆ.

ಕಾಶ್ಮೀರ : ಜಿಲ್ಲಾ ಮಂಡಳಿಗೆ ಹೆಚ್ಚಿನ ಅಧಿಕಾರಕ್ಕೆ ಸಲಹೆ

ಫೆ. 25: ಜಮ್ಮು ಮತ್ತು ಕಾಶ್ಮೀರದಲ್ಲಿ ರಾಷ್ಟ್ರಪತಿ ಆಡಳಿತವನ್ನು ಮಾರ್ಚ್ ಮೂರರಿಂದ ಇನ್ನೂ ಆರು ತಿಂಗಳ ಕಾಲ ವಿಸ್ತರಿಸುವ ಸಂಬಂಧದಲ್ಲಿ ಗೃಹಸಚಿವರು 25ರಂದು ಲೋಕಸಭೆಯಲ್ಲಿ ನಿರ್ಣಯವೊಂದನ್ನು ಮಂಡಿಸಿದರು.

ನಿರ್ಣಯದ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಸಿಪಿಎಂ ಉಪನಾಯಕ ಸೈಫುದ್ದೀನ್ ಚೌಧರಿ, ಕಣಿವೆಯಲ್ಲಿನ ಪರಿಸ್ಥಿತಿಯನ್ನು ಬಳಸಿಕೊಳ್ಳಲು ಕೋಮು ಶಕ್ತಿಗಲು ಪ್ರಯತ್ನಿಸುತ್ತಿವೆ ಎಂದು ಹೇಳಿದರು. ರಾಜ್ಯದಲ್ಲಿನ ಜಿಲ್ಲಾ ಸಲಹಾ ಮಂಡಳಿಗಳಿಗೆ ಇನ್ನೂ ಹೆಚ್ಚಿನ ಅಧಿಕಾರಗಳನ್ನು ನೀಡಬೇಕು ಎಂದು ಅವರು ಸಲಹೆ ಮಾಡಿದರು.

[illegible] ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಿಪ್ಪಣ್ಣ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462. ಸಂಪಾದಕರು : ಪಿ.ರಾಮಚಂದ್ರರಾವ್